ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 27 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 41 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ 80ನೇ ಜನ್ಮದಿನ ವಿಜೃಂಭಣೆ ಆಚರಣೆ

ಕಿರಿಯ ಶ್ರೀಗಳಾದ ಶ್ರೀದತ್ತ ವಿಜಯಾನಂದ ತೀರ್ಥರಿಂದ ಪ್ರತ್ಯಕ್ಷ ಪಾದಪೂಜೆ

ಮೈಸೂರು,ಮೇ 26(ಪಿಎಂ)– ದೇಶ–ವಿದೇಶಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತರು, ನಾನಾ ಗಣ್ಯರ ನಡುವೆ ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನಾಚರಣೆ ಗುರುವಾರ ವಿಜೃಂಭಣೆಯಿಂದ ನೆರವೇರಿತು.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಆಶ್ರಮದ ನಾದ ಮಂಟಪದಲ್ಲಿ ಹಮ್ಮಿಕೊಂಡಿದ್ದ ದತ್ತಪೀಠದ ಸಂಸ್ಥಾಪಕರಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಜನ್ಮದಿನೋತ್ಸವದಲ್ಲಿ ಶ್ರೀಗಳ ಪ್ರತ್ಯಕ್ಷ ಪಾದಪೂಜೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ಅಪಾರ ಭಕ್ತ ಸಮೂಹದ ನಡುವೆ ವೈಭವದಿಂದ ಜರುಗಿತು.

ಸ್ವಾಮೀಜಿಯವರಿಗೆ ಆಶ್ರಮದ ಕಿರಿಯ ಶ್ರೀಗಳಾದ ಶ್ರೀದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಪಾದಪೂಜೆ ನೆರವೇರಿಸಿದರು. ಭಕ್ತ ಸಮೂಹದ ಭಕ್ತಿಯ ಜೈಕಾರದೊಂದಿಗೆ ಸ್ವಾಮೀಜಿಯವರು ಪಾದಪೂಜೆಯನ್ನು ಸ್ವೀಕರಿಸಿದರು. ದತ್ತಾತ್ರೇಯರಿಗೆ ಪ್ರಿಯವಾದ ಔದುಂಬರ ವೃಕ್ಷದಿಂದ ಸಿದ್ಧಪಡಿಸಿರುವ ಸಿಂಹಾಸನದಲ್ಲಿ ಆಸೀನರಾಗಿದ್ದ ಸ್ವಾಮೀಜಿಯವರ ಪಾದಗಳಿಗೆ ಆಶ್ರಮದ ವಿಧಿವಿಧಾನಗಳಂತೆ ಕಿರಿಯ ಶ್ರೀಗಳು ▶ 3ನೇ ಪುಟಕ್ಕೆ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಭೇಟಿಯಾದ ತೆಲಂಗಾಣ ಸಿಎಂ ಕೆ.ಚಂದ್ರಶೇಖರ ರಾವ್ ಮನವಿ

ಗೌಡರೇ, ತೃತೀಯ ರಂಗದ ನೇತೃತ್ವ ವಹಿಸಿ...



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಭೇಟಿ ಮಾಡಿ, ಚರ್ಚಿಸಿದರು. ಚಿತ್ರದಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಇದ್ದಾರೆ.

ಬೆಂಗಳೂರು,ಮೇ 26 (ಕೆಎಂಶಿ)–ಬಿಜೆಪಿ, ಕಾಂಗ್ರೆಸ್‌ಗೆ ಪರ್ಯಾಯವಾಗಿ ತೃತೀಯ ರಂಗ ಸ್ಥಾಪಿಸಿ, ಅದರ ನಾಯಕತ್ವ ವಹಿಸಿಕೊಳ್ಳುವಂತೆ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರಿಗೆ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಮನವಿ ಮಾಡಿದ್ದಾರೆ.

ದೇವೇಗೌಡರನ್ನು ಗುರುವಾರ ಅವರ ನಿವಾಸದಲ್ಲಿ ಭೇಟಿ ಮಾಡಿ, ಸುಮಾರು 2 ಗಂಟೆಗಳ ಕಾಲ ಸುದೀರ್ಘ ಚರ್ಚೆ ನಡೆಸಿ, ಪರ್ಯಾಯ ರಂಗ ರಚಿಸಲು ತಮ್ಮ ಬೆಂಬಲ ಬೇಕು ಎಂದು ಮನವಿ ಮಾಡಿಕೊಂಡರು. ರಾಷ್ಟ್ರದಲ್ಲಿ ಪ್ರಾದೇಶಿಕ ಪಕ್ಷಗಳೇ ಬಹು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿವೆ. ಈ ಪ್ರಾದೇಶಿಕ ಪಕ್ಷಗಳು ಒಂದೇ ಸೂರಿನಡಿ ಸೇರಿ ಈ ರಾಷ್ಟ್ರೀಯ ಪಕ್ಷಗಳ ಜೊತೆ ಹೋರಾಟ ನಡೆಸಬೇಕು. ಇತ್ತೀಚಿನ ದಿನಗಳಲ್ಲಿ ಪ್ರಾದೇಶಿಕ ಪಕ್ಷಗಳನ್ನು ಮುಗಿಸುವ ▶ 8ನೇ ಪುಟಕ್ಕೆ

ನಮಗೆ ಉಜ್ವಲ್ ಹಿಂದೂಸ್ತಾನ್ ಬೇಕಿದೆ

ಕೇಂದ್ರದ ಕಾರ್ಯ ವೈಖರಿಗೆ ಕೆಸಿಆರ್ ಕಿಡಿ

ಬೆಂಗಳೂರು, ಮೇ 26– ಉಜ್ವಲ್ ಹಿಂದೂಸ್ತಾನ್ ನಮಗೆ ಬೇಕಿದೆ. ಜನರು ಈ ನಿಟ್ಟಿನಲ್ಲಿ ಗಮನಹರಿಸಬೇಕಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರರಾವ್ (ಕೆಸಿಆರ್) ಪರೋಕ್ಷವಾಗಿ ಕೇಂದ್ರ ಸರ್ಕಾರದ ವಿರುದ್ಧ ಕುಟುಕಿದ್ದಾರೆ.

ದೇವೇಗೌಡರ ಜೊತೆ ರಾಜಕೀಯ ವಿದ್ಯಮಾನಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ನಂತರ ಮಾಧ್ಯಮಗಳ ಜೊತೆ ಮಾತನಾಡಿದರು. ದೇಶದ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ. ಯುವಶಕ್ತಿ ಇದ್ದರೂ, ದೇಶದಲ್ಲಿ ▶ 8ನೇ ಪುಟಕ್ಕೆ

ಮೈಸೂರು ನಗರದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳು ಸಾಕಷ್ಟಿವೆ. ಕೆಲ ತಿಂಗಳ ಹಿಂದೆ ಇಟ್ಟಿಗೆಗೂಡಿನಲ್ಲಿ ಮನೆಯೊಂದು ಕುಸಿದಿತ್ತು. ಆ ಮನೆಯಲ್ಲಿದ್ದ ವೃದ್ಧೆಯರಿಬ್ಬರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದರು. ಇತ್ತೀಚೆಗೆ ವಾಣಿ ವಿಲಾಸ ಮಾರುಕಟ್ಟೆ ಮಳಿಗೆಯ ಸಜ್ಜಾ ಕುಸಿದು ಬಿದ್ದಿತ್ತು. ಆಗ ಆ ಸ್ಥಳದಲ್ಲಿ ಯಾರೂ ಇಲ್ಲದ ಕಾರಣ ಪ್ರಾಣಾಪಾಯ ಸಂಭವಿಸಿರಲಿಲ್ಲ. ಇಂತಹ ಘಟನೆಗಳು ಮರುಕಳಿಸುತ್ತಿದ್ದರೂ ಆಡಳಿತ ವ್ಯವಸ್ಥೆ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಶಿಥಿಲಾವಸ್ಥೆಯಲ್ಲಿರುವ ಖಾಸಗಿ ಕಟ್ಟಡಗಳ ತೆರವಿಗೆ ಸಂಬಂಧಪಟ್ಟ ಮಾಲೀಕರಿಗೆ ವರ್ಷದ ಹಿಂದೆಯೇ ನೋಟಿಸ್ ನೀಡಿರುವ ನಗರ ಪಾಲಿಕೆ, ಆ ವಿಚಾರವನ್ನು ಮರೆತೇ ಬಿಟ್ಟಿದೆ. ಮಳೆಯಲ್ಲಿ ಮಾತ್ರವಲ್ಲ ಯಾವುದೇ ಸಂದರ್ಭದಲ್ಲಾದರೂ ಇಂತಹ ಕಟ್ಟಡಗಳ ಬಗ್ಗೆ ಎಚ್ಚರಿಕೆ ವಹಿಸುವುದು ಅನಿವಾರ್ಯ.

ಮೈಸೂರಲ್ಲಿ ಕುಸಿದು ಬಿತ್ತು ಮತ್ತೊಂದು ಹಳೆಯ ಕಟ್ಟಡ

● ತಪ್ಪಿದ ಭಾರೀ ಅನಾಹುತ ● ಸ್ಥಳಕ್ಕೆ ಶಾಸಕ ನಾಗೇಂದ್ರ, ಪಾಲಿಕೆ ಆಯುಕ್ತ ಭೇಟಿ



ಮೈಸೂರು,ಮೇ 26(ಎಂಟಿವೈ)– ಮೈಸೂರಿನ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಲ್ಯಾನ್ಸ್‌ಡೌನ್ ಕಟ್ಟಡ ಮತ್ತು ವಾಣಿ ವಿಲಾಸ ಮಾರುಕಟ್ಟೆಗಳು ಕುಸಿದು ಆತಂಕ ಸೃಷ್ಟಿಸಿದ ಬೆನ್ನಹಿಂದೆಯೇ ಮೈಸೂರಿನ ಶಿವರಾಂಪೇಟೆಯ ಹಳೆಯ ವಾಣಿಜ್ಯ ಕಟ್ಟಡವೊಂದು ಕುಸಿದು ಬಿದ್ದಿದೆ.

ಶಿವರಾಂಪೇಟೆಯ ವಿನೋಬಾ ರಸ್ತೆಯಿಂದ ದೇವರಾಜ ಅರಸ್ ರಸ್ತೆಗೆ ಸಂಪರ್ಕ ಕಲ್ಪಿಸುವ ಅಡ್ಡ ರಸ್ತೆಯಲ್ಲಿನ ಮೂಲೆಯಲ್ಲಿರುವ ಕಟ್ಟಡ ಕುಸಿದು ಬಿದ್ದಿದ್ದು, ತಾತ್ಕಾಲಿಕವಾಗಿ ಆ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ, ಜನ ಹಾಗೂ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಅದೃಷ್ಟವಶಾತ್ ಯಾರಿಗೂ ಅಪಾಯ ಸಂಭವಿಸಿಲ್ಲ. ತ್ರಿಪುರ ಭೈರವಿ ಮಠದ ವೀರಾಂಜನೇಯ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಈ ಕಟ್ಟಡವಿದೆ. ಕಳೆದ ಕೆಲ ವರ್ಷಗಳಿಂದ ನಿರ್ವಹಣೆ ಕೊರತೆಯಿಂದಾಗಿ ಈ ಕಟ್ಟಡ ಶಿಥಿಲಾವಸ್ಥೆ ತಲುಪಿತ್ತು. ಈ ಹಿಂದೆ ಕಟ್ಟಡದಲ್ಲಿ ಬಟ್ಟೆ ಅಂಗಡಿಯೊಂದು ಇತ್ತು. ಕಟ್ಟಡ ಶಿಥಿಲಗೊಂಡು ದುರ್ಬಲವಾಗುತ್ತಿದ್ದ ಕಾರಣ ವಹಿವಾಟು ಸ್ಥಗಿತಗೊಂಡಿತ್ತು. ▶ 8ನೇ ಪುಟಕ್ಕೆ

ಅಪಾಯಕಾರಿ ಕಟ್ಟಡಗಳ ಪಟ್ಟಿ ಮಾಡಿ

ಕುಸಿದಿರುವ ಕಟ್ಟಡವನ್ನು ಪೂರ್ಣ ಪ್ರಮಾಣದಲ್ಲಿ ತೆರವುಗೊಳಿಸಬೇಕು. ಆ ಕಾರ್ಯಾಚರಣೆ ಮುಗಿಯುವವರೆಗೂ ಕಟ್ಟಡದ ಸಮೀಪ ಯಾರೂ ನುಸುಳದಂತೆ ಕಟ್ಟೆಚ್ಚರ ವಹಿಸಬೇಕು. ಚಾಮರಾಜ ಕ್ಷೇತ್ರದಲ್ಲಿರುವ ಶಿಥಿಲ ಹಾಗೂ ಅಪಾಯಕಾರಿ ಕಟ್ಟಡಗಳ ಪಟ್ಟಿ ಮಾಡಬೇಕು. ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಮಾಲೀಕರಿಗೆ ನೋಟಿಸ್ ನೀಡಬೇಕು. ಸರ್ಕಾರಿ ಕಟ್ಟಡ ಅಥವಾ ಯಾವುದೇ ಕಟ್ಟಡಗಳಿರಬಹುದು. ಎಲ್ಲದಕ್ಕೂ ನೋಟಿಸ್ ಕೊಡಲೇಬೇಕು. ಹಳೇ ಕಟ್ಟಡಗಳಿಂದ ಯಾವುದೇ ಕಾರಣಕ್ಕೂ ಸಾವು ನೋವಿಗೆ ಕಾರಣವಾಗಬಾರದು. ಶಿಥಿಲಾವಸ್ಥೆ ಕಟ್ಟಡ ತೆರವು ಮಾಡದೇ ಅಪಾಯ ಸಂಭವಿಸಿದಲ್ಲಿ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು.

–ಎಲ್.ನಾಗೇಂದ್ರ, ಶಾಸಕ.

ಪಿಎಸ್ಐ ಹಗರಣ

ಹಿರಿಯ ಪೊಲೀಸ್ ಅಧಿಕಾರಿ ಅಮೃತ್‌ಪಾಲ್ ಬಂಧನ ಸಾಧ್ಯತೆ

ಬೆಂಗಳೂರು, ಮೇ 26 (ಕೆಎಂಶಿ)– ಪಿಎಸ್ಐ ಹಗರಣಕ್ಕೆ ಸಂಬಂಧಿಸಿದಂತೆ ಹಿರಿಯ ಪೊಲೀಸ್ ಅಧಿಕಾರಿ ಅಮೃತ್ ಪಾಲ್ ಅವರನ್ನು ಬಂಧಿಸುವ ಸಾಧ್ಯತೆ ಇದೆ. ಹಗರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಈಗಾಗಲೇ ಅಮೃತ್ ಪಾಲ್‌ರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಪೊಲೀಸ್ ನೇಮಕಾತಿ ಹುದ್ದೆಯಲ್ಲಿ ಅಮೃತ್ ಪಾಲ್ ಕಾರ್ಯನಿರ್ವಹಿಸುವಾಗ ಈ ಹಗರಣ ನಡೆದಿದೆ. ಇದರ ಬೆನ್ನಲ್ಲೇ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಇದೀಗ ಹಗರಣದಲ್ಲಿ ಅವರ ಪಾತ್ರ ಇದೆ ಎಂಬ ಸಂಶಯದ ಮೇಲೆ ವಿಚಾರಣೆ ನಡೆಸಿ, ಅವರನ್ನು ಬಂಧಿಸಲು ಸರ್ಕಾರದ ಅನುಮತಿ ಕೋರಲಾಗಿದೆ.

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಚುನಾವಣೆ

ಜೆಡಿಎಸ್ ಅಧಿಕಾರಕ್ಕೆ ಬರುವುದು, ಹೆಚ್‌ಡಿಕೆ ಸಿಎಂ ಆಗುವುದು ಗ್ಯಾರಂಟಿ

● ಜೆಡಿಎಸ್ ಅಭ್ಯರ್ಥಿ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಭವಿಷ್ಯ ನುಡಿದ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ● ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯರದ್ದು ದತ್ತು ತೆಗೆದುಕೊಂಡ ಮಗನ ಸ್ಥಿತಿ!
● ಪ್ರತಾಪ್‌ಸಿಂಹಗೆ ನರೇಂದ್ರ ಮೋದಿ ದೇವರಾದರೆ, ನಮಗೆ ದೇವೇಗೌಡರೇ ಮನೆ ದೇವರು!!



ಮೈಸೂರಿನ ಆಲಮ್ಮನ ಛತ್ರದ ಆವರಣದಲ್ಲಿ ಗುರುವಾರ ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಪರ ಚುನಾವಣಾ ಪ್ರಚಾರ ಸಭೆಯಲ್ಲಿ ನಾಯಕರ ಶಕ್ತಿ ಪ್ರದರ್ಶನ.

ಮೈಸೂರು, ಮೇ 26(ಆರ್‌ಕೆಬಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜಾತ್ಯತೀತ ಜನತಾ ದಳ ಅಭೂತಪೂರ್ವ ಗೆಲುವು ಸಾಧಿಸಲಿದ್ದು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮತ್ತೆ ಸಿಎಂ ಆಗುವುದು ಖಚಿತ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಭವಿಷ್ಯ ನುಡಿದರು.

ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಆಲಮ್ಮನ ಛತ್ರದ ಆವರಣದಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಪರ ಚುನಾವಣಾ ಪ್ರಚಾರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. 1996ರಲ್ಲಿ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿ ▶ 6ನೇ ಪುಟಕ್ಕೆ

ವಿಧಾನಸೌಧದಲ್ಲಿ ಕುಮಾರಸ್ವಾಮಿ ಕೂರಿಸಿ ಸಾಯ್ತೇನೆ...!: ಇಬ್ರಾಹಿಂ

ನನಗೆ ಯಾವುದೇ ಅಧಿಕಾರ ಬೇಡ. ಒಂದು ವಿಧಾನಪರಿಷತ್ ಸೀಟಿಗೆ ಅಂಟಿ ಕೂರುವುದಿಲ್ಲ. ಇರುವುದನ್ನೇ ತ್ಯಾಗ ಮಾಡಿ ಬಂದಿದ್ದೇನೆ. ಕೆಂಗಲ್ ಹನುಮಂತಯ್ಯ ಅವರು ಕಟ್ಟಿಸಿದ ವಿಧಾನ ಸೌಧದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕೂರಿಸಿ ಸಾಯುತ್ತೇನೆ ಎಂದು ಸಿ.ಎಂ.ಇಬ್ರಾಹಿಂ ಹೇಳಿದರು. ▶ 6ನೇ ಪುಟಕ್ಕೆ



ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು. ಈ ವೇಳೆ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಇದ್ದರು.

ಜನತಾ ಜಲಧಾರೆ ವೇಳೆ ಸಂಗ್ರಹಿಸಿದ ಪವಿತ್ರ ಗಂಗಾಜಲ ಕಳಸ ಪ್ರತಿಷ್ಠಾಪನೆ

- ವರ್ಷ ಕಾಲ ನಿರಂತರ ಪೂಜೆ
- ಪವಿತ್ರ ಜಲ ಸಂರಕ್ಷಣೆಗೆ ಕ್ರಮ
- 10 ಅಡಿ ಎತ್ತರದ 500 ಲೀಟರ್ ಸಾಮರ್ಥ್ಯದ ಕಳಸವಿದು
- ಭಾನುಪ್ರಕಾಶ್ ಶರ್ಮಾ ತಂಡದಿಂದ ವಿಶೇಷ ಪೂಜಾ ಕೈಂಕರ್ಯ



ಬೆಂಗಳೂರು, ಮೇ 26 (ಕೆಎಂಶಿ)–ಜನತಾ ಜಲಧಾರೆ ಗಂಗಾ ರಥಯಾತ್ರೆ ಅಂಗವಾಗಿ ರಾಜ್ಯದ ಎಲ್ಲಾ ಜೀವನದಿ ಹಾಗೂ ಉಪನದಿಗಳಿಂದ ಸಂಗ್ರಹ ಮಾಡಿದ ಪವಿತ್ರ ಗಂಗಾ ಜಲದ ಕಳಸ ಪ್ರತಿಷ್ಠಾಪನೆಯ ಮಹಾಪೂಜೆ ಹಾಗೂ ಕಳಸ ಪ್ರತಿಷ್ಠಾಪನೆ ಕಾರ್ಯಕ್ರಮ ಶಾಸ್ತ್ರೋಕ್ತವಾಗಿ ನಡೆಯಿತು.

ಜೆಡಿಎಸ್ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಇರಿಸಿರುವ ಬೃಹತ್ ಬ್ರಹ್ಮ ಕಳಸಕ್ಕೆ ಪಂಡಿತ ಡಾ.ಭಾನುಪ್ರಕಾಶ್ ಶರ್ಮಾ ನೇತೃತ್ವದ ಪಂಡಿತರ ತಂಡದಿಂದ ಪೂಜಾ ಕೈಂಕರ್ಯ ಜರುಗಿತು. 10 ಅಡಿ ಎತ್ತರದ 500 ಲೀಟರ್ ಜಲ ತುಂಬಲಿರುವ ಕಳಸವನ್ನು ಪ್ರತಿಷ್ಠಾಪನೆ ಮಾಡಲಾಯಿತು.

ಬೆಳಗ್ಗೆ 9 ಗಂಟೆಯಿಂದಲೇ ಗಣ ಹೋಮ, ನವಗ್ರಹ ಹೋಮ, ಗಂಗಾ ಪೂಜೆ, ಪರ್ಜನ್ಯ ಹೋಮ, ಪೂರ್ಣಾಹುತಿ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ಸಾಂಗೋಪಾಂಗವಾಗಿ ನೆರವೇರಿದವು. ಪೂಜೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಪಾಲ್ಗೊಂಡಿದ್ದರು.

ದೇಶದ 7 ಮಹಾನದಿಗಳ ಹೆಸರಿನಲ್ಲಿ ಇಡಲಾಗಿದ್ದ 15 ಪುಟ್ಟ ಕಳಸಗಳಿಗೆ ಕುಮಾರಸ್ವಾಮಿ ಶಾಸ್ತ್ರಬದ್ಧವಾಗಿ ಪೂಜೆ, ವಿಧಿ ವಿಧಾನ ನೆರವೇರಿಸಿದರು. ಸುಮಾರು 2 ಗಂಟೆಗಳ ಕಾಲ ನಡೆದ ಪೂಜಾ ಕೈಂಕರ್ಯ ಬೆಳಗ್ಗೆ 12 ಗಂಟೆಗೆ ಸಮಾಪ್ತಿಯಾಯಿತು. ಇದಾದ ಮೇಲೆ ಬ್ರಹ್ಮ ಕಳಸ ಪ್ರತಿಷ್ಠಾಪನೆ ನಡೆಯಿತಲ್ಲದೆ, ರಾಜ್ಯದ ಉದ್ದಗಲಕ್ಕೂ ಸಂಗ್ರಹ ಮಾಡಲಾಗಿದ್ದ ಜಲವನ್ನು ಅದಕ್ಕೆ ತುಂಬಿಸಲಾಯಿತು. ಮೊದಲು ಕುಮಾರಸ್ವಾಮಿ ಪುಟ್ಟ ಕಳಸದ ಮೂಲಕ ಬ್ರಹ್ಮ ಕಳಸಕ್ಕೆ ಪವಿತ್ರ ಜಲವನ್ನು ತುಂಬಿಸಿದರು. ಪಕ್ಷದ ಎಲ್ಲಾ ಶಾಸಕರು, ವಿಧಾನಪರಿಷತ್ ಸದಸ್ಯರು ಹಾಗೂ ಮುಖಂಡರು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇಂದಿನಿಂದ ಕಳಸಕ್ಕೆ ಮುಂದಿನ ಒಂದು ವರ್ಷ ಕಾಲ ಸಂಪ್ರದಾಯದಂತೆ ನಿತ್ಯ ಗಂಗಾಪೂಜೆ ನಡೆಯುತ್ತದೆ. ಜನತಾ ಜಲಧಾರೆ ಹಾಗೂ ಬ್ರಹ್ಮ ಕಳಸ ಪ್ರತಿಷ್ಠಾಪನೆ ವೇಳೆ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಹಾಗೂ ಎಲ್ಲ ಜಿಲ್ಲೆಗಳಿಗೂ ಸಮಗ್ರ ನೀರಾವರಿ ಕಲ್ಪಿಸುವ ಸಂಕಲ್ಪ ಮಾಡಲಾಯಿತು. ಅದಕ್ಕೆ ಶಕ್ತಿ ಕೊಡು ತಾಯಿ ಎಂದು ಗಂಗಾ ಮಾತೆಯನ್ನು ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಐದು ವರ್ಷಗಳ ಪೂರ್ಣ ಪ್ರಮಾಣದ ಸ್ವತಂತ್ರ ಸರಕಾರ ನೀಡಿದರೆ ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು. ಈ ಬಗ್ಗೆ ರಾಜೀ ಇಲ್ಲ ಎಂದು ಅವರು ಸ್ಪಷ್ಟ ಮಾತುಗಳಲ್ಲಿ ಹೇಳಿದರು.

ಇದರ ಜತೆಗೆ, ಸರ್ವ ಜನರ ಹಿತಕ್ಕಾಗಿ ರೂಪಿಸಲಾಗಿರುವ ಪಂಚರತ್ನ ಕಾರ್ಯಕ್ರಮಗಳ ಜಾರಿಗೂ ಶಕ್ತಿ ಕೊಡು ತಾಯಿ ಎಂದು ಗಂಗಾ ಮಾತೆಯಲ್ಲಿ ಬೇಡಿಕೊಂಡಿದ್ದೇನೆ ಎಂದು ಕುಮಾರಸ್ವಾಮಿ ತಿಳಿಸಿದರು. ಕಳಸ ಪ್ರತಿಷ್ಠಾಪನೆ ಮಾಡಿರುವ ಮಂಟಪವನ್ನು ವಿಶೇಷವಾಗಿ ವಿನ್ಯಾಸ ಮಾಡಲಾಗಿದೆ. ಕರ್ನಾಟಕದ ಪರಂಪರೆಯನ್ನು ಬಿಂಬಿಸುವ ವಾಸ್ತುಶಿಲ್ಪ ಉಳ್ಳ ಮಂಟಪ ವಿಶೇಷ ಆಕರ್ಷಣೆಯಾಗಿದೆ. ಇಡೀ ಮಂಟಪವನ್ನು ಆವರಣ ಮಂಟಪ ಕಲಾ ಆರ್ಟ್‌ನ ಕಲಾವಿದರು ಸಿದ್ಧಪಡಿಸಿದ್ದಾರೆ. ಈ ಮಂಟಪದಲ್ಲಿ ನಿರಂತರವಾಗಿ ಜಪ, ಮಂತ್ರ, ಮಂಗಳನಾದ ಮೊಳಗುತ್ತಿರುತ್ತದೆ. ಪವಿತ್ರ ಗಂಗಾ ಜಲವು ಸುಮಾರು ಒಂದು ವರ್ಷ ಕಾಲ ಈ ಕಳಸದಲ್ಲಿ ಇರಲಿದೆ. ನೀರು ಕೆಡದಂತೆ ನೋಡಿಕೊಳ್ಳಲು ವಿಶೇಷ ಯುವಿ – ಓಜೋನೈಸೇಶನ್ ವ್ಯವಸ್ಥೆ ಮಾಡಲಾಗಿದೆ. ಇದು ಆಮ್ಲಜನಕಯುಕ್ತ ಆಗಿರುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಮಾಹಿತಿ ನೀಡಿದರು.

ದಾವೋಸ್‌ನಲ್ಲಿ ಕೂರ್ಗ್ ಕಾಫಿ ಘಮ





ದಾವೋಸ್, ಮೇ 26– ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜಾಗತಿಕ ಹೂಡಿಕೆದಾರರ ಸಭೆಗೆ ಚಾಲನೆ ನೀಡಿದ ವೇಳೆ ಸಭೆಯಲ್ಲಿ ಭಾಗವಹಿಸಿದ್ದವರು ರಾಜ್ಯದ ಕೊಡಗು ಜಿಲ್ಲೆಯ ಕಾಫಿಯ ಅನುಭವದಿಂದ ಉಲ್ಲಸಿತರಾದರಲ್ಲದೆ ಹಲವು ಕಾಫಿ ಪ್ಯಾಕೆಟ್‌ಗಳನ್ನು ಸ್ವೀಕರಿಸಿದರು.

ವಿಶ್ವ ಆರ್ಥಿಕ ವೇದಿಕೆ ಸಭೆ ಮುಕ್ತಾಯದ ನಂತರವೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇನ್ನೊಂದು ದಿನ ವಾಸ್ತವ್ಯ ವಿಸ್ತರಿಸಿ, ಕರ್ನಾಟಕದಲ್ಲಿ ಹೆಚ್ಚಿನ ಹೂಡಿಕೆ ಮಾಡಲು ಆಸಕ್ತಿ ತೋರುತ್ತಿರುವ ಉದ್ಯಮಗಳೊಂದಿಗೆ ಮತ್ತೊಂದು ಸುತ್ತಿನ ಮಾತುಕತೆ ನಡೆಸಿದ್ದಾರೆ.

ಮುಖ್ಯಮಂತ್ರಿಗಳ ನಿಯೋಗವು ಕೂರ್ಗ್‌ನ ಅರೇಬಿಕಾ ಮತ್ತು ರೊಬಸ್ಟಾ ಮಾದರಿಯ ಕಾಫಿಯನ್ನು ಕರ್ನಾಟಕದ ಪೆವಿಲಿಯನ್‌ಗೆ ಭೇಟಿ ನೀಡಿದ ಪ್ರತಿಯೊಬ್ಬರಿಗೂ ಕಾಫಿ ಬ್ಯಾಗ್ಸ್ ಮತ್ತು ಟಿಪ್ಪಣಿಯನ್ನು ನೀಡಿತು.

ಕರ್ನಾಟಕ, ಭಾರತದ ಜಿಐ ಕಾಫಿ ಹಬ್ ಹಾಗೂ ಐದು ಜಿಐ ಟ್ಯಾಗ್ಡ್ ಕಾಫಿಗಳ ನೆಲೆಯಾಗಿದೆ. ಅಲ್ಲದೆ, ಕರ್ನಾಟಕದ ಮಾನ್‌ಸೂನ್ ಮಲಬಾರ್ ಅರೇಬಿಕಾ ಮತ್ತು ರೊಬಸ್ಟಾ ಕಾಫಿ, ಚಿಕ್ಕಮಗಳೂರು ಅರೇಬಿಕಾ ಮತ್ತು ಕೂರ್ಗ್ ಅರೇಬಿಕಾ ಕಾಫಿ ಬೀಜಗಳು ಜಾಗತಿಕವಾಗಿ ಹೆಸರುವಾಸಿಯಾಗಿದೆ ಎಂದು ಟಿಪ್ಪಣಿಯಲ್ಲಿ ತಿಳಿಸಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೂಡಿಕೆದಾರರು ಮತ್ತು ಸುದ್ದಿ ಸಂಸ್ಥೆಗಳನ್ನು ಉದ್ದೇಶಿಸಿ ಮಾತನಾಡಿ, ವ್ಯಾಪಾರ ಮಾಡಲು ಕರ್ನಾಟಕ ಅತ್ಯಂತ ಸುರಕ್ಷಿತ ಸ್ಥಳವಾಗಿದೆ ಎಂದರು. ಹಾಲಿ ಭಾರತದಲ್ಲಿರುವ ಸುಮಾರು ಅರ್ಧದಷ್ಟು ವಿದೇಶಿ ಕಂಪನಿಗಳು ಈಗಾಗಲೇ ಕರ್ನಾಟಕದಲ್ಲಿವೆ. ಮತ್ತು ಅವರೆಲ್ಲರೂ ರಾಜ್ಯದಲ್ಲಿ ಉದ್ದಿಮೆಗಳನ್ನು ವಿಸ್ತರಿಸಿ ವೈವಿಧ್ಯಗೊಳಿಸಲು ಯೋಚಿಸುತ್ತಿದ್ದಾರೆ.

> ಬೆಂಗಳೂರಿನಲ್ಲಿ, ಹೈಟೆಕ್ ಪರಿಸರ ವ್ಯವಸ್ಥೆಗೆ ಕಾರಣವಾಗಿ ಹೆಚ್ಚಿನ ಸಂಖ್ಯೆಯ ಆರ್ ಅಂಡ್ ಡಿ ಕೇಂದ್ರಗಳು ಮತ್ತು ಅಂತರಿಕ್ಷ ಯಾನದಲ್ಲಿ ನಮ್ಮ ಪರಿಣತಿ, ರಕ್ಷಣಾ, ಯಂತ್ರೋಪಕರಣಗಳು ಮತ್ತು ಸಹಜವಾಗಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹೊಂದಿದ್ದು, ಈ ಎಲ್ಲಾ ಯೋಜನೆಗಳನ್ನು ಬೆಂಗಳೂರಿನ ಆಚೆಗೂ ವಿಸ್ತರಿಸಲು ಯೋಚಿಸುತ್ತಿದ್ದೇವೆ. ಈ ಸಂಬಂಧ ಅಗತ್ಯ ಕೆಲಸಗಳು ಈಗಾಗಲೇ ಆರಂಭವಾಗಿವೆ.
>
> –ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಅಲ್ಲದೇ ದೃಢವಾದ ಮೂಲಸೌಕರ್ಯಗಳೊಂದಿಗೆ ಹಲವಾರು ಉದ್ಯಮಿಗಳು ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಲು ಆಕರ್ಷಿತರಾಗಿರುವುದನ್ನು ಸಾಬೀತುಪಡಿಸಿದ್ದಾರೆ ಎಂದು ವಿವರಿಸಿದರು.

ರಾಜ್ಯದ ರಾಜಧಾನಿ ಬೆಂಗಳೂರಿನ ಜನಸಂದಣಿಯನ್ನು ಕಡಿಮೆ ಮಾಡಲು ಅಕ್ಕಪಕ್ಕದ ಹಲವು ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಮೂಲಕ ಹಾಗೂ ಶ್ರೇಣಿ 2 (ಮೈಸೂರು) ಮತ್ತು ಶ್ರೇಣಿ 3 (ಹುಬ್ಬಳ್ಳಿ ಮತ್ತು ಧಾರವಾಡ) ನಗರಗಳಲ್ಲಿ ಇನ್ನೂ ನಾಲ್ಕು ಏರ್‌ಪೋರ್ಟ್‌ಗಳನ್ನು ನಿರ್ಮಿಸಲಾಗುವುದು ಎಂದರಲ್ಲದೇ "ಕರ್ನಾಟಕ ಇತರ ರಾಜ್ಯಗಳಿಂದ ವಿಭಿನ್ನವಾಗಿದೆ" ಎಂದು ಹೇಳಿದರು.

ವೇಶ್ಯಾವಾಟಿಕೆ ಅಪರಾಧವಲ್ಲ, ವೃತ್ತಿ



ಕಿರುಕುಳ ಕೊಟ್ಟರೆ ಪೊಲೀಸರ ವಿರುದ್ಧವೇ ಕ್ರಮ: ಸುಪ್ರೀಂ

ನವದೆಹಲಿ, ಮೇ 26– ವೇಶ್ಯಾವಾಟಿಕೆ ಪರ ಮತ್ತು ವಿರೋಧದ ಚರ್ಚೆಗಳು ದಶಕಗಳಿಂದ ಕೇಳಿ ಬರುತ್ತಿವೆ. ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಬೇಕು ಮತ್ತು ಅದರಲ್ಲಿ ತೊಡಗಿಕೊಂಡ ಮಹಿಳೆಯರನ್ನು ಸಮಾಜದಲ್ಲಿ ಗೌರವಯುತವಾಗಿ ನಡೆಸಿಕೊಳ್ಳಬೇಕು ಎಂಬ ವಾದ ಬಹಳ ಹಿಂದಿನಿಂದಲೂ ಕೇಳಿ ಬಂದಿತ್ತು.

ಈ ಸಂಬಂಧ ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದ್ದು, ಇನ್ನು ಮುಂದೆ ವೇಶ್ಯಾವಾಟಿಕೆ ಕಾನೂನುಬದ್ಧ ಎಂಬ ತೀರ್ಪು ನೀಡಿದೆ. ಜತೆಗೆ ಪೊಲೀಸರು ವೇಶ್ಯಾವಾಟಿಕೆ ಸಂಬಂಧ ಮಧ್ಯಪ್ರವೇಶಿಸುವಂತಿಲ್ಲ. ಅವರ ಮೇಲೆ ಕ್ರಮ ಕೈಗೊಂಡರೆ ಪೊಲೀಸರ ವಿರುದ್ಧವೇ ಕ್ರಿಮಿನಲ್ ಮೊಕದ್ದಮೆ ಹೂಡುವುದಾಗಿ ಎಚ್ಚರಿಕೆ ನೀಡಿದೆ.

ಸುಪ್ರೀಂ ಕೋರ್ಟಿನ ತ್ರಿಸದಸ್ಯ ಪೀಠ ಈ ಮಹತ್ವದ ಆದೇಶವನ್ನು ಹೊರಡಿಸಿದೆ. ನ್ಯಾಯಮೂರ್ತಿ ಎಲ್.ನಾಗೇಶ್ವರರಾವ್ ಅಧ್ಯಕ್ಷತೆಯ ಪೀಠ ಈ ಆದೇಶ ನೀಡಿದೆ. ವೇಶ್ಯಾವಾಟಿಕೆಯಲ್ಲಿ ತೊಡಗಿದ ಮಹಿಳೆಯರ ಹಕ್ಕುಗಳ ರಕ್ಷಣೆ ಕುರಿತಂತೆ ಆರು ನಿರ್ದೇಶನಗಳನ್ನು ಕೋರ್ಟ್ ನೀಡಿದೆ.

ವೇಶ್ಯಾವಾಟಿಕೆಯಲ್ಲಿ ಭಾಗಿಯಾದ ಮಹಿಳೆಯರಿಗೆ ಸಮಾಜದ ಪ್ರತಿಯೊಬ್ಬರಿಗೂ ಸಿಗಬೇಕಾದ ರಕ್ಷಣೆ ಹಕ್ಕಿದೆ. ಕ್ರಿಮಿನಲ್ ಮೊಕದ್ದಮೆ ಹೂಡುವಾಗ ಅವರ ವಯಸ್ಸು ಮತ್ತು ಅವರು ಸ್ವ ಇಚ್ಛೆಯಿಂದ ಭಾಗಿಯಾಗಿದ್ದಾರ ಎಂಬ ಬಗ್ಗೆ ತಿಳಿದುಕೊಳ್ಳಬೇಕು. ಒಂದು ವೇಳೆ ಸ್ವಂತ ನಿರ್ಧಾರದ ಮೇಲೆ ವೇಶ್ಯಾವಾಟಿಕೆಯಲ್ಲಿ ಭಾಗಿಯಾಗಿದ್ದರೆ ಅವರ ವಿರುದ್ಧ ಕಾನೂನು ಕ್ರಮ ಅಥವಾ ಕ್ರಿಮಿನಲ್ ಮೊಕದ್ದಮೆ ಹೂಡುವ ಹಕ್ಕು ಪೊಲೀಸರಿಗಿಲ್ಲ. ಅನಗತ್ಯ ಮಧ್ಯಪ್ರವೇಶ ಮಾಡುವುದನ್ನು ಕೋರ್ಟ್ ಸಹಿಸುವುದಿಲ್ಲ. ವೇಶ್ಯಾವಾಟಿಕೆಯೂ ಒಂದು ವೃತ್ತಿ. ದೇಶದ ಪ್ರತಿ ನಾಗರಿಕನಿಗೆ ಸಿಗುವ ರಕ್ಷಣೆ, ಹಕ್ಕು ಮತ್ತು ಗೌರವ ಈ ಮಹಿಳೆಯರಿಗೂ ದೊರೆಯಬೇಕು ಎಂದು ಸುಪ್ರೀಂ ಕೋರ್ಟ್ ಪೀಠ ತಿಳಿಸಿದೆ.

ಸೆಕ್ಸ್ ವರ್ಕರ್‌ಗಳನ್ನು ಬಂಧಿಸುವಂತಿಲ್ಲ, ಹಿಂಸಿಸುವಂತಿಲ್ಲ, ಶಿಕ್ಷಿಸುವಂತಿಲ್ಲ ಮತ್ತು ಸಂತ್ರಸ್ತರನ್ನಾಗಿಸುವಂತಿಲ್ಲ ಎಂದು ಕೋರ್ಟ್ ಆದೇಶಿಸಿದೆ. ವೇಶ್ಯಾವಾಟಿಕೆ ನಡೆಯುತ್ತಿರುವ ಸ್ಥಳಗಳ ಮೇಲೆ ಪೊಲೀಸರು ದಾಳಿ ಮಾಡಿ ಮಹಿಳೆಯರ ಮೇಲೆ ಕ್ರಮ ಕೈಗೊಳ್ಳುವಂತಿಲ್ಲ. ವೇಶ್ಯಾವಾಟಿಕೆ ಅಡ್ಡೆಯನ್ನು ನಡೆಸುವುದು ಕಾನೂನುಬಾಹಿರ. ಆದರೆ ಒಪ್ಪಿತ ವೇಶ್ಯಾವಾಟಿಕೆ ವೃತ್ತಿ ಕಾನೂನುಬಾಹಿರವಲ್ಲ ಎಂದು ಸುಪ್ರೀಂಕೋರ್ಟ್ ತಿಳಿಸಿದೆ.

ವೇಶ್ಯಾವಾಟಿಕೆಯಲ್ಲಿ ಭಾಗಿಯಾಗುತ್ತಿರುವ ಮಹಿಳೆ 18 ವರ್ಷ ಮೇಲ್ಪಟ್ಟವಳು ಮತ್ತು ಒಪ್ಪಿಗೆಯಿಂದಲೇ ವೃತ್ತಿಯಲ್ಲಿ ಭಾಗಿಯಾಗಿದ್ದಾಳೆ ಅಂದಮೇಲೆ ಅದು ಕಾನೂನಾತ್ಮಕವಾಗಿ ತಪ್ಪಲ್ಲ. ಪೊಲೀಸರು ಮಧ್ಯಪ್ರವೇಶಿಸುವುದಾಗಲೀ, ಮೊಕದ್ದಮೆ ಹೂಡುವುದಾಗಲೀ ಮಾಡಿದರೆ ಅದು ಕಾನೂನುಬಾಹಿರ ಎಂಬುದು ಸುಪ್ರೀಂಕೋರ್ಟ್ ಅಭಿಪ್ರಾಯ.

ವೇಶ್ಯೆಯರ ಮಕ್ಕಳನ್ನು ಕೇವಲ ಆಕೆ ವೇಶ್ಯೆ ಎಂಬ ಕಾರಣಕ್ಕೆ ದೂರ ಮಾಡುವಂತಿಲ್ಲ. ಆಕೆ ಸೆಕ್ಸ್ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾಳೆ, ಬೇರೆ ಉದ್ಯಮಗಳಂತೆ ಅದೂ ಒಂದು ಉದ್ಯಮ. ಮೂಲಭೂತ ಮಾನವೀಯ ರಕ್ಷಣೆ, ಹಕ್ಕು, ಗೌರವ ವೇಶ್ಯೆ ಮತ್ತು ಆಕೆಯ ಮಕ್ಕಳಿಗೆ ಸಿಗಲೇಬೇಕು ಎಂದು ಕೋರ್ಟ್ ತಿಳಿಸಿದೆ.

ಒಂದು ವೇಳೆ ವೇಶ್ಯಾವಾಟಿಕೆಯಲ್ಲಿರುವ ಮಹಿಳೆ ಪೊಲೀಸರಿಗೆ ಆಕೆಯ ಮೇಲಾದ ಲೈಂಗಿಕ ದೌರ್ಜನ್ಯದ ಬಗ್ಗೆ ದೂರು ನೀಡಿದರೆ, ಪೊಲೀಸರು ಕ್ರಮ ಕೈಗೊಳ್ಳಬೇಕು. ಆಕೆಯ ವೃತ್ತಿಯನ್ನು ಆಧರಿಸಿ ಪೂರ್ವಾಗ್ರಹಪೀಡಿತರಾಗಿ ವ್ಯವಹರಿಸಬಾರದು. ದೇಶದ ಪ್ರತಿಯೊಬ್ಬ ನಾಗರಿಕರಿಗೆ ಸಿಗುವ ರಕ್ಷಣೆ ಮತ್ತು ಆರೋಗ್ಯ ತಪಾಸಣೆ, ಚಿಕಿತ್ಸೆ ಲೈಂಗಿಕ ದೌರ್ಜನ್ಯಕ್ಕೊಳಗಾದ ವೇಶ್ಯೆ ವೃತ್ತಿಯಲ್ಲಿರುವ ಮಹಿಳೆಗೂ ಸಿಗಬೇಕು ಎಂದು ಕೋರ್ಟ್ ಹೇಳಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಸ್ಟೆಲ್ ವಿದ್ಯಾರ್ಥಿಗಳ ಸಾಧನೆ

ಮೈಸೂರು,ಮೇ 26(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯದಲ್ಲೇ ಮೈಸೂರು ಜಿಲ್ಲೆ ಗಮನ ಸೆಳೆಯುವ ಸಾಧನೆ ಮಾಡಿದೆ. ಮೈಸೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 41 ವಿದ್ಯಾರ್ಥಿನಿಲಯಗಳಿದ್ದು, ಅದರಲ್ಲಿದ್ದ 312 ಮಂದಿ ವಿದ್ಯಾರ್ಥಿಗಳು ಈ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದು, 306 ಮಂದಿ ತೇರ್ಗಡೆಯಾಗಿದ್ದಾರೆ. 6 ಮಂದಿ ಮಾತ್ರ ಅನುತ್ತೀರ್ಣರಾಗಿದ್ದಾರೆ. ತೇರ್ಗಡೆಯಾದ 306 ಮಂದಿ ವಿದ್ಯಾರ್ಥಿಗಳಲ್ಲಿ 24 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕ, 80 ವಿದ್ಯಾರ್ಥಿಗಳು ಶೇ.80ಕ್ಕಿಂತ ಹೆಚ್ಚು, 90 ವಿದ್ಯಾರ್ಥಿಗಳು ಶೇ.70ಕ್ಕಿಂತ ಹೆಚ್ಚು ಅಂಕ, 83 ವಿದ್ಯಾರ್ಥಿಗಳು ಶೇ.60ಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಿದ್ದಾರೆ. 28 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲೂ, ಓರ್ವ ವಿದ್ಯಾರ್ಥಿ ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿದ್ಯಾರ್ಥಿನಿಲಯಗಳ ಫಲಿತಾಂಶ ಶೇ.98.07ರಷ್ಟು ಇದ್ದರೆ, ಮೈಸೂರು ಜಿಲ್ಲೆಯ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಫಲಿತಾಂಶ ಶೇ.91.38ರಷ್ಟು ದಾಖಲಾಗಿದೆ.

ಕಲಿಕೆಗೆ ಪೂರಕ ವಾತಾವರಣ ನಿರ್ಮಿಸಲಾಗಿದೆ



ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೈಸೂರು ಜಿಲ್ಲೆಯಲ್ಲಿ ಮುನ್ನಡೆಸುತ್ತಿರುವ 41 ವಿದ್ಯಾರ್ಥಿನಿಲಯಗಳಲ್ಲೂ ವಿದ್ಯಾರ್ಥಿಗಳಿಗೆ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸಲಾಗಿದೆ. ಎಲ್ಲಾ ಹಾಸ್ಟೆಲ್‌ಗಳ ವಾರ್ಡನ್‌ಗಳಲ್ಲಿ ಬಹುತೇಕ ಮಂದಿ, ಬಿಎ ಅಥವಾ ಬಿ.ಇಡಿ ವಿದ್ಯಾರ್ಹತೆ ಹೊಂದಿರುವವರೇ ಹೆಚ್ಚಾಗಿರುವುದರಿಂದ ವಿಶೇಷವಾಗಿ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಹೆಚ್ಚುವರಿ ಗಮನ ನೀಡಿ, ವಿದ್ಯಾರ್ಥಿನಿಲಯಗಳಲ್ಲೂ ಶಾಲೆಯಲ್ಲಿ ಬೋಧಿಸಿದ ಪಠ್ಯಕ್ರಮವನ್ನು ಮನನ ಮಾಡಿಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ವಿಷಯವಾರು ಪಠ್ಯಕ್ರಮಗಳಲ್ಲಿ ವಿದ್ಯಾರ್ಥಿಗಳಿಗೆ ನೆರವು ನೀಡುವ ಮೂಲಕ ಉತ್ತಮ ಫಲಿತಾಂಶಕ್ಕೆ ಕ್ರಮ ಕೈಗೊಳ್ಳಲಾಗಿತ್ತು. ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಹಿತ ಕಾಯುವುದರೊಂದಿಗೆ ಶೈಕ್ಷಣಿಕ ಪ್ರಗತಿಗೆ ಕೈಗೊಂಡಿದ್ದ ಕೆಲವು ಕ್ರಮದಿಂದಾಗಿ ಈ ಸಾಲಿನಲ್ಲಿ ಮೈಸೂರು ಜಿಲ್ಲೆಯ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳು ಶೇ.98.07ರಷ್ಟು ಮಂದಿ ಉತ್ತೀರ್ಣರಾಗಿದ್ದಾರೆ. ಇದರಿಂದ ಮೈಸೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳು ರಾಜ್ಯದಲ್ಲೇ ಗಮನ ಸೆಳೆಯುವ ಸಾಧನೆ ಮಾಡಿದೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಇನ್ನಷ್ಟು ಕ್ರಮ ಕೈಗೊಳ್ಳಲು ಚಿಂತಿಸಲಾಗಿದೆ. **–ಹೆಚ್.ಎಸ್.ಬಿಂದ್ಯಾ, ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**

ಪೆಟ್ರೋಲಿಯಂ ದರ ರಜಾ ದಿನ, ಹಬ್ಬದ ದಿನಗಳಂದು ಇಳಿಸಿದರೆ ಮಾಲೀಕರಿಗೆ ನಷ್ಟ



ಪೆಟ್ರೋಲ್ ಬಂಕ್ ಮಾಲೀಕರ ಸಂಘದ ಅಳಲು

ಮೈಸೂರು, ಮೇ 26(ಆರ್‌ಕೆಬಿ)– ಸರ್ಕಾರ ಪೆಟ್ರೋಲಿಯಂ ದರ ಇಳಿಸುವುದು ಸರಿಯೇ. ಆದರೆ ಅದನ್ನು ಏಕಾಏಕಿ ರಜಾ ದಿನ ಅಥವಾ ಹಬ್ಬದ ದಿನಗಳಂದು ಇಳಿಸುವುದರಿಂದ ಪೆಟ್ರೋಲ್ ಬಂಕ್ ಮಾಲೀಕರಿಗೆ ಅಪಾರ ನಷ್ಟವುಂಟಾಗುತ್ತದೆ ಎಂದು ಪೆಟ್ರೋಲ್ ಬಂಕ್ ಮಾಲೀಕರ ಸಂಘ ತಿಳಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯಾಧ್ಯಕ್ಷ ಕೆ.ಎಂ.ಬಸವೇಗೌಡ, ತಾವೆಲ್ಲ ಸುಂಕ ಪಾವತಿಸಿಯೇ ಎರಡು ಮೂರು ದಿನಗಳ ಮೊದಲೇ ಹೆಚ್ಚಿನ ಪ್ರಮಾಣದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಖರೀದಿಸಿರುತ್ತೇವೆ. ರಜಾ ದಿನಗಳಿಗಾಗಿ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದ ಖರೀದಿ ನಡೆದಿರುತ್ತದೆ ಎಂದರು. ಸರ್ಕಾರ ದಿಢೀರನೆ ಸುಂಕ ಇಳಿಸುವುದರಿಂದಾಗಿ ತಾವು ಮಾರಾಟ ಮಾಡುವ ಪೆಟ್ರೋಲ್, ಡೀಸೆಲ್‌ಗಳಿಗೆ ತಾವು ನೀಡಿರುವ ಸುಂಕ ವಾಪಸು ಮಾಡುವುದಿಲ್ಲ. ಹೀಗಾಗಿ ಪೆಟ್ರೋಲ್ ಬಂಕ್ ಮಾಲೀಕರಿಗೆ ಅಂತಹ ಸಂದರ್ಭದಲ್ಲಿ ಲಕ್ಷಾಂತರ ರೂ. ನಷ್ಟವುಂಟಾಗುತ್ತಿದೆ. ಹೀಗಾಗಿ ಮೊದಲೇ ಸೂಚನೆ ನೀಡಬೇಕು ಅಥವಾ ರಜಾ ದಿನಗಳನ್ನು ಹೊರತುಪಡಿಸಿದಂತೆ ಇತರೆ ದಿನಗಳಲ್ಲಿ ದರ ಇಳಿಸಬೇಕು. ಜೊತೆಗೆ ತಾವು ಈಗಿನ ಪೆಟ್ರೋಲ್ ಉತ್ಪನ್ನಗಳಿಗೆ ಈ ಹಿಂದೆಯೇ ನೀಡಿರುವ ತೆರಿಗೆಯ ಹಣ ವಾಪಸು ಮಾಡಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಶಶಿಕಲಾ, ಮಂಜೇಶ್‌ಕುಮಾರ್, ರವಿಶಂಕರ್, ಲೋಕೇಶ್ ಉಪಸ್ಥಿತರಿದ್ದರು.

ನಾಳೆ, ನಾಳಿದ್ದು ತುಘಲಕ್ ಪ್ರದರ್ಶನ



ಮೈಸೂರು,ಮೇ 26(ಆರ್‌ಕೆಬಿ)– ಮೈಸೂರಿನ ರಂಗವಲ್ಲಿ ತಂಡವು ಮೇ 28 ಮತ್ತು 29ರಂದು ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಗಿರೀಶ್ ಕಾರ್ನಾಡ್ ರಚಿಸಿರುವ 'ತುಘಲಕ್' ನಾಟಕದ ಪ್ರದರ್ಶನ ಏರ್ಪಡಿಸಿದೆ ಎಂದು ತಂಡದ ಮಂಜುನಾಥಶಾಸ್ತ್ರಿ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಿರೀಶ್ ಕಾರ್ನಾಡರ ಮೂಲ ಆಶಯಕ್ಕೆ ಧಕ್ಕೆ ಬಾರದಂತೆ ನಾಟಕ ಪ್ರದರ್ಶಿಸಲಾಗುತ್ತಿದೆ. ತುಘಲಕ್ ಮಹತ್ವಾಕಾಂಕ್ಷಿಯಾಗಿದ್ದರೂ ಆತನನ್ನು ಹುಚ್ಚು ದೊರೆ ಎಂದು ಕರೆಯುವುದು ತಪ್ಪು, ಆತನ ಕಾಲದಲ್ಲಿ ಎಲ್ಲ ಧರ್ಮದವರೂ ಸಮಾನರಾಗಿದ್ದು, ಸರ್ವಧರ್ಮ ಸಹಿಷ್ಣುತೆ ಇತ್ತು ಎಂದರು. ಗೋಷ್ಠಿಯಲ್ಲಿ ನಾಟಕದ ನಿರ್ದೇಶಕ ಮಾಯಸಂದ್ರ ಕೃಷ್ಣ ಪ್ರಸಾದ್, ಮುರಳಿ, ರಶ್ಮಿ ಇದ್ದರು.

ಹೆಣ್ಣು ಮಕ್ಕಳ ಹಾಸ್ಟೆಲ್‌ಗೆ ಉಚಿತ ಪ್ರವೇಶ

ಮೈಸೂರು,ಮೇ 26(ಎಂಟಿವೈ)– ಮೈಸೂರಿನ ವಿ.ವಿ.ಮೊಹಲ್ಲಾದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ (ವಿ.ವಿ. ಮೊಹಲ್ಲಾ–1)ದಲ್ಲಿ ದಾಖಲಾತಿ ಪ್ರಾರಂಭವಾಗಿದ್ದು, 2022–23ನೇ ಸಾಲಿಗೆ 6ನೇ ತರಗತಿಯಿಂದ 10ನೇ ತರಗತಿವರೆಗೆ ಪ್ರವೇಶವನ್ನು ಬಯಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿನಿಯರನ್ನು ಉಚಿತವಾಗಿ ದಾಖಲಾತಿ ಮಾಡಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿನಿಯರು ಇದನ್ನು ಸದುಪಯೋಗಪಡಿಸಿಕೊಳ್ಳುವಂತೆ ವಾರ್ಡನ್ ಎಸ್.ಗಾಯಿತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗಾಗಿ ಮೊ.ಸಂಖ್ಯೆ 7349015453 ಸಂಪರ್ಕಿಸುವಂತೆ ಕೋರಿದ್ದಾರೆ.

ಇಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ



ಮೈಸೂರು, ಮೇ 26– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ (ಕೋಟೆ) ಅವರು ಮೇ 27 ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ. ಬೆಳಗ್ಗೆ 11 ಗಂಟೆಗೆ ಮೈಸೂರಿನ ವಿಶ್ವೇಶ್ವರನಗರದ 3ನೇ ಹಂತದಲ್ಲಿರುವ ಪೌರಕಾರ್ಮಿಕರ ಮಗಳಾದ ಆರ್.ಚೇತನಾ ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದು, ವಿದ್ಯಾರ್ಥಿನಿಗೆ ಅಭಿನಂದನೆ ಸಲ್ಲಿಸಲು ಭೇಟಿ ನೀಡುವರು ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

12 ಸಾವಿರ ಬಿಸಿಯೂಟ ಕಾರ್ಮಿಕರ ಬಿಡುಗಡೆ ಕ್ರಮ ಖಂಡಿಸಿ

ಡಿಸಿ ಕಚೇರಿ ಮುಂದೆ ಅಕ್ಷರ ದಾಸೋಹ ಕಾರ್ಮಿಕರ ಪ್ರತಿಭಟನೆ




ಮೈಸೂರು, ಮೇ 26(ಆರ್‌ಕೆಬಿ)– ಕಾರ್ಮಿಕರಿಗೆ ಸರ್ಕಾರ ನಿವೃತ್ತಿ ವೇತನ, ಇಡುಗಂಟು ನೀಡಬೇಕು. ಕಡಿಮೆ ವೇತನದಲ್ಲೂ ಮಕ್ಕಳ ಹಸಿವು ನೀಗಿಸಲು ದುಡಿಯುವ ಕಾರ್ಮಿಕರ ಸೇವೆಯನ್ನು ನಿರ್ಲಕ್ಷಿಸಬಾರದು ಎಂದು ಆಗ್ರಹಿಸಿ ರಾಜ್ಯ ಅಕ್ಷರ ದಾಸೋಹ ಕಾರ್ಮಿಕರ ಸಂಘದ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಯಾವುದೇ ಸೂಚನೆ ಇಲ್ಲದೆ ರಾಜ್ಯದ 12 ಸಾವಿರ ಬಿಸಿಯೂಟ ಕಾರ್ಮಿಕರನ್ನು ಸೇವೆಯಿಂದ ಬಿಡುಗಡೆಗೊಳಿಸಿರುವ ಸರ್ಕಾರದ ಕ್ರಮ ಖಂಡಿಸಿ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅಖಿಲ ಭಾರತ ಸಂಯುಕ್ತ ಸಂಘಟನೆ (ಎಐಯುಟಿಯುಸಿ) ರಾಜ್ಯ ಕಾರ್ಯದರ್ಶಿ ಎಂ.ಉಮಾದೇವಿ, ರಾಜ್ಯ ಸರ್ಕಾರ ಕೇವಲ ಹಗರಣಗಳಲ್ಲಿ ಮುಳುಗಿದೆ. ಹೀಗಾಗಿ ರೈತರು ಮತ್ತು ಕಾರ್ಮಿಕರ ಸಮಸ್ಯೆ ನಿರ್ಲಕ್ಷಿಸಿದೆ. ಬಿಸಿಯೂಟ ಕಾರ್ಮಿಕರಿಗೆ ಬಜೆಟ್‌ನಲ್ಲಿ 1 ಸಾವಿರ ರೂ. ಹೆಚ್ಚಿಸಿ, ಇದೀಗ ಏಕಾಏಕಿ ಕೆಲಸದಿಂದ ಬಿಡುಗಡೆಗೊಳಿಸುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಬರೆದ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಕಚೇರಿಗೆ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸ್ಕೀಮ್ ವರ್ಕರ್ಸ್ ಫೆಡರೇಷನ್ ಆಫ್ ಇಂಡಿಯಾದ ರಾಜ್ಯ ಘಟಕದ ಕಾರ್ಯದರ್ಶಿ ಪಿ.ಎಸ್.ಸಂಧ್ಯಾ, ಸಂಘದ ಜಿಲ್ಲಾ ಸಂಚಾಲಕ ಎಸ್.ಎಚ್.ಹರೀಶ್, ಕೆ.ವಿ.ಭಟ್, ಡಿ.ನಾಗಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು.

ಮೇ 31, ವಿಶ್ವ ತಂಬಾಕುರಹಿತ ದಿನಾಚರಣೆ

ಮೈಸೂರು, ಮೇ 26– ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಜಿಲ್ಲಾ ಸರ್ವೇಕ್ಷಣ ಘಟಕ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಮೇ 31ರಂದು ಬೆಳಗ್ಗೆ 8.30ಕ್ಕೆ ಕೋಟೆ ಆಂಜನೇಯ ದೇವಸ್ಥಾನ ಅರಮನೆ ಆವರಣದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ವಿಶ್ವ ತಂಬಾಕುರಹಿತ ದಿನಾಚರಣೆಯ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.05.2022 ಶುಕ್ರವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 07.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ದ್ವಾದಶಿ, ನಕ್ಷತ್ರ : ಅಶ್ವಿನಿ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 9ಕ್ಕೆ ಶ್ರೀಚಕ್ರಪೂಜೆ, ದತ್ತಾತ್ರೇಯ ಹೋಮ, ಬೆಳಗ್ಗೆ 10ಕ್ಕೆ ಚೈತನ್ಯಾರ್ಚನೆ–ವಿವಿಧ ಕ್ಷೇತ್ರಗಳ ಗಣ್ಯರಿಗೆ ಸನ್ಮಾನ : ನಾದನಿಧಿ–ವಿದ್ವಾನ್ ಬ್ರೈನ್ ಸೈಲಸ್ (ಪಿಯಾನೋ), ನಾದನಿಧಿ–ವಿದ್ವಾನ್ ಬಿ.ವಿ.ಬಾಲಸಾಯಿ (ಕೊಳಲು), ಸಸ್ಯ ಬಂಧು–ಡಾ. ಚಂದ್ರ ವೀರರಾಜು ಚೌದರಿ (ಬೋನ್ಸಾಯ್), ಸಸ್ಯ ಬಂಧು–ರಾಜೀವ್ ವೈದ್ಯ (ಬೋನ್ಸಾಯ್), ಸಸ್ಯ ಬಂದು–ಸುಧೀರ್ ಜಾದವ್ (ಬೋನ್ಸಾಯ್), ಸಸ್ಯ ಬಂಧು–ಕೊಂಡೂರು ಕೃಷ್ಣರಾಜು (ತೋಟಗಾರಿಕೆ), ಸಸ್ಯ ಬಂಧು–ಮಂತೆನ ಆಂಜನೇಯ ರಾಜು (ತೋಟಗಾರಿಕೆ), ಬೆಳಗ್ಗೆ 11ಕ್ಕೆ ಸಾನ್ನಿಧ್ಯ : ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಮುಕ್ತಿದಾನಂದ ತೀರ್ಥ ಸ್ವಾಮೀಜಿ, ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿ, ಶ್ರೀ ವಚನಾನಂದ ಸ್ವಾಮೀಜಿ, ಸಂದರ್ಶನ : ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು, ಹಿರಿಯ ಶ್ರೀಗಳು ಪಲಿಮಾರು ಮಠ, ಶ್ರೀ ವಿದ್ಯಾ ರಾಜೇಶ್ವರ ತೀರ್ಥರು, ಕಿರಿಯ ಶ್ರೀಗಳು, ಪಲಿಮಾರು ಮಠ, ಸಂಜೆ 6.30ಕ್ಕೆ ಸಂಗೀತ ಕಾರ್ಯಕ್ರಮ : ವಿದ್ವಾನ್ ರಾಜೇಶ್ ವೈದ್ಯ ಅವರಿಂದ ವೀಣಾ ವಾದನ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ
- **ಯೂನಿಯನ್ ಬ್ಯಾಂಕ್:** ಸರಸ್ವತಿಪುರಂ ಬ್ರಾಂಚ್ ಉದ್ಘಾಟನೆ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತ್‌ಕುಮಾರ್ ಸ್ಥಳ: ಮಾರುತಿ ಟೆಂಪಲ್ ರಸ್ತೆ, ಟಿ.ಕೆ.ಲೇಔಟ್, ಬೆಳಗ್ಗೆ 9.30ಕ್ಕೆ
- **ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಕುವೆಂಪು ಅಧ್ಯಯನ ಸಂಸ್ಥೆ ಮತ್ತು ಯದುನಂದನ ಪ್ರಕಾಶನ:** ಡಾ.ಎಸ್.ಡಿ.ಶಶಿಕಲಾ ಅವರ 15 ಕೃತಿಗಳ ಬಿಡುಗಡೆ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಬೆಳಗ್ಗೆ 10.30ಕ್ಕೆ
- **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಜೀವ ರಸಾಯನಶಾಸ್ತ್ರ ವಿಭಾಗ, ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಜೀವ ರಸಾಯನಶಾಸ್ತ್ರ ವಿಭಾಗ:** ಪುನರುತ್ಪಾದಕ ಕೃಷಿ–ಜಾಗತಿಕ ಆಹಾರ ಉತ್ಪಾದನೆಗೆ ಸುಸ್ಥಿರ ತಂತ್ರಜ್ಞಾನ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ, ಸೆಮಿನಾರ್ ಹಾಲ್, ಜೆಎಸ್‌ಎಸ್ ಸಿಎಸಿಎಸ್, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ' ಮೈಸೂರು ಸುತ್ತಲಿನ ಪ್ರಾಗೈತಿಹಾಸ ತಾಣಗಳ ಪರಿಚಯ–ಡಾ.ಎಸ್.ಜಿ.ರಾಮದಾಸ ರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಡಿ.ಕೆ.ಜಯರಾಮನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ ಡಾ. ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್.,1.20 ಭಾವಗೀತೆ, 2.50ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಎಂ.ವಿ.ವರಾಹಸ್ವಾಮಿ–ಗೋಟುವಾದ್ಯ, 4.00 ಮಹಿಳಾರಂಗ, ಸಖೀಪದ, ಪ್ರಸ್ತುತಿ– ಎಂ.ಎಸ್. ಭಾರತಿ, 4.30 ವೃತ್ತಿ ಮಾರ್ಗದರ್ಶನ–ಯುವಜನರಿಗೆ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲ ತರಬೇತಿ ಕುರಿತು ಸಿ. ಜಗನ್ನಾಥ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್ ವಾಣಿ, ಮಣ್ಣು ಮತ್ತು ನೀರಿನ ನಿರ್ವಹಣೆಗೆ ಯಶಸ್ವಿ ಮಾದರಿಗಳು–ಡಾ.ಜಿ.ಹೆಚ್.ಯೋಗೇಶ್ ಅವರೊಡನೆ ಸಂದರ್ಶನ, 7.45 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲಿಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ– ಸಿ.ಕೆ. ವಿಜಯ ನರಸಿಂಹ, ನಿರ್ಮಾಣ–ಎಸ್.ಲಕ್ಷ್ಮೀನಾರಾಯಣ, 9.00 ಸಂಧ್ಯಾರಾಗ–ಹಿರಿಯ ರಂಗಭೂಮಿ ಕಲಾವಿದೆ ಹೆಚ್.ಟಿ.ಇಂದ್ರಮ್ಮ ಅವರೊಂದಿಗೆ ಮಾತುಕತೆ, 10.30 ಸವಿನೆನಪು

- **ನವೋದಯ ರಂಗ ತಂಡ :** ಸಾಂಸ್ಕೃತಿಕ ಪ್ರಚಾರಾಂದೋಲನ, ಸ್ಥಳ: ದೇವರಾಜ ಮಾರುಕಟ್ಟೆ ಬಳಿ, ಮಧ್ಯಾಹ್ನ 2.30ರಿಂದ.
- **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ
- **ಗಾನಭಾರತೀ:** ವಿದುಷಿ ಶಂಕರಿಮೂರ್ತಿ ಅವರಿಂದ ಹಾಡುಗಾರಿಕೆ, ವಿದ್ವಾನ್ ಅಚ್ಯುತರಾವ್–ಪಿಟೀಲು, ವಿದ್ವನ್ ಸುನಿಲ್ ಸುಬ್ರಹ್ಮಣ್ಯ–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸ್ನಾತಕೋತ್ತರ ವಿಭಾಗ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು:** ಪ್ರೊ.ಹೆಚ್.ಜೆ.ಲಕ್ಕಪ್ಪಗೌಡರ ಸಾಹಿತ್ಯ ದತ್ತಿನಿಧಿ ಕಾರ್ಯಕ್ರಮ, ಉದ್ಘಾಟನೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ: ವಿವಿ ಸಂಜೆ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಚ್.ಸಿ. ದೇವರಾಜೇಗೌಡ, ಮುಖ್ಯ ಭಾಷಣಕಾರರು: ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಸಂಯೋಜನಾಧಿಕಾರಿ ಡಾ.ಎನ್.ಆರ್.ಚಂದ್ರೇಗೌಡ, 'ಪ್ರೊ.ಹೆಚ್.ಜೆ.ಲಕ್ಕಪ್ಪಗೌಡರ 'ಶ್ರೀರಾಮಾಯಣ ದರ್ಶನಂ–ಒಂದು ವಿಮರ್ಶಾತ್ಮಕ ಅಧ್ಯಯನ' ಎಂಬ ಸಂಶೋಧನಾ ಕೃತಿಯ ಅವಲೋಕನ, ಉಪಸ್ಥಿತರು: ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಕೆ.ಸೌಭಾಗ್ಯವತಿ, ಸ್ಥಳ: ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಸಂಜೆ 6ಕ್ಕೆ.
- **ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಭುವನೇಶ್ವರ್ ಮಾಜಿ ಮುಖ್ಯ ವಿಜ್ಞಾನಿ ಸಿಎಸ್‌ಐಆರ್ ಡಾ. ಆರ್. ಭೀಮರಾವ್ ಅವರಿಂದ ತಾಂತ್ರಿಕ ಉಪನ್ಯಾಸ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಆಸ್ತಿ ಜಗಳ: ಹತ್ಯೆಯಲ್ಲಿ ಅಂತ್ಯ

ಮೈಸೂರು, ಮೇ 26(ಎಸ್‌ಬಿಡಿ)– ಪಿತ್ರಾರ್ಜಿತ ಆಸ್ತಿ ವಿಚಾರವಾಗಿ ನಡೆದ ಗಲಾಟೆ ವ್ಯಕ್ತಿಯೊಬ್ಬರ ಹತ್ಯೆಯಲ್ಲಿ ಅಂತ್ಯವಾಗಿರುವ ಘಟನೆ ಮೈಸೂರು ತಾಲೂಕಿನ ಕರಡಿಮರಯ್ಯನಹುಂಡಿ (ಕೆ.ಎಂ.ಹುಂಡಿ) ಗ್ರಾಮದಲ್ಲಿ ಬುಧವಾರ ರಾತ್ರಿ ನಡೆದಿದೆ.



ಗ್ರಾಮದ ನಂಜುಂಡ(54) ಅವರನ್ನು ಸೋದರ ಸಂಬಂಧಿಗಳಾದ ಶಿವಣ್ಣ ಹಾಗೂ ಕೃಷ್ಣ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಿತ್ರಾರ್ಜಿತ ಆಸ್ತಿ ಹಂಚಿಕೆ ವಿಚಾರವಾಗಿ ನಂಜುಂಡ ಹಾಗೂ ಸೋದರ ಸಂಬಂಧಿ ಲೇಟ್ ಮಾಲೇಗೌಡರ ಕುಟುಂಬಗಳ ನಡುವೆ ವ್ಯಾಜ್ಯವಿತ್ತು. ಈ ಸಂಬಂಧ ನಂಜುಂಡ ಅವರ ನ್ಯಾಯಾಲಯದ ಮೆಟ್ಟಿಲು ಏರಿದ್ದರು. ಇದೇ ವಿಚಾರಕ್ಕೆ ಮಾಲೇಗೌಡರ ಮಕ್ಕಳಾದ ಶಿವಣ್ಣ ಹಾಗೂ ಕೃಷ್ಣ ಬುಧವಾರ ರಾತ್ರಿ 7.45ರ ವೇಳೆಗೆ ನಂಜುಂಡ ಅವರ ಮನೆ ಬಳಿ ತೆರಳಿ ಜಗಳವಾಡಿದ್ದಾರೆ. ಎರಡೂ ಕುಟುಂಬಗಳ ಜಗಳ ಅತಿರೇಕಕ್ಕೆ ತಿರುಗಿ ಶಿವಣ್ಣ ಹಾಗೂ ಕೃಷ್ಣ ಚಾಕುವಿನಿಂದ ನಂಜುಂಡ ಅವರಿಗೆ ಇರಿದಿದ್ದಾರೆ. ಪರಿಣಾಮ ರಕ್ತಸ್ರಾವದಿಂದ ಕುಸಿದು ಬಿದ್ದ ನಂಜುಂಡ ಅವರನ್ನು ಕೂಡಲೇ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಒಂದೇ ಗಂಟೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ಆರೋಪಿಗಳಾದ ಶಿವಣ್ಣ, ಕೃಷ್ಣ ಹಾಗೂ ಹತ್ಯೆಗೆ ಕುಮ್ಮಕ್ಕು ನೀಡಿದ ಆರೋಪದಡಿ ಮತ್ತೊರ್ವ ಸಹೋದರ ಬಸವರಾಜು ಸೇರಿ ಒಟ್ಟು ಮೂವರ ವಿರುದ್ಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈಗಾಗಲೇ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮತ್ತೊಂದು ಮೂಲದಿಂದ ತಿಳಿದುಬಂದಿದೆ.

ಬೈಕ್‌ಗೆ ಶಾಲಾ ವ್ಯಾನ್ ಡಿಕ್ಕಿ; ವಿದ್ಯಾರ್ಥಿನಿ ಸಾವು

ಬೆಂಗಳೂರು, ಮೇ 26– ಬೈಕ್‌ಗೆ ಶಾಲಾ ವ್ಯಾನ್ ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿನಿ ಸ್ಥಳದಲ್ಲೇ ಸಾವನ್ನಪ್ಪಿ ಮತ್ತೊರ್ವ ವಿದ್ಯಾರ್ಥಿನಿ ಹಾಗೂ ವಿದ್ಯಾರ್ಥಿ ಗಾಯಗೊಂಡ ಘಟನೆ ಬೆಂಗಳೂರಿನ ಬನಶಂಕರಿಯಲ್ಲಿ ಗುರುವಾರ ಸಂಭವಿಸಿದೆ.



ಹಾರೋಹಳ್ಳಿ ನಿವಾಸಿ ಕೀರ್ತನಾ (16) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಹರ್ಷಿತಾ ಮತ್ತು ದರ್ಶನ್ ಗಾಯಗೊಂಡು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕೀರ್ತನಾ ತೇರ್ಗಡೆ ಹೊಂದಿದ್ದಳು. ನಾಗರಬಾವಿಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪ್ರವೇಶ ಪಡೆಯುವುದರ ಬಗ್ಗೆ ವಿಚಾರಿಸಲೆಂದು ತನ್ನ ಸ್ನೇಹಿತ ದರ್ಶನ್ ಬೈಕ್‌ನಲ್ಲಿ ಕೀರ್ತನಾ ಮತ್ತು ಆಕೆಯ ಸಹೋದರಿ ಹರ್ಷಿತಾ ತೆರಳುತ್ತಿದ್ದಾಗ ಬನಶಂಕರಿ ರಾಣಿಚೆನ್ನಮ್ಮ ಫ್ಲೈಓವರ್‌ನಿಂದ ವೇಗವಾಗಿ ಬಂದ ಪಬ್ಲಿಕ್ ಶಾಲೆಯ ವ್ಯಾನ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕೀರ್ತನಾ ಸ್ಥಳದಲ್ಲೇ ಸಾವನ್ನಪ್ಪಿ, ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ. ಅಪಘಾತ ಸಂಭವಿಸುತ್ತಿದ್ದಂತೆಯೇ ವ್ಯಾನ್ ಚಾಲಕ ಪರಾರಿಯಾಗಿದ್ದು, ಬನಶಂಕರಿ ಸಂಚಾರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಡೊನೇಷನ್ ಹಾವಳಿ: ಶಾಲೆ ವಿರುದ್ಧ ಕ್ರಮಕ್ಕೆ ಕಾಂಗ್ರೆಸ್ ಮುಖಂಡ ಡಿಡಿಪಿಐಗೆ ದೂರು

ಮೈಸೂರು, ಮೇ 26– ಇಲವಾಲ ಬಳಿ ಇರುವ ಸಂತ ಜೋಸೆಫ್‌ರ ಸೆಂಟ್ರಲ್ ಶಾಲೆಯಲ್ಲಿ ವಿದ್ಯಾರ್ಥಿಗಳ ಪೋಷಕರಿಂದ ಡೊನೇಷನ್ ಪಡೆಯುತ್ತಿದ್ದು, ಈ ಶಾಲೆ ಆಡಳಿತ ಮಂಡಳಿ ವಿರುದ್ಧ ಕಾನೂನು ಕ್ರಮ ಕೈಗೊಂಡು ಡೊನೇಷನ್ ಹಾವಳಿ ತಪ್ಪಿಸಬೇಕೆಂದು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಹುಯಿಲಾಳು ರಾಮಸ್ವಾಮಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ದೂರು ಸಲ್ಲಿಸಿದ್ದಾರೆ. ಕಳೆದ 2 ವರ್ಷದ ಹಿಂದೆ ಎಲ್‌ಕೆಜಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಪೋಷಕರಿಂದ ಡೊನೇಷನ್ ಪಡೆದಿರುವ ಈ ಶಾಲೆಯ ಆಡಳಿತ ಮಂಡಳಿಯು ಇದೀಗ ಅದೇ ಮಕ್ಕಳಿಗೆ 1 ತರಗತಿ ಪ್ರವೇಶಕ್ಕೂ ಕೂಡ ಡೊನೇಷನ್ ಕೇಳುತ್ತಿದ್ದು, ಒಂದು ವೇಳೆ ಡೊನೇಷನ್ ನೀಡದಿದ್ದರೆ ಟಿಸಿ ತೆಗೆದುಕೊಂಡು ಹೋಗಿ ಎಂದು ಹೇಳುತ್ತಿದ್ದಾರೆ. ಇದರಿಂದಾಗಿ ಪೋಷಕರಿಗೆ ತೊಂದರೆಯಾಗಿದೆ ಎಂದು ಅವರು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ವರದಕ್ಷಿಣೆ ಕಿರುಕುಳ: ಪೊಲೀಸರಿಗೆ ಸಾಫ್ಟ್‌ವೇರ್ ಇಂಜಿನಿಯರ್ ದೂರು

ಮೈಸೂರು, ಮೇ 26– ಬೆಂಗಳೂರಿಗೆ ವಿವಾಹವಾಗಿರುವ ಮೈಸೂರಿನ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರಿಗೆ ವರದಕ್ಷಿಣೆ ಕಿರುಕುಳ ನೀಡಿರುವ ಬಗ್ಗೆ ಮೈಸೂರಿನ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ಮೈಸೂರಿನ ಕುವೆಂಪುನಗರ ಕೆ ಬ್ಲಾಕ್ ನಿವಾಸಿ ಸಾಫ್ಟ್‌ವೇರ್ ಇಂಜಿನಿಯರ್ ಶ್ರೀದೇವಿ(30) ವರದಕ್ಷಿಣೆ ಕಿರುಕುಳ ದೂರು ದಾಖಲಿಸಿದ್ದಾರೆ. ಇವರು 2015ರ ಅಕ್ಟೋಬರ್ 23ರಂದು ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್ ದಿಲೀಪ್ ಕುಮಾರ್(34) ಎಂಬುವರನ್ನು ವಿವಾಹವಾಗಿದ್ದರು. ವಿವಾಹದ ವೇಳೆ ಸಾಕಷ್ಟು ವರದಕ್ಷಿಣೆ ನೀಡಿದ್ದರೂ, ಮದುವೆಯಾದ ಕೆಲ ತಿಂಗಳಲ್ಲೇ ಪತಿ ದಿಲೀಪ್ ಕುಮಾರ್ ಅವರ ಕುಟುಂಬದವರಾದ ಸಾವಿತ್ರಿ, ಶ್ರೀಕಂಠಯ್ಯ, ದೀಪಕ್, ವಿದ್ಯಾ ಮತ್ತು ದಿವ್ಯಾ ಅವರುಗಳು ಹೆಚ್ಚಿನ ವರದಕ್ಷಿಣೆಗಾಗಿ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಿದರೆಂದು ದೂರಿನಲ್ಲಿ ತಿಳಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ತಮ್ಮ ಪೋಷಕರು ಮತ್ತೆ ಸಾಕಷ್ಟು ವರದಕ್ಷಿಣೆ ನೀಡಿದ್ದರೂ ನಿವೇಶನ ಕೊಡಬೇಕೆಂದು ಪತಿ ಮನೆಯವರು ಪೀಡಿಸಲಾರಂಭಿಸಿದರು. ನಿವೇಶನ ಕೊಡದ ಕಾರಣ ತಾನೂ ಹೆಣ್ಣು ಮಗು ಹೆತ್ತಿದ್ದೇನೆ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, 2021ರ ಅಕ್ಟೋಬರ್ 29 ರಂದು ತನ್ನನ್ನು ಮೈಸೂರಿನ ತವರು ಮನೆಗೆ ಬಿಟ್ಟು ಹೋಗಿದ್ದಾರೆ ಎಂದು ಸಾಫ್ಟ್‌ವೇರ್ ಇಂಜಿನಿಯರ್ ಶ್ರೀದೇವಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಮಹಿಳೆ ಚಾಲನೆ ಮಾಡುತ್ತಿದ್ದ ಕಾರು ಡಿಕ್ಕಿ: ಮೊಪೆಡ್ ಸವಾರ ಸಾವು

ಮೈಸೂರು, ಮೇ 26– ಮಹಿಳೆ ಚಾಲನೆ ಮಾಡುತ್ತಿದ್ದ ಕಾರು ಟಿವಿಎಸ್ ಮೊಪೆಡ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಮೈಸೂರಿನ ಲಲಿತ್ ಮಹಲ್ ರಸ್ತೆಯಲ್ಲಿ ನಡೆದಿದೆ. ಈ ಸಂಬಂಧ ಮೇ 25 ರಂದು ಸಿದ್ಧಾರ್ಥ ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ನಜರ್‌ಬಾದ್ ನಿವಾಸಿ ವಿಶ್ವನಾಥ್ ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಟಿವಿಎಸ್ ಎಕ್ಸೆಲ್ ಮೊಪೆಡ್ (ಕೆಎ–55, ಇಬಿ–5149) ನಲ್ಲಿ ಲಲಿತ್‌ಮಹಲ್ ರಸ್ತೆಯ ಕುರುಬಾರಹಳ್ಳಿ ಸರ್ಕಲ್ ಕಡೆಯಿಂದ ಎಂಆರ್‌ಸಿ ಸರ್ಕಲ್ ಕಡೆಗೆ ಹೋಗುತ್ತಿದ್ದಾಗ ಮಹಿಳೆ ಚಾಲನೆ ಮಾಡುತ್ತಿದ್ದ ಕಾರು(ಕೆಎ–05, ಎಂಎಂ–5988) ಮೊಪೆಡ್‌ಗೆ ಡಿಕ್ಕಿ ಹೊಡೆದಿದೆ. ಇದರ ಪರಿಣಾಮವಾಗಿ ತೀವ್ರವಾಗಿ ಗಾಯಗೊಂಡ ವಿಶ್ವನಾಥ್ ಅವರನ್ನು ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಅವರು ಮೃತಪಟ್ಟಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕುರಿ ಖರೀದಿಸಿ ಹಣ ನೀಡದೆ ವಂಚನೆ: ಪೊಲೀಸರಿಗೆ ದೂರು

ಮೈಸೂರು, ಮೇ 26– ರೈತನಿಂದ ಕುರಿ ಖರೀದಿಸಿ ಹಣ ನೀಡದೇ ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ. ತುಮಕೂರು ಜಿಲ್ಲೆ ಹಿರಿಯೂರು ತಾಲೂಕು ಜವಗನಹಳ್ಳಿ ರೈತ ಗಿರಿಯಪ್ಪ ವಂಚನೆಗೊಳಗಾದವರಾಗಿದ್ದು, ಇವರಿಗೆ ಮೈಸೂರಿನ ಕೆಸರೆ ನಿವಾಸಿಗಳಾದ ಇರ್ಫಾನ್ ಖಾನ್ ಮತ್ತು ಇಮ್ರಾನ್ ಖಾನ್ 3.25 ಲಕ್ಷ ರೂ. ವಂಚನೆ ಎಸಗಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ತುಮಕೂರು ಜಿಲ್ಲೆಯ ಗಿರಿಯಪ್ಪ ಅವರಿಗೆ ಸ್ನೇಹಿತನ ಮೂಲಕ ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಇರ್ಫಾನ್ ಖಾನ್ ಮತ್ತು ಇಮ್ರಾನ್ ಖಾನ್ ಪರಿಚಯವಾಗಿದ್ದಾರೆ. ಗಿರಿಯಪ್ಪ ಅವರಿಂದ ಕುರಿಗಳನ್ನು ಖರೀದಿಸಲಿರುವುದಾಗಿ ಇವರು ಹೇಳಿದ ಕಾರಣ ಕುರಿ ಸಾಕಾಣಿಕೆ ಮಾಡುತ್ತಿದ್ದ ಗಿರಿಯಪ್ಪ 2021ರ ಡಿಸೆಂಬರ್ 14 ರಂದು ತಮ್ಮ ಬೊಲೆರೋ ವಾಹನದಲ್ಲಿ 22 ಕುರಿಗಳನ್ನು ತಂದು ಮೈಸೂರಿನ ಎಲ್‌ಐಸಿ ವೃತ್ತದಲ್ಲಿ ಇವರಿಗೆ ನೀಡಿದ್ದು, ಆಗ ಕುರಿಗಳ ಬೆಲೆ ಒಟ್ಟು 66 ಸಾವಿರ ರೂ.ಗಳನ್ನು ನೀಡಿದ್ದಾರೆ. ಮತ್ತೆ ಡಿ.24ರಂದು ಗಿರಿಯಪ್ಪ ಅವರಿಂದ 53 ಕುರಿಗಳನ್ನು ಪಡೆದ ಇವರು 2,09,350 ರೂ.ಗಳ ಪೈಕಿ ಅರ್ಧದಷ್ಟು ಹಣ ನಗದಾಗಿ ಹಾಗೂ ಉಳಿಕೆ ಅರ್ಧದಷ್ಟು ಹಣ ಫೋನ್ ಪೇ ಮೂಲಕ ನೀಡಿದ್ದಾರೆ. ಕಳೆದ ಜನವರಿ ತಿಂಗಳಿನಲ್ಲಿ 3.25 ಲಕ್ಷ ರೂ. ಮೌಲ್ಯದ ಕುರಿಗಳನ್ನು ಖರೀದಿಸಿದ ಇರ್ಫಾನ್ ಖಾನ್ ಮತ್ತು ಇಮ್ರಾನ್ ಖಾನ್ ರೈತನಿಗೆ ಹಣ ನೀಡದೇ ಸತಾಯಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಇವರಿಬ್ಬರು ಕುರಿ ಖರೀದಿಗಾಗಿ ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರಕ್ಕೆ ಬಂದಾಗ ವಿಷಯ ತಿಳಿದು ಅಲ್ಲಿಗೆ ತೆರಳಿದ ಗಿರಿಯಪ್ಪ ಇವರ ವಿರುದ್ಧ ಅಲ್ಲಿನ ಠಾಣೆಗೆ ದೂರು ಸಲ್ಲಿಸಿದ್ದು, ಇವರಿಬ್ಬರು ಶೀಘ್ರವೇ ಹಣ ನೀಡುವುದಾಗಿ ಠಾಣೆಯಲ್ಲಿ ಹೇಳಿಕೆ ನೀಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿರುವ ಗಿರಿಯಪ್ಪ ನಂತರವೂ ಹಣ ನೀಡದೇ ತನಗೆ ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ ಎಂದು ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ನರಸಿಂಹರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪ್ರಾಚೀನ ವೈದಿಕ ಸಂಪ್ರದಾಯ ಉತ್ತೇಜಿಸುವ ದೈವಿಕ ಮಾರ್ಗದರ್ಶಿ ಗಣಪತಿ ಸಚ್ಚಿದಾನಂದ ಶ್ರೀಗಳು

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಬಣ್ಣನೆ

ಮೈಸೂರು,ಮೇ 26(ಪಿಎಂ)– ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಧ್ಯಾನ ಮತ್ತು ಸಂಗೀತಕ್ಕೆ ಖ್ಯಾತನಾಮರು. ಅವರು ಪ್ರಾಚೀನ ವೈದಿಕ ಸಂಪ್ರದಾಯಗಳನ್ನು ಉತ್ತೇಜಿಸುವ ದೈವಿಕ ಮಾರ್ಗದರ್ಶಿ ಎಂದು ಪರಿಗಣಿಸಲ್ಪಟ್ಟಿದ್ದಾರೆ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಬಣ್ಣಿಸಿದರು.



ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಜನ್ಮದಿನೋತ್ಸವದಲ್ಲಿ ಶ್ರೀಗಳಿಗೆ ಮಾಲಾರ್ಪಣೆ ಮೂಲಕ ಗೌರವ ಸಲ್ಲಿಸಿ, ಜನ್ಮದಿನದ ಶುಭಾಶಯ ತಿಳಿಸಿ, ಶ್ರೀಗಳ ಆಶೀರ್ವಾದ ಪಡೆದು ಅವರು ಮಾತನಾಡಿದರು.

ಶ್ರೀಗಳು ನಾದಬ್ರಹ್ಮ. ಅವರ ಈ ಉಪಾಸನೆಯು ರಾಷ್ಟ್ರಕ್ಕೆ ದೊಡ್ಡ ಸೇವೆಯಾಗಿದೆ. ನಮ್ಮ ಸಂಗೀತ ಪರಂಪರೆ ಉಳಿಸಲು ಅವರ ಈ ಸೇವೆ ಸಹಾಯಕ. ದತ್ತಾತ್ರೇಯರು ಇರುವೆಯಿಂದ ಹಿಡಿದು ಆನೆಯವರೆಗೆ ಪ್ರಕೃತಿಯಲ್ಲಿ 24 ಗುರುಗಳನ್ನು ಕಂಡುಕೊಂಡಿದ್ದಾರೆ. ಇದು ಪ್ರಕೃತಿಯನ್ನು ಆರಾಧಿಸುವ ಸಾಮರಸ್ಯದ ಸಂಕೇತ. ಪರಿಸರ ಸಂರಕ್ಷಣೆ, ಶುಕವನದ ಸ್ಥಾಪನೆ ಮತ್ತು ಪಕ್ಷಿಗಳ ಪುನರ್ವಸತಿಗಾಗಿ ಶ್ರಮಿಸುತ್ತಿರುವ ಸ್ವಾಮೀಜಿಯವರು ನಮ್ಮೊಂದಿಗೆ ಇರುವುದಕ್ಕೆ ನಾವು ಧನ್ಯರು ಎಂದು ನುಡಿದರು.

ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮವು ಅದ್ಭುತವಾದ ಆಧ್ಯಾತ್ಮಿಕ ಸ್ಥಳ. ಇಲ್ಲಿನ ಪಕ್ಷಿಧಾಮವು 2,100ಕ್ಕೂ ಹೆಚ್ಚು ಪಕ್ಷಿಗಳನ್ನು ಹೊಂದಿದೆ. ಪರಿಸರ ಹಾಗೂ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸುವ ಇಂತಹ ಕಾರ್ಯಗಳು ಅತ್ಯಂತ ದೈವಿಕವಾದುದು. ಅಲ್ಲದೆ, ಮುಂದಿನ ಪೀಳಿಗೆಗೆ ಸುಸ್ಥಿರತೆಗೆ ಇದು ಸಹಾಯಕ. ಸ್ವಾಮೀಜಿಯವರ ಸೇವೆ ಮತ್ತು ಸಾಧನೆಗಳು ಗಿನ್ನೆಸ್ ಬುಕ್ ಆಫ್ ರೆಕಾರ್ಡ್‌ನಂತಹ ಅನೇಕ ಪ್ರಶಸ್ತಿಗಳು ಮತ್ತು ಮನ್ನಣೆಗಳಿಂದ ಗುರುತಿಸಲ್ಪಟ್ಟಿವೆ ಎಂದು ಹೇಳಿದರು.


ಗೋವಾ ಅನೇಕ ಸಂತರಿಂದ ಆಶೀರ್ವದಿಸಲ್ಪಟ್ಟ ಪುಣ್ಯಭೂಮಿ. ಇಲ್ಲಿನ ದತ್ತ ದೇವಾಲಯಗಳಿಗೆ ಭೇಟಿ ನೀಡಿ ಗೋವಾ ರಾಜ್ಯಕ್ಕೆ ಆಶೀರ್ವದಿಸುವಂತೆ ಸ್ವಾಮೀಜಿಯವರನ್ನು ಕೋರುತ್ತೇನೆ. ಗೋವಾದ ಸಾಂಸ್ಕೃತಿಕ ಪರಂಪರೆಯನ್ನು ಉತ್ಕೃಷ್ಟಗೊಳಿಸುವ ನಮ್ಮ ಪ್ರಯತ್ನಗಳಿಗೆ ಸ್ವಾಮೀಜಿಯವರ ಆಶೀರ್ವಾದ ಕೋರುತ್ತೇನೆ ಎಂದರು.

ಸ್ವಾಮೀಜಿಯವರ ಜನ್ಮದಿನದ ಇಂತಹ ಪುಣ್ಯ ಸಂದರ್ಭದಲ್ಲಿ ಉಪಸ್ಥಿತರಿರುವುದು ನನ್ನ ಅದೃಷ್ಟ. ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಶ್ರೀಮಂತ ಜ್ಞಾನವಾದ ವೇದಗಳನ್ನು ಭಕ್ತರಿಗೆ ಸರಳ ಭಾಷೆಯಲ್ಲಿ ಭಾಷಾಂತರಿಸುವ ಮಹಾನ್ ಕಾರ್ಯಕ್ಕೆ ಹೆಸರಾಗಿದ್ದಾರೆ. ವೇದಗಳ ಶ್ರೀಮಂತ ಸಂಪ್ರದಾಯಗಳನ್ನು ಪ್ರಚಾರ ಮಾಡುವಲ್ಲಿ ಆಶ್ರಮದ ಮಹತ್ವದ ಕಾರ್ಯ ಇದೇ ರೀತಿ ಮುಂದುವರಿಯಲಿ ಎಂದು ಆಶಿಸಿದರು.

ವಾನರ ಸೇನೆಯೊಂದಿಗೆ ಬಾಣ ಪ್ರಯೋಗಿಸುವಲ್ಲಿ ತಲ್ಲೀನನಾದ ಶ್ರೀರಾಮ; ಶ್ರೀಗಳ ಭಾವಚಿತ್ರದ ಹಿನ್ನೆಲೆಯ ವಿಶೇಷ ಅಂಚೆ ಲಕೋಟೆ ಬಿಡುಗಡೆ

ಶ್ರೀಗಳ ಭಾವಚಿತ್ರವಿರುವ ವಿಶೇಷ ಅಂಚೆ ಚೀಟಿಯನ್ನೂ ಬಿಡುಗಡೆಗೊಳಿಸಿದ ಗೋವಾ ಸಿಎಂ ಪ್ರಮೋದ್

ಮೈಸೂರು,ಮೇ 26(ಪಿಎಂ)– ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವದ ಅಂಗವಾಗಿ ಅಂಚೆ ಇಲಾಖೆ ವತಿಯಿಂದ ಹೊರ ತಂದಿರುವ ವಿಶೇಷ ಅಂಚೆ ಲಕೋಟೆ ಹಾಗೂ ವಿಶೇಷ ಅಂಚೆ ಚೀಟಿಯನ್ನು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಬಿಡುಗಡೆ ಮಾಡಿದರು.



ಈ ವಿಶೇಷ ಅಂಚೆ ಲಕೋಟೆಯಲ್ಲಿ ಶ್ರೀಗಳ ಭಾವಚಿತ್ರದೊಂದಿಗೆ ಅವರ 80ನೇ ಜನ್ಮದಿನಾಚರಣೆ ಬಗ್ಗೆ ಆಂಗ್ಲ ಭಾಷೆಯಲ್ಲಿ ಉಲ್ಲೇಖಿಸಲಾಗಿದೆ. ಜೊತೆಗೆ ವಾನರ ಸೇನೆಯೊಂದಿಗೆ ಶ್ರೀರಾಮನು ಬಾಣ ಪ್ರಯೋಗಿಸುತ್ತಿರುವ ಚಿತ್ರಣವೂ ಇದೆ. ವಿಶೇಷ ಅಂಚೆ ಚೀಟಿಯು ಶ್ರೀಗಳ ಭಾವಚಿತ್ರ ಒಳಗೊಂಡಿದೆ. ಶ್ರೀಗಳ 80ನೇ ಜನ್ಮದಿನದ ಸವಿನೆನಪಿಗಾಗಿ ಇವುಗಳನ್ನು ಹೊರತಂದಿದೆ.

ಭಾರತ ಸರ್ಕಾರದ ಮಾಜಿ ಕಾರ್ಯದರ್ಶಿ ಮತ್ತು ಕೇಂದ್ರೀಯ ಆಡಳಿತ ನ್ಯಾಯಮಂಡಳಿಯ (ಹೈದರಾಬಾದ್ ಪೀಠ) ಮಾಜಿ ಸದಸ್ಯ ಹಾಗೂ ಶ್ರೀಗಳ ಭಕ್ತರೂ ಆದ ಬಿ.ವಿ.ಸುಧಾಕರ್ ಸಮ್ಮುಖದಲ್ಲಿ ಅಂಚೆ ಲಕೋಟೆ ಮತ್ತು ಅಂಚೆ ಚೀಟಿ ಬಿಡುಗಡೆ ಮಾಡಲಾಯಿತು.

ಅಲ್ಲದೆ, 'ಕೀರ್ತನ ಚಂದ್ರಿಕಾ' (ಸ್ವಾಮೀಜಿಯವರ ಕಂಠಸಿರಿಯ 80 ಭಜನೆಗಳ ಸಂಪುಟ) ಆಡಿಯೋ ಆಲ್ಬಂ (ಯುಎಸ್‌ಪಿ ಮಾದರಿ) ಅನ್ನು ಗೋವಾ ಮುಖ್ಯಮಂತ್ರಿ ಬಿಡುಗಡೆಗೊಳಿಸಿದರು. ಸಿಂಗಾಪುರನ ಮೌಟ್ ಎಲಿಜಬೆತ್ ಆಸ್ಪತ್ರೆಯ ಹೃದಯ ತಜ್ಞರೂ ಆದ ಆಶ್ರಮದ ಭಕ್ತ ಡಾ.ಜಯರಾಮನ್ ಅವರಿಗೆ ಆಲ್ಬಂನ ಮೊದಲ ಪ್ರತಿಯನ್ನು ಶ್ರೀಗಳು ನೀಡಿದರು.



ಗಣಪತಿ ಸಚ್ಚಿದಾನಂದ ಶ್ರೀಗಳ ಜನ್ಮದಿನೋತ್ಸವದ ಹಿನ್ನೆಲೆಯಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಉದ್ಯಮಿ ಶಿವ ಮಾದೇಗೌಡ, ಮುಖಂಡ ಪ್ರಭು ಇತರರು ಶ್ರೀಗಳಿಗೆ ಶುಭಾಶಯ ಕೋರಿ, ಆಶೀರ್ವಾದ ಪಡೆದರು.

ಸಿಧು ಜೈಲಲ್ಲಿ ಗುಮಾಸ್ತ; ದಿನಕ್ಕೆ 90 ರೂ. ಕೂಲಿ

ಚಂಡೀಗಢ, ಮೇ 26– ಒಂದು ವರ್ಷ ಕಠಿಣ ಜೈಲು ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಪಟಿಯಾಲಾ ಕೇಂದ್ರ ಕಾರಾಗೃಹದಲ್ಲಿ ಗುಮಾಸ್ತನ ಕೆಲಸ ಮಾಡುತ್ತಿದ್ದಾರೆ. 34 ವರ್ಷಗಳ ಹಿಂದೆ ರಸ್ತೆಯಲ್ಲಿ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ 1 ವರ್ಷ ಕಠಿಣ ಸಜೆಗೆ ಗುರಿಯಾಗಿರುವ ಸಿಧು ಅವರನ್ನು ಪಟಿಯಾಲಾ ಕೇಂದ್ರ ಕಾರಾಗೃಹದ ಕೊಠಡಿ ಸಂಖ್ಯೆ 10 ರಲ್ಲಿ ಇರಿಸಲಾಗಿದೆ. ಈಗ ಅವರನ್ನು 90 ರೂಪಾಯಿ ದಿನಗೂಲಿಗೆ ಗುಮಾಸ್ತನ ಕೆಲಸಕ್ಕೆ ನೇಮಿಸಲಾಗಿದೆ. ಮೊದಲ 3 ತಿಂಗಳು ಕೂಲಿ ನೀಡದೇ ತರಬೇತಿ ನೀಡಲಾಗುತ್ತದೆ. ಒಂದು ವರ್ಷದ ಅವಧಿಯಲ್ಲಿ ಅವರು ದುಡಿದ ಒಟ್ಟು ಹಣವು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮೆಯಾಗಲಿದೆ ಎಂದು ಕಾರಾಗೃಹದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.



ಕೆಲಸದ ಸಮಯ ಹೇಗೆ?: ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಹಾಗೂ ಮಧ್ಯಾಹ್ನ 3 ರಿಂದ ಸಂಜೆ 5 ಗಂಟೆಯವರೆಗೆ ಸಿಧು ಕೆಲಸ ಮಾಡುತ್ತಾರೆ. ಇದರ ನಡುವೆ 2 ಗಂಟೆಗಳ ಕಾಲ ವಿರಾಮ ನೀಡಲಾಗುತ್ತದೆ. ಅವರ ಕೊಠಡಿ ಹಾಗೂ ಕೆಲಸ ಮಾಡುವ ಸ್ಥಳದಲ್ಲಿ ಹೆಚ್ಚಿನ ಭದ್ರತೆ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುಡಾದಲ್ಲಿ ನಿವೇಶನಗಳ ದಾಖಲೆ ನಾಪತ್ತೆ ಎರಡ್ಮೂರು ದಿನದಲ್ಲಿ ಆಯುಕ್ತರಿಗೆ ವರದಿ

ಮೈಸೂರು, ಮೇ 26(ಎಂಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ಕಳೆದೊಂದು ತಿಂಗಳಿಂದ ನಡೆದ ದಾಖಲೆಗಳ ಪರಿಶೀಲನೆ ಪೂರ್ಣಗೊಂಡಿದ್ದು, ಪರಿಶೀಲನಾ ವರದಿಯನ್ನು ಮುಂದಿನ ಎರಡ್ಮೂರು ದಿನಗಳಲ್ಲಿ ಆಯುಕ್ತರಿಗೆ ನೀಡಲಾಗುವುದು ಎಂದು ಮುಡಾ ಕಾರ್ಯದರ್ಶಿ ವೆಂಕಟರಾಜು ತಿಳಿಸಿದರು.



ವಿಶೇಷ ತಹಸೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್, ನಿವೇಶನ ಶಾಖೆ, ಇ–ಖಾತಾ ಶಾಖೆಯ ಸುಮಾರು 20ಕ್ಕೂ ಹೆಚ್ಚು ಮಂದಿ ಅಧಿಕಾರಿಗಳನ್ನೊಳಗೊಂಡ 6 ತಂಡಗಳು ವಿವಿಧ ಬಡಾವಣೆಯ ನಿವೇಶನ ಹಂಚಿಕೆ ಮಾಡಿರುವ ಮೂಲ ಕಡತಗಳ ಪ್ರತಿಯೊಂದು ಪುಟಗಳನ್ನೂ ಪರಿಶೀಲಿಸುತ್ತಿದೆ. ದಾಖಲೆಗಳ ಪುಟ ಸಂಖ್ಯೆ, ಹಣ ಪಾವತಿಸಿರುವ ಚಲನ್, ಹಂಚಿಕೆ ಪತ್ರ, ಕ್ರಯ ಪತ್ರ, ಸ್ವಾಧೀನ ಪತ್ರ, ಖಾತಾ ಪತ್ರ, ಕ್ರಯ ವರ್ಗಾವಣೆ ಪತ್ರ, ಟೈಟಲ್ ಡೀಡ್, ಇಸಿ ಸೇರಿದಂತೆ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ವರದಿ ನೀಡಿದ್ದಾರೆ. ದಾಖಲೆಗಳ ಪರಿಶೀಲನಾ ವರದಿಯನ್ನು ಆಯುಕ್ತರಿಗೆ ನೀಡಿದ ಬಳಿಕ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೆಲಸ ಕೊಡಿಸುವುದಾಗಿ 13.83 ಲಕ್ಷ ವಂಚನೆ: ಗೃಹಿಣಿಯಿಂದ ಪೊಲೀಸರಿಗೆ ದೂರು

ಮೈಸೂರು, ಮೇ 26– ಕೆಲಸ ಕೊಡಿಸುವ ನೆಪದಲ್ಲಿ ಗೃಹಿಣಿಯೊಬ್ಬರಿಗೆ 13.83 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಹಿನಕಲ್ ನಿವಾಸಿ ಆರ್. ಪೂರ್ಣಿಮಾ (32) ಹಣ ಕಳೆದುಕೊಂಡವರಾಗಿದ್ದು, ಇವರಿಗೆ ಬೆಂಗಳೂರಿನವರು ಎನ್ನಲಾದ ಜಗದೀಶ್, ನಿಶಾಂತ್, ದೀಕ್ಷಿತ್, ಪ್ರಭು, ವೆಂಕಟೇಶ್ ಮತ್ತು ಕಿಶೋರ್ ಎಂಬುವರು ವಿವಿಧ ಮೊಬೈಲ್‌ಗಳಿಂದ ಕರೆ ಮಾಡಿ ಕೆಲಸ ಕೊಡಿಸುವುದಾಗಿ ನಂಬಿಸಿ 13.83 ಲಕ್ಷ ರೂ.ಗಳನ್ನು ಗೂಗಲ್ ಪೇ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ: ನಿವೃತ್ತ ಪ್ರೊಫೆಸರ್ ಬ್ಯಾಂಕ್ ಖಾತೆಯಿಂದ ಅಪರಿಚಿತ ವ್ಯಕ್ತಿಯ ಖಾತೆಗೆ 5.07 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆಯಾಗಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ವಿ.ರವಿಶಂಕರ್ ರಾಯ್ (64) ಎಂಬುವರ ಎಸ್‌ಬಿಐನಲ್ಲಿ ಖಾತೆ ಹೊಂದಿದ್ದಾರೆ. ಇವರ ಖಾತೆಯಿಂದ ಹಂತ ಹಂತವಾಗಿ 'ಡಮ್ಮಿ ನೇಮ್' ಎಂಬ ಹೆಸರಿನ ಮೊಬೈಲ್ ನಂಬರ್ ಹೊಂದಿರುವ ಖಾತೆಗೆ ಹಂತ ಹಂತವಾಗಿ ಗೂಗಲ್ ಪೇ ಮೂಲಕ 5.07,900 ರೂಗಳು ಅಕ್ರಮವಾಗಿ ವರ್ಗಾವಣೆ ಯಾಗಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ಎರಡೂ ಪ್ರಕರಣಗಳನ್ನು ದಾಖಲಿಸಿಕೊಂಡಿರುವ ಮೈಸೂರು ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಗುರು ದತ್ತಾತ್ರೇಯನ ಸ್ಮರಣೆಯಿಂದ ಎಲ್ಲರೂ ಸಂತುಷ್ಟರಾಗಬಹುದು

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶೀರ್ವಚನ

ಮೈಸೂರು,ಮೇ 26(ಪಿಎಂ)– ಯೋಗಿ, ಭೋಗಿ, ತ್ಯಾಗಿ ಮತ್ತು ವಿರಾಗಿ ಸೇರಿದಂತೆ ಎಲ್ಲರೂ ಗುರುವಾದ ದತ್ತಾತ್ರೇಯನ ಸ್ಮರಣೆಯಿಂದ ಸಂತುಷ್ಟರಾಗಬಹುದು ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹೇಳಿದರು.

ಆಶ್ರಮದ ನಾದ ಮಂಟಪದಲ್ಲಿ ಹಮ್ಮಿಕೊಂಡಿದ್ದ ತಮ್ಮ ಜನ್ಮದಿನೋತ್ಸವದಲ್ಲಿ ಭಕ್ತರಿಗೆ ಅನುಗ್ರಹ ಭಾಷಣ ಮಾಡಿದ ಅವರು, ನೀವು ಯಜ್ಞ, ಯಾಗ, ಹೋಮ, ವಿಶೇಷ ಅಭಿಷೇಕ ಸೇರಿದಂತೆ ಯಾವುದೇ ಪೂಜಾ ಕೈಂಕರ್ಯ ಮಾಡಿದರೂ ಅದರ ಜೊತೆಗೆ ಗುರು ದತ್ತನ ಸ್ಮರಣೆ ಮರೆಯಬಾರದು. ದತ್ತನ ಸ್ಮರಣೆಯೊಂದಿದ್ದರೆ ಸಾಕು. ಅವನ ಕೃಪೆಗೆ ಪಾತ್ರರಾಗಬಹುದು ಎಂದು ನುಡಿದರು.

ಅವರವರ ಕರ್ಮಗಳ ಅನುಸಾರ ಜೀವನ ಸಾಗುತ್ತದೆ. ಆದರೆ ನಾವು ಮಾಡುವ ಪಾಪಗಳನ್ನು ತೊಡೆದು ಹಾಕಲು ಸದ್ಗುರು ದತ್ತನ ಆರಾಧನೆಯೊಂದೇ ದಾರಿ. ನಾನೂ ದತ್ತನ ಆರಾಧಕ. ಎಲ್ಲರಿಗೂ ಒಳಿತಾಗಲಿ ಎಂದು ಆಶೀರ್ವದಿಸಿದರು.

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಇಂದು ಇಲ್ಲಿಗೆ ಆಗಮಿಸಿದ್ದಾರೆ. ಅವರಿಗೆ ದೇವರು ಇನ್ನೂ ಹೆಚ್ಚಿನ ಪದವಿ ಕರುಣಿಸಲಿ. ಉತ್ತಮ ಆರೋಗ್ಯ, ಆಯಸ್ಸು, ಶ್ರೇಯಸ್ಸು ಅವರಿಗೆ ಸಿಗಲಿ ಎಂದು ಸ್ವಾಮೀಜಿ ಶುಭ ಹಾರೈಸಿದರು.



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಗುರುವಾರ ನಡೆದ ಶ್ರೀಗಳ ಜನ್ಮದಿನೋತ್ಸವದಲ್ಲಿ ಪಾಲ್ಗೊಂಡಿದ್ದ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹಾಗೂ ಶ್ರೀಗಳಿಗೆ ಭಕ್ತರಾದ ಶಿವ ಮಾದೇಗೌಡ, ಕೇಬಲ್ ಮಹೇಶ್, ಶ್ರೀಗಳ ಸಂದೇಶವುಳ್ಳ ಗುರುವಾರದ 'ಮೈಸೂರು ಮಿತ್ರ' ಸಂಚಿಕೆಯನ್ನು ಅರ್ಪಿಸಿದರು.

ಒಂದನೇ ಪುಟದಿಂದ

ಜನ್ಮದಿನ ವಿಜೃಂಭಣೆ ಆಚರಣೆ

ಪೂಜೆ ಕೈಂಕರ್ಯ ನೆರವೇರಿಸಿದರು. ಚಿನ್ನ, ವಜ್ರ, ವೈಢೂರ್ಯ, ಮುತ್ತು, ರತ್ನ, ಸ್ವರ್ಣ ಅರ್ಪಣೆ, ವಿವಿಧ ಬಗೆಯ ಪುಷ್ಪಗಳಿಂದ ಕಿರಿಯ ಶ್ರೀಗಳು ಅತ್ಯಂತ ಭಕ್ತಿಭಾವದಿಂದ ಪಾದಪೂಜೆ ನೆರವೇರಿಸಿದರು. ಅಲ್ಲದೆ, ಸ್ವಾಮೀಜಿಯವರಿಗೆ ಮಹಾಮಂಗಳಾರತಿ ನೆರವೇರಿಸಿ, ವಂದಿಸಿದರು. ಸಿಂಹಾಸನದಲ್ಲಿ ಆಸೀನರಾಗಿದ್ದ ಸ್ವಾಮೀಜಿಯವರು, ಚಿನ್ನಾಭರಣಗಳನ್ನು ತೊಟ್ಟು, ಅವಧೂತ ದತ್ತಪೀಠದ ವಜ್ರದ ಕಿರೀಟ ಧಾರಣೆ ಮೂಲಕ ಭಕ್ತರಿಗೆ ದರ್ಶನ ನೀಡುತ್ತಿದ್ದಂತೆ ಕರತಾಳ ಹಾಗೂ ಜೈಕಾರದೊಂದಿಗೆ ಭಕ್ತಾದಿಗಳು ತಮ್ಮ ಭಕ್ತಿಯ ಪರಾಕಾಷ್ಠೆ ಮೆರೆದರು. ಇದೇ ವೇಳೆ ಶ್ರೀ ಚಾಮುಂಡೇಶ್ವರಿ ದೇವಿ, ಶ್ರೀ ದತ್ತ ವೆಂಕಟೇಶ್ವರ ಸ್ವಾಮಿ, ದುರ್ಗಾದೇವಿ ಸೇರಿದಂತೆ ವಿವಿಧ ದೇವಾಲಯಗಳಿಂದ ತಂದ ತೀರ್ಥವನ್ನು ಸ್ವಾಮೀಜಿಯವರಿಗೆ ನೀಡಲಾಯಿತು. ಅಲ್ಲದೆ, ಭಕ್ತರು ಶ್ರೀಗಳಿಗೆ ನಾನಾ ರೀತಿಯ ಆಭರಣಗಳನ್ನು ಕೊಡುಗೆಯಾಗಿ ಸಮರ್ಪಿಸಿದರು.

ಗ್ರಂಥ ಬಿಡುಗಡೆ: 'ಗೀತಾ ಸ್ವರಪ್ರಸ್ಥಾರ' (ಭಗವದ್ಗೀತೆಗೆ ಸ್ವಾಮೀಜಿಯವರ ಸವಿಸ್ತಾರ ವ್ಯಾಖ್ಯಾನ), 'ಶ್ರೀಮದ್ಭಗವದ್ಗೀತ' (ಭಗವದ್ಗೀತೆಗೆ ಸ್ವಾಮೀಜಿಯವರ ಸರಳಾನುವಾದ) ಶೀರ್ಷಿಕೆಯ ಮೂರು ಗ್ರಂಥಗಳನ್ನು (ತೆಲುಗು ಭಾಷೆ) ಇದೇ ವೇಳೆ ಶ್ರೀಗಳು ಬಿಡುಗಡೆ ಮಾಡಿದರು. ಎರಡು ಸಾವಿರ ಪುಟಗಳಲ್ಲಿ ಮೂರು ಸಂಪುಟಗಳಾಗಿ ಈ ಗ್ರಂಥಗಳನ್ನು ಹೊರತರಲಾಗಿದೆ. ಶ್ರೀಗಳು ವಜ್ರ ಕಿರೀಟ ಧಾರಣೆ ಮೂಲಕ ಭಕ್ತರಿಗೆ ದರ್ಶನ ನೀಡುತ್ತಿದ್ದ ಸಂದರ್ಭದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ನಟ ದರ್ಶನ್ ಶ್ರೀಗಳಿಗೆ ಗೌರವ ಸಮರ್ಪಿಸಿ, ಆಶೀರ್ವಾದ ಪಡೆದರು.

ಬೃಹತ್ ಕೇಕ್: ಶ್ರೀಗಳ ಜನ್ಮದಿನದ ಪ್ರಯುಕ್ತ ಭಕ್ತರ ಕೋರಿಕೆಯಂತೆ ಬೃಹತ್ ಕೇಕ್ ಕತ್ತರಿಸಿದ ಸ್ವಾಮೀಜಿಯವರು, ಭಕ್ತರಿಗೆ ದರ್ಶನ ಕರುಣಿಸಿದರು. ವಿಶೇಷ ವಿನ್ಯಾಸದ ಪೇಟ ಧರಿಸಿದ ಶ್ರೀಗಳು, 'ಹ್ಯಾಪಿ ಬರ್ತ್ ಡೇ ಅಪ್ಪಾಜಿ' ಎಂದು ಆಂಗ್ಲ ಭಾಷೆಯಲ್ಲಿ ಬರೆದಿದ್ದ ಬೃಹತ್ ಕೇಕ್ ಕತ್ತರಿಸಿದರು. ಈ ವೇಳೆ 'ಹ್ಯಾಪಿ ಬರ್ತ್ ಡೇ ಟು ಯು ಅಪ್ಪಾಜಿ' ಎಂಬ ನಾದ ಸಂಗೀತವೂ ಮಂಗಳ ವಾದ್ಯಗಳಿಂದ ಮೊಳಗಿತು. ಜೊತೆಗೆ ಭಕ್ತರು ಹರ್ಷೋದ್ಗಾರ ಮುಗಿಲು ಮುಟ್ಟಿತು. ವಿವಿಧ ಕ್ಷೇತ್ರದ ಗಣ್ಯರು ಸೇರಿದಂತೆ ಅಪಾರ ಸಂಖ್ಯೆಯ ಭಕ್ತ ಸಮೂಹದ ನಡುವೆ ಶ್ರೀಗಳ ಜನ್ಮದಿನ ಅತ್ಯಂತ ಸಂಭ್ರಮ–ಸಡಗರದಿಂದ ಜರುಗಿತು. ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ಸೇರಿದಂತೆ ಮತ್ತಿತರ ಪ್ರಮುಖರು ಹಾಜರಿದ್ದರು.

12 ಲಕ್ಷ ರೂ.ಖರ್ಚು ಮಾಡಿ ನಾಯಿಯಾದ ಜಪಾನಿಗ!

ಟೋಕಿಯೋ(ಜಪಾನ್), ಮೇ 26– ತಾನು ನಾಯಿಯಂತೆ ಕಾಣಬೇಕೆಂದು ಕನಸು ಹೊತ್ತಿದ್ದ ಜಪಾನಿನ ವ್ಯಕ್ತಿಯೊಬ್ಬ ಬರೋಬ್ಬರಿ 12 ಲಕ್ಷ ರೂ. ವೆಚ್ಚ ಮಾಡಿ ತನ್ನ ಕನಸು ನನಸು ಮಾಡಿಕೊಂಡಿದ್ದಾನೆ.



ಟೋಕಿಯೋದ ಟೋಕೋ ಎಂಬಾತ @toco_eevee ಎಂಬ ತಮ್ಮ ಟ್ವಿಟರ್ ಖಾತೆಯಲ್ಲಿ ತಾನು ಥೇಟ್ ನಾಯಿಯಂತೇ ಮಾರ್ಪಾಡಾಗಿರುವ ವೀಡಿಯೋ ಪೋಸ್ಟ್ ಮಾಡಿದ್ದಾನೆ. ಜೊತೆಗೆ ನಾಯಿಯಂತೆಯೇ ವರ್ತಿಸಿದ್ದಾನೆ. ಈ ವೀಡಿಯೋ ನೋಡಿದರೆ ಮನುಷ್ಯ ನಾಯಿಯ ವೇಷಭೂಷಣ ಹೊಂದಿದ್ದಾನೆ ಎಂದು ನಂಬುವುದೇ ಕಷ್ಟಸಾಧ್ಯ ಎಂಬಂತಿದೆ. 'ನನ್ನ ಮೆಚ್ಚಿನವು ಚತುರ್ಭುಜ ಪ್ರಾಣಿಗಳು, ವಿಶೇಷವಾಗಿ ಅವು ತುಂಬಾ ಮುದ್ದಾಗಿರುತ್ತವೆ. ಇನ್ನು ಉದ್ದ ಕೂದಲಿನ ನಾಯಿಗಳು ಮಾನವನ ಆಕೃತಿಯನ್ನು ಮರೆಮಾಚುತ್ತವೆ. ಕೋಲೀಸ್ ಒಂದು ವಿಶಿಷ್ಟ ತಳಿಯ ನಾಯಿಯಾಗಿದ್ದು, ಇದು ನೈಜತೆಯಿಂದ ಕೂಡಿದೆ. ಹೀಗಾಗಿ ಈ ನಾಯಿಯ ತಳಿಯನ್ನು ಆಯ್ಕೆ ಮಾಡಿದೆ. ನಾನು ನಾಯಿಯಂತೆ ಕಾಣಲು, 'ಜೆಪ್ಪೆಟ್' ಎಂಬ ವೃತ್ತಿಪರ ಏಜೆನ್ಸಿಯಿಂದ ಸಾಧ್ಯವಾಯಿತು. ಈ ಸಂಸ್ಥೆಯೂ ಸಂಪೂರ್ಣ ವೇಷಭೂಷಣವನ್ನು ತಯಾರಿಸಲು 40 ದಿನಗಳನ್ನು ತೆಗೆದುಕೊಂಡಿದೆ. ಇದಕ್ಕೆ 12 ಲಕ್ಷ (2 ಮಿಲಿಯನ್ ಯೆನ್) ಕ್ಕಿಂತ ಹೆಚ್ಚು ವೆಚ್ಚವಾಗಿದೆ' ಎಂದು ಟೋಕೋ ತನ್ನ ಟ್ವಿಟರ್ ಖಾತೆಯಲ್ಲಿ ಹೇಳಿಕೊಂಡಿದ್ದಾನೆ. ಈತ ತನ್ನದೇ ಆದ ಯೂಟ್ಯೂಬ್ ಚಾನೆಲ್ ಅನ್ನು ಹೊಂದಿದ್ದು, ಅದರಲ್ಲೂ ಕೂಡ ವೀಡಿಯೋ ಅಪ್ಲೋಡ್ ಮಾಡಿದ್ದಾನೆ.

ನಕ್ಕರೆ ಅದೇ ಸ್ವರ್ಗ

ಗೆಳೆಯ : (ಪರಸ್ಪರ ಚರ್ಚೆಯಲ್ಲಿ) ತುಂಬಿ ಹರಿಯುತ್ತಿರುವ ನದಿ ದಾಟಲು ತೆಪ್ಪಬೇಕೇ ಬೇಕಯ್ಯಾ

ಜೊತೆಗಾರ : ಹೌದಯ್ಯಾ, ಹಾಗೆಯೇ ಸಂಸಾರವೆಂಬ ಸಾಗರವನ್ನು ನೆಮ್ಮದಿಯಿಂದ ದಾಟಲು ಗಂಡ ತೆಪ್ಪಗಿರಬೇಕು

ಮೈಸೂರು ಮಿತ್ರ

ಶುಕ್ರವಾರ, 27 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಜೀವನದಲ್ಲಿ ತೃಪ್ತಿ ಎನ್ನುವುದು ಸಕಲ ಸುಖಕ್ಕೂ ಮೂಲ –ಎ.ವಿ. ಕೂಪರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಭಾವ ಶುದ್ಧ ಇದ್ದರೆ ಭಾಗ್ಯಕ್ಕೇನು ಕಡಿಮೆ

ನಿಮ್ಮ ಪತ್ರಗಳು

ತೂಬಿನಕೆರೆ ಸರ್ ಎಂ.ವಿ. ಸ್ನಾತಕೋತ್ತರ ಶಿಕ್ಷಣ ಕೇಂದ್ರಕ್ಕೆ ಬಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮಂಡ್ಯ ತಾಲೂಕಿನ ತೂಬಿನಕೆರೆ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿರುವ ಮೈಸೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಸರ್ ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಪದವಿ ಶಿಕ್ಷಣ ಕೇಂದ್ರಕ್ಕೆ ಬಸ್ ಸೌಲಭ್ಯ ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳು ಪರದಾಡುವಂತಾಗಿದೆ.

ಎರಡು ದಶಕಗಳಿಂದ ಈ ಸಮಸ್ಯೆಯಿದ್ದರೂ, ಪರಿಹಾರ ದೊರಕಿಸುವ ಪ್ರಯತ್ನವಾಗಿಲ್ಲ. ಪರಿಣಾಮ, ವಿದ್ಯಾರ್ಥಿಗಳು ಅಧ್ಯಾಪಕರು, ತರಗತಿಗಳಿಗೆ ಸಕಾಲಕ್ಕೆ ಹಾಜರಾಗಲು ಸಾಧ್ಯವಾಗದೇ, ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಆಗುತ್ತಿದೆ. ಮೈಸೂರು–ಬೆಂಗಳೂರು ಹೆದ್ದಾರಿಯಿಂದ ಸುಮಾರು ಎರಡು ಕಿ.ಮೀ. ದೂರವನ್ನು ಕಾಲ್ನಡಿಗೆಯಲ್ಲೇ ಕ್ರಮಿಸ ಬೇಕಿದೆ. 1993ರಿಂದ ಈ ಸ್ಥಳದಲ್ಲಿ ಸ್ನಾತಕೋತ್ತರ ತರಗತಿಗಳು ನಡೆಯುತ್ತಿವೆ. ಸಮಾಜ ಕಾರ್ಯ, ಇತಿಹಾಸ, ವಾಣಿಜ್ಯ, ಕನ್ನಡ, ಅರ್ಥಶಾಸ್ತ್ರ, ಇಂಗ್ಲಿಷ್, ಷುಗರ್ ಟೆಕ್ನಾಲಜಿ, ಪಾಲಿಮರ್ ಸೈನ್ಸ್, ರಸಾಯನ ವಿಜ್ಞಾನ ವಿಷಯ ಮುಂತಾದ ಕೋರ್ಸ್‌ಗಳಿವೆ. ಸ್ನಾತಕೋತ್ತರ ಕೇಂದ್ರದಲ್ಲಿ ಸಾವಿರಾರು ವಿದ್ಯಾರ್ಥಿಗಳಿದ್ದು, ಇವರಲ್ಲಿ ಶೇ 60ರಷ್ಟು ಮಂದಿ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸುತ್ತಾರೆ.

ಈ ಹಾದಿಯ ಆಸುಪಾಸಿನಲ್ಲಿ ಗಿಡಗಂಟಿಗಳು ಬೆಳೆದಿದ್ದು ಒಬ್ಬರೇ ನಡೆದು ಬರಲು ಭಯ ಪಡುವಂತಹ ವಾತಾವರಣವಿದೆ. ತರಗತಿಗಳು ಬೆಳಿಗ್ಗೆ 10.30 ರಿಂದ ಸಂಜೆ 4.30ರವರೆಗೆ ನಡೆಯುವುದರಿಂದ, ಗೊತ್ತುಪಡಿಸಿದ ಅವಧಿಯಲ್ಲಿ ಕೇಂದ್ರಕ್ಕೆ ಬಸ್ ಸೌಲಭ್ಯ ಕಲ್ಪಿಸಿದರೆ ಅನುಕೂಲ ಆಗುತ್ತದೆ. ಕೆಎಸ್‌ಆರ್‌ಟಿಸಿಗೆ ವಾರ್ಷಿಕ ವಿದ್ಯಾರ್ಥಿ ಬಸ್ ಪಾಸಿಗೆ ಮುಂಗಡವಾಗಿ 1050 ರೂಪಾಯಿ ಪಾವತಿಸಿದ್ದೇವೆ. ಆದಾಗ್ಯೂ ಬಸ್ ಕಲ್ಪಿಸಿಲ್ಲ. ಕಳೆದ ಕೆಲ ದಿನಗಳಿಂದ ಮಳೆ ಆಗುತ್ತಿರುವುದರಿಂದ ಕ್ಯಾಂಪಸ್‌ನಿಂದ ಹೆದ್ದಾರಿ ಬದಿಗೆ ಬರಲು ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಎರಡು ದಶಕಗಳಿಂದಿರುವ ಸಮಸ್ಯೆಗೆ ಯಾವಾಗ ಮುಕ್ತಿ ಸಿಗುತ್ತದೋ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ವಿದ್ಯಾರ್ಥಿಗಳ ಸಮಸ್ಯೆಯನ್ನು ಬಗೆಹರಿಸಬೇಕೆಂದು ಮನವಿ.

–ನೊಂದ ವಿದ್ಯಾರ್ಥಿಗಳು ,ಸರ್ ಎಂ ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ತೂಬಿನಕೆರೆ ಮಂಡ್ಯ

'ಅವ್ವ' ಪಾಠ ಕಾಣಿಸಲಿಲ್ಲವೇ?

ಮಾನ್ಯರೆ,

ಪಠ್ಯ ವಿಷಯದ ಬಗ್ಗೆ ಕೆಲ ಬುದ್ಧಿಜೀವಿಗಳೆಂಬ ಸುದ್ದಿಜೀವಿಗಳು ಒಂದೇ ಸಮನೆ ವಿರೋಧದ ಹೇಳಿಕೆ ನೀಡುತ್ತಲೇ ಇದ್ದಾರೆ. ಚರಿತ್ರೆಯಲ್ಲಿ ದುರಾಕ್ರಮಣ ಮಾಡಿದ ಲೂಟಿಕೋರರನ್ನು ಗ್ರೇಟ್ ಎಂಬ ಬಿರುದನ್ನು ನೀಡಿ ವಿದ್ಯಾರ್ಥಿಗಳ ತಲೆಯಲ್ಲಿ ತುಂಬಿಸಿದ್ದುದನ್ನು ಇವರ್‍ಯಾರೂ ವಿರೋಧಿಸಲಿಲ್ಲ. ರಾಷ್ಟ್ರ ರಕ್ಷಣೆಗೈವ ನಿಸ್ವಾರ್ಥಿ ಯೋಧರ ಬಗ್ಗೆ ಕೀಳಾಗಿ ಉಲ್ಲೇಖಿಸಿದ್ದನ್ನು ಯಾಕೆ ಗಮನಿಸಲಿಲ್ಲ? ಈ ಹಿಂದೆ ಒಂಭತ್ತನೆಯ ಕನ್ನಡ ಪಠ್ಯದಲ್ಲಿ ಗೀತಾನಾಗಭೂಷಣರ ಅವ್ವ ಪಾಠ ಅಳವಡಿಸಿದ್ದು, ಅದು ಮೂರು ವರ್ಷ ಲಕ್ಷಾಂತರ ವಿದ್ಯಾರ್ಥಿಗಳಿಗೆ ಬೋಧಿಸಲ್ಪಟ್ಟಿತ್ತು. 'ರಂಡಮುಂಡಿ ಮಾಳವ್ವನ ಗಂಡ ಎರಡು ಮೂರು ಕೊಲಿ ಮಾಡಿ ಜೈಲ್ ಸೇರ್ಯಾನ್" ಔಷಧಕ್ಕೆ ನಲವತ್ತೈದು ರೂ ಇಲ್ಲದೇ ಅಳುತ್ತಿದ್ದ ಮಹಿಳೆಯನ್ನು ಒಬ್ಬಾತ ಆಸ್ಪತ್ರೆಯಿಂದ ಕಾರಿನಲ್ಲಿ ಕರೆದೊಯ್ದ. ಅದರ ಒಕ್ಕಣಿಕೆ ಈ ರೀತಿ ಇತ್ತು: ' ಆ ಕಾರು ಕತ್ತಲೆಯಲ್ಲಿ ಮಾಯವಾಯಿತು. ಆಕೆಯ ಕೈಗೆ ಹಣ ಹಾಕಿದ ನಂತರ ಆಕೆಯು ಕಾರಿನಿಂದ ಇಳಿಯುವಾಗ ಉಟ್ಟಬಟ್ಟೆಗಳೆಲ್ಲಾ ಅಸ್ತವ್ಯಸ್ತವಾಗಿದ್ದವು. ಇಂತಹ, ಅನೈತಿಕತೆಯ ಅರ್ಥವನ್ನು ನೀಡುವ ಪಾಠ ಬೇಕಿತ್ತೇ? ನಂತರ ಚಿಕ್ಕಮಗಳೂರು ಕೆಡಿಪಿ ಸಭೆಯ ಮೂಲಕ ದಾಖಲಾತಿಯನ್ನು ಕಳುಹಿಸಿ ಪಾಠವನ್ನು ವಿಶ್ವೇಶ್ವರ ಹೆಗ್ಡೆ ಕಾಗೇರಿಯವರ ಮೂಲಕ ರದ್ದು ಮಾಡಿಸಿದೆವು. ಇದನ್ನು ಯಾರೂ ವಿರೋಧಿಸಲಿಲ್ಲ.

ರಾಷ್ಟ್ರಭಕ್ತಿಯನ್ನು ಕಲಿಸುವ ಸತ್ಸಂಗವನ್ನು ಬೆಳೆಸುವ ವಿಚಾರ ಯಾರಿಂದ ಬಂದರೇನು? ಗುಲಾಮೀ ಸಂತತಿಯಿಂದಲೂ ಆಳಿಸಿಕೊಳ್ಳಲ್ಪಟ್ಟ ನಮಗೆ ರಾಷ್ಟ್ರಾಭಿಮಾನ ಎಷ್ಟಿತ್ತು ಎಂಬುದು ಅರ್ಥವಾಗುತ್ತದೆ. ಆಕ್ರಮಣಕಾರರ ಸಂಕೋಲೆಗಳಿಂದ ಬಿಡುಗಡೆಯಾಗಿ ಏಳು ಎಂಟು ದಶಕ ಕಳೆದರೂ ಅವರ ಅನಿಷ್ಟ ಪದ್ಧತಿಯಿಂದ ಹೊರಬರಲಾಗಲಿಲ್ಲ. ಪದವಿ ಪಡೆಯುವಾಗ ಅಡಕೆ ಹಾಳೆಯಂತಹ ಕಪ್ಪು ಟೋಪಿಯನ್ನು ತಲೆಯ ಮೇಲೆ ಹಾಕಿ ಕಪ್ಪು ಗೌನ್ ಧರಿಸುವ ರೂಢಿ. ನಮ್ಮ ಆಯುರ್ವೇದ, ಯೋಗ, ಸಂಸ್ಕೃತಿಯ ಬಗ್ಗೆ ವಿದೇಶೀಯರಿಂದ ಕಲಿಯಬೇಕಾದ ದುರಂತ ಎದುರಾಗಬಹುದೇನೋ? ವೈಯುಕ್ತಿಕ ಪ್ರತಿಷ್ಠೆ ಬಿಟ್ಟು ದೇಶಭಕ್ತಿ, ಸಮಾಜಸೇವೆ ಗುರುಹಿರಿಯರಲ್ಲಿ ಗೌರವ ಬೆಳೆಯುವಂತೆ ಮಾಡುವ ಬೋಧನಾ ವಿಷಯಗಳಿರಲಿ. ಮುಂದಿನ ವಿದ್ಯಾರ್ಥಿಗಳು ಭವ್ಯಭಾರತದ ನಿರ್ಮಾಣಕ್ಕೆ ಕಾರಣರಾಗುವಂತೆ ಮಾಡುವ ಹೊಣೆಗಾರಿಕೆ ನಮ್ಮ ಮೇಲಿದೆ.

–ಕಲಾಶ್ರೀ ರಾಮಸುಬ್ರಾಯಶೇಟ್, ನಿವೃತ್ತ ಉಪನ್ಯಾಸಕ, ಗಮಕಿ

ಸಾರ್ಥಕ ಜೀವಿ

ಮಾನ್ಯರೆ,

ವ್ಯಕ್ತಿಗೆ ವಯಸ್ಸಾದಂತೆ, ಹೊಗಳಿಸಿಕೊಳ್ಳುವುದು ಅಥವಾ ಹೊಗಳಿಕೆಯನ್ನು ನೆನಪಿಸಿಕೊಳ್ಳುವುದು ಇಷ್ಟವಾದ ಸಂಗತಿ ಎಂದು ಖ್ಯಾತ ಕವಿ ಪು.ತಿ.ನ. ಹೇಳುತ್ತಿದ್ದರು! ನನಗೂ ಈಗ ವಯಸ್ಸಾಗಿದೆ (83 ಕಡಿಮೆಯೇ) ಈ ಘಟ್ಟದಲ್ಲಿ ವಿದ್ವನ್ಮಹಿಳೆಯೊಬ್ಬರ – ಪ್ರೊ. ಎಸ್.ಪಿ. ಉಮಾದೇವಿ –ಪ್ರಶಂಸೆಯನ್ನು ಜ್ಞಾಪಿಸಿಕೊಳ್ಳ ಬಯಸುತ್ತೇನೆ.

ಸವ್ಯಸಾಚಿತ್ವ ಗುಣಕ್ಕೆ ಸಾಕಾರಬೇಕೆ?
ಕಂಡಿಲ್ಲವೇ ನೀವು–ಸಿಪಿಕೆ?
ಸಾಹಿತ್ಯಸರ್ವಮುಖಸ್ಪರ್ಶ, ಎಲ್ಲವೂ ತಲಸ್ಪರ್ಶ!
ಆದರೂ 'ಹಿತಮಿತ ಮೃದು' ಭಾಷೆ;
ನುಡಿದರೆ, ಲಿಂಗಮೆಚ್ಚಿ 'ಅಹುದಹುದೆ' ನದಿಹುದೆ?
ವಿನಯವೇ ಮನುಜರೂಪಾದಂತೆ,
ಪಾಂಡಿತ್ಯವೆ ಉಚ್ಛ್ವಾಸ ನಿಃಶ್ವಾಸದಂತೆ!
ಸದ್ದುಗದ್ದಲವಿಲ್ಲದೆ ಸಾಹಿತ್ಯ ಸೇವೆಗೆ
ಸದಾ ಶ್ರುತಿ ಮಾಡಿಟ್ಟ ಬದುಕು;
ಅಟ್ಟಹಾಸವಿಲ್ಲದ ಚಿನ್ನದ ಗಟ್ಟಿ;
ಷಡ್ಜದಲ್ಲುಲಿವ ನುಡಿಯೂ
'ಅರ್ಣವಂಬೊಲನಿ ಗಂಭೀರಂ'!
ಗುಪ್ತ ಕನ್ನಡ ಭಕ್ತ!
ಶತಕಗಳ ಬಾರಿಸಿಯೂ ಸೋಲದೆ,
ಲೇಖನಿಯ ಬ್ಯಾಟು ಬೀಸುತಿಹ ಶಕ್ತಿ
ಸರಳ; ಹಾಗೆಯೇ
ಸರಳತೆಯ ನೇರ ಬದುಕು.
ಇದೋ ನಮನ, ನುಡಿ ನಮನ
ಈ ಸಾರ್ಥಕ ಜೀವಿಗೆ!

ನನ್ನ 'ನೇರ ಬದುಕ'ನ್ನು ಕೈವಾರಿಸಿದ ಈ ಸೋದರಿಗೆ ನನ್ನ ನೂರು ನಮಸ್ಕಾರ. (ಇಂಥವರೂ ಇರುತ್ತಾರೆ!). –ಸಿಪಿಕೆ



ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಕೃಷ್ಣ ಎಂಬ ಹೆಸರಿನ ಶ್ರೇಷ್ಠರು

ಬಿ. ಕೃಷ್ಣಪ್ಪ

ಇವರು ಮೈಸೂರು ನಗರಕ್ಕೆ ಸೇರಿದವರು. ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳನ್ನು ಮೈಸೂರಿನ ಶಾರದಾ ವಿಲಾಸ ಶಾಲೆಯಲ್ಲಿ ಮುಗಿಸಿದರು. ನಂತರ ಮೈಸೂರಿನ ಮಹಾರಾಜ ಕಾಲೇಜಿನಿಂದ ಎಂ.ಎ. ಪದವಿಯನ್ನು ಪಡೆದರು. ಮೈಸೂರು ಪ್ರಾಂತ್ಯದ ಅನೇಕ ಸ್ಥಳಗಳಲ್ಲಿ ಎಂಟು ವರ್ಷಗಳ ಕಾಲ ಅಧ್ಯಾಪಕರಾಗಿ ಕೆಲಸ ಮಾಡಿದರು. ನಂತರ ಇವರು ಮೈಸೂರಿನಲ್ಲಿದ್ದ ಕುರುಡರು ಹಾಗೂ ಮೂಗರ ಶಾಲೆಗೆ ಸೇರಿ, ಕೊನೆಗೆ ಮುಖ್ಯೋಪಾಧ್ಯಾಯರಾದರು. ನಂತರ ಇವರು ಮೈಸೂರಿನ ವಿದ್ಯಾ ಇಲಾಖೆಯಲ್ಲಿ ಭಾಷಾಂತರಕಾರರಾದರು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಮಹಾರಾಜ ಕಾಲೇಜಿನಲ್ಲಿ ಮೊಟ್ಟ ಮೊದಲನೆಯ ಕನ್ನಡ ಪ್ರಾಧ್ಯಾಪಕರಾಗಿಯೂ ಇವರು ಉತ್ತಮ ಕಾರ್ಯವನ್ನು ಮಾಡಿದರು.


ಬಿ. ಕೃಷ್ಣಪ್ಪನವರು ವಿದ್ಯಾದಾಯಿನಿ ಎಂಬ ಮಾಸಪತ್ರಿಕೆಗೂ ಸಂಪಾದಕರಾಗಿದ್ದರು. ಅಷ್ಟೇ ಅಲ್ಲದೆ, ಇವರು ಕರ್ನಾಟಕ ಗ್ರಂಥ ಮಾಲೆಗೂ ಸಂಪಾದಕರಾಗಿದ್ದರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲನೆಯ ಕಾರ್ಯದರ್ಶಿಯೂ ಆಗಿದ್ದರು. ಕೃಷ್ಣಪ್ಪನವರು ಟಿ. ಶ್ರೀನಿವಾಸ ರಾಘವಾಚಾರ್ಯರೊಡನೆ ಸಹಲೇಖಕರಾಗಿ ಕನ್ನಡ ಕೈಪಿಡಿಯ ಹಳಗನ್ನಡ ವ್ಯಾಕರಣ, ಅಭಿಜ್ಞಾನ ಶಾಕುಂತಲದ ಗದ್ಯಾನುವಾದವನ್ನು ಬರೆದರು. ಇಷ್ಟೇ ಅಲ್ಲದೆ, ಇವರು ಕುಕ್ಕೋಣಾರ್ಜುನ ಹಾಗೂ ವನಸ್ಪತಿ ಶಾಸ್ತ್ರಕ್ಕೆ ವಿಮರ್ಶೆಯನ್ನೂ ಬರೆದರು.

ಇವುಗಳ ಜೊತೆಗೆ ಟ್ರೋಜನ್ ದಂಡಯಾತ್ರೆ, ಯವನ ಮಹಾವೀರ ಚರಿತ್ರೆ ಹಾಗೂ ಯವನರ ಕಥಾವಳಿ ಮುಂತಾದ ಸಾಹಿತ್ಯ ಕೃತಿಗಳನ್ನು ಬರೆದಿದ್ದಾರೆ. ಕಣ್ಣು ಬೇನೆಯಿಂದ ಕೃಷ್ಣಪ್ಪನವರು ಕೆಲಸದಿಂದ ನಿವೃತ್ತರಾಗುವ ಮುನ್ನವೇ ನಿಧನರಾದರು.

ಬಿಡಾರಂ ಕೃಷ್ಣಪ್ಪ

ಇವರ ತಂದೆ ವಿಶ್ವನಾಥಯ್ಯನವರು. ಉಡುಪಿಯ ಸಮೀಪದ ನಂದಳಿಕೆ ಗ್ರಾಮದವರು. ಇವರು ಮಂಗಳೂರು ದೇಶಸ್ಥ ಬ್ರಾಹ್ಮಣರು. ಮೈಸೂರಿನ ದೊರೆಗಳಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಧರ್ಮಸ್ಥಳಕ್ಕೆ ಭೇಟಿಯಿತ್ತಾಗ, ಒಡೆಯರ್ ಗೌರವಾರ್ಥವಾಗಿ ಏರ್ಪಡಿಸಲಾಗಿದ್ದ ಯಕ್ಷಗಾನ ಮಂಡಲಿಯವರ ದಶಾವತಾರ ಎಂಬ ಆಟವನ್ನು ನೋಡಿ ಮೆಚ್ಚಿಕೊಂಡ ಮುಮ್ಮಡಿಯವರು, ಬಿಡಾರಂ ಕೃಷ್ಣಪ್ಪನವರನ್ನು ಮೈಸೂರಿಗೆ ಆಹ್ವಾನಿಸಿದರು.

ಉತ್ತಮ ಕಲಾವಿದರಾಗಿದ್ದ ವಿಶ್ವನಾಥಯ್ಯನವರು ತಮ್ಮ ಕಲಾವಿದರ ತಂಡದೊಂದಿಗೆ ಮೈಸೂರಿಗೆ ಬಂದು ನೆಲೆಸಿದ್ದರಿಂದ ಅವರಿಗೆ ಬಿಡಾರದವರು ಎಂಬ ಹೆಸರು ಬಂದಿತು. ವಿಶ್ವನಾಥಯ್ಯನವರಿಗೆ ಇಬ್ಬರು ಮಕ್ಕಳು. ಹಿರಿಯ ಮಗನೇ ಸುಬ್ರಾಯರು ಹಾಗೂ ಕಿರಿಯ ಮಗನೇ ಕೃಷ್ಣಪ್ಪನವರು. ಕೃಷ್ಣಪ್ಪನವರಿಗೆ ಎಂಟು ವರ್ಷಗಳಾಗಿದ್ದಾಗ, ಅವರ ತಂದೆಯವರು ನಿಧನರಾದರು. ಸಂಸಾರದ ಜವಾಬ್ದಾರಿ ಕೃಷ್ಣಪ್ಪನವರ ಮೇಲೆ ಬಿದ್ದಿತು. ಕೃಷ್ಣಪ್ಪನವರಿಗೆ ದೈವದತ್ತವಾಗಿ ಹಾಡುವ ಸಂಪತ್ತಿದ್ದಿತು. ಜೀವನವನ್ನು ಸಾಗಿಸುವುದಕ್ಕಾಗಿ ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಇವರು ದೇವರನಾಮಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಆಂಜನೇಯನ ದೇವಾಲಯಕ್ಕೆ ಬರುತ್ತಿದ್ದ ಭಕ್ತರು ನೀಡುತ್ತಿದ್ದ ಹಣದಿಂದ ತಮ್ಮ ಮನೆಯವರೆಲ್ಲರನ್ನೂ ಸಾಕುತ್ತಿದ್ದರು. ಒಂದು ದಿನ ಸಾಹುಕಾರ್ ತಿಮ್ಮಯ್ಯನವರು, ಆಂಜನೇಯನ ದರ್ಶನಕ್ಕಾಗಿ ದೇವಾಲಯಕ್ಕೆ ಬಂದರು. ಕೃಷ್ಣಪ್ಪನವರ ದಿವ್ಯವಾದ ಕಂಠದಿಂದ ಹೊರಡುತ್ತಿದ್ದ ನಾದ ಮಾಧುರ್ಯಕ್ಕೆ ಸಂತೋಷಗೊಂಡರು. ನಂತರ ತಿಮ್ಮಯ್ಯನವರು ಕೃಷ್ಣಪ್ಪನವರ ವಿಷಯವನ್ನು ವಿಚಾರಿಸಿದರು. ಕೃಷ್ಣಪ್ಪನವರ ಸಂಗೀತ ಪ್ರತಿಭೆಯನ್ನು ಹೊರತರಲು ಯೋಚಿಸಿದರು. ಆಗ ಮೈಸೂರಿನಲ್ಲಿದ್ದ ಸುಪ್ರಸಿದ್ಧ ಸಂಗೀತ ವಿದ್ವಾಂಸರಾಗಿದ್ದ ಕರೂರು ರಾಮಸ್ವಾಮಯ್ಯನವರ ಬಳಿ ಶಿಕ್ಷಣ ಪಡೆಯಲು ತಿಮ್ಮಯ್ಯನವರು ಏರ್ಪಾಡು ಮಾಡಿದರು. ಕೃಷ್ಣಪ್ಪನವರ ಕಂಠದಿಂದ ಹೊರಹೊಮ್ಮುತ್ತಿದ್ದ ಸಂಗೀತ ಸಿರಿಯನ್ನು ಗಮನಿಸಿದ ಗಿರಿಭಟ್ಟರ ತಮ್ಮಯ್ಯನವರು, ಮೈಸೂರಿನ ಕರಿಗಿರಿಯಾರು, ವೀಣೆ ಶೇಷಣ್ಣನವರ ಮುಂದೆ ಕೆಲವು ಕೀರ್ತನೆಗಳನ್ನು ವಿವಿಧ ರಾಗಗಳಲ್ಲಿ ಹಾಡಿ ವಿದ್ವತ್ತನ್ನು ಸಂಪಾದಿಸಿದರು. ದಿವಾನ್ ರಂಗಾಚಾರ್ಲು, ಸಾಹುಕಾರ್ ತಿಮ್ಮಯ್ಯ ಮತ್ತು ಡಾ. ನಂಜುಂಡರಾಯರ ಪ್ರೋತ್ಸಾಹ ಹಾಗೂ ಸ್ನೇಹಿತರ ನೆರವಿನಿಂದಾಗಿ ಕೃಷ್ಣಪ್ಪನವರಿಗೆ ಮಹಾರಾಜರ ಆಸ್ಥಾನದಲ್ಲಿ ತಿಂಗಳಿಗೆ ಆರು ರೂಪಾಯಿ ಸಂಬಳ ದೊರಕಿತು. ಹತ್ತು ವರ್ಷಗಳ ಕಾಲ ಅರಮನೆಗೆ ಸೇರಿದ ನಾಟಕ ಮಂಡಲಿಯಲ್ಲಿಯೇ ಕೃಷ್ಣಪ್ಪನವರು ಅಭಿನಯಿಸುತ್ತಿದ್ದರು. ಕೃಷ್ಣಪ್ಪನವರು ಸಂಗೀತ ಕಛೇರಿಗಳನ್ನು ಮಾಡಲು ಆರಂಭಿಸಿದರು. ದಕ್ಷಿಣ ಭಾರತದಲ್ಲೆಲ್ಲ ಇವರ ಖ್ಯಾತಿಯು ಹರಡಿತು. ನಾಲ್ವಡಿಯವರು ಕೃಷ್ಣಪ್ಪನವರನ್ನು ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿ, ಇವರಿಗೆ ಗಾನವಿಶಾರದ ಬಿರುದನ್ನು ಕೊಟ್ಟು, ಸನ್ಮಾನ ಮಾಡಿದರು. ದಕ್ಷಿಣ ದೇಶದ ಸಭೆಗಳು ಹಾಗೂ ಉತ್ಸವಗಳಲ್ಲಿ ಕೃಷ್ಣಪ್ಪನವರ ಸಂಗೀತ ಕಛೇರಿ ಇದ್ದೇ ಇರುತ್ತಿದ್ದವು. ಕೃಷ್ಣಪ್ಪನವರು ಅಪಾರ ಕೀರ್ತಿ ಹಾಗೂ ಹಣವನ್ನು ಸಂಪಾದಿಸಿದರು. ಮಾರುತಿಯ ಆರಾಧ್ಯ ದೈವವಾದ ಶ್ರೀರಾಮಚಂದ್ರನ ಮಂದಿರವನ್ನು ಕಟ್ಟಿಸಬೇಕೆಂಬ ಹಂಬಲ ಕೃಷ್ಣಪ್ಪನವರಲ್ಲಿ ಪ್ರಬಲವಾಯಿತು.



ಬಿಡಾರಂ ಕೃಷ್ಣಪ್ಪ

ಕೃಷ್ಣಪ್ಪನವರು ತಮ್ಮ ಸಮಸ್ತ ಹಣವನ್ನು ಧಾರೆ ಎರೆದು, ಅವರ ಜೀವಿತ ಕಾಲದಲ್ಲೇ ಭವ್ಯವಾದ ಸೀತಾರಾಮ ಮಂದಿರವನ್ನು ಮೈಸೂರಿನ ಶಿವರಾಂಪೇಟೆಯಲ್ಲಿ ಕಟ್ಟಿಸಿ ಸಂತೋಷಪಟ್ಟರು. ಶ್ರೀರಾಮಚಂದ್ರನಲ್ಲಿ ಕೃಷ್ಣಪ್ಪನವರಿಗಿದ್ದ ದೃಢಭಕ್ತಿಯ ಹೆಗ್ಗುರುತಾಗಿ ಈ ಮಂದಿರ ಈಗಲೂ ಪ್ರಸಿದ್ಧವಾಗಿದೆ. ಇಲ್ಲಿ ಮೈಸೂರಿನ 'ಪರಸ್ಥಳ'ದ ವಿದ್ವಾಂಸರು, ಸಂಗೀತ ಕಛೇರಿಗಳು ಪ್ರತಿ ವರ್ಷವೂ ನಡೆಯುತ್ತಾ ಬಂದಿವೆ.

ಕೃಷ್ಣಪ್ಪನವರು ಸಾಮಾನ್ಯವಾಗಿ, ತಮ್ಮ ಕಛೇರಿಗಳಲ್ಲಿ ಕಾಂಭೋಜಿ, ಕಲ್ಯಾಣಿ, ಶಂಕರಾಭರಣ, ಭೈರವಿ ರಾಗಗಳನ್ನು ತ್ಯಾಗರಾಜ ಸ್ವಾಮಿಗಳ ಮತ್ತು ಸದಾಶಿವರಾಯರ ಕೆಲವು ಕೃತಿಗಳನ್ನು ರಾಗ, ತಾನ, ಪಲ್ಲವಿಗಳನ್ನೂ ಭಾವರಸಾವೇಶದಿಂದ ಐದು ಗಂಟೆಗಳ ಕಾಲ ಹಾಡುತ್ತಿದ್ದರು. ಕೃಷ್ಣಪ್ಪನವರಿಗೆ ತ್ರಿಸ್ಥಾಯಿಯಲ್ಲಿ ನುಡಿಯುವ, ಅತ್ಯಂತ ಶ್ರುತಿ ಶುದ್ಧವಾದ ಅತ್ಯಂತ ಹಾಗೂ ಅದ್ಭುತವಾದ ಶಾರೀರ ಸಂಪತ್ತು ಇದ್ದಿತು. ಕೃಷ್ಣಪ್ಪನವರು ತಾಳಜ್ಞಾನ ಹಾಗೂ ನಿರ್ವಹಣೆಯಲ್ಲಿ ತಾಳಬ್ರಹ್ಮರಾಗಿದ್ದರು.

ಕೃಷ್ಣಪ್ಪನವರು ತಮ್ಮ ಕಛೇರಿಗಳಲ್ಲಿ ಚೌಕ, ವಿಳಂಬ, ಮಧ್ಯಮ, ದುರಿತ ಕಾಲವೇ ಮುಂತಾದ ವೈವಿಧ್ಯಮಯವಾದ ತಾಳಗತಿಯನ್ನು ನಿರೂಪಿಸುತ್ತಿದ್ದರು. ಪ್ರಾರಂಭದಿಂದ ಕೊನೆಯವರೆಗೂ ಒಂದೇ ಕಾಲದಲ್ಲಿ ಕಛೇರಿಯನ್ನು ನಿರ್ವಹಿಸುವ ಈಗಿನ ಪದ್ಧತಿಯನ್ನು ಇವರು ಅನುಸರಿಸುತ್ತಿರಲಿಲ್ಲ. ಯಾವುದೇ ಕಾಲ ಪ್ರಮಾಣದಲ್ಲಿ ಕೃತಿಗಳನ್ನೋ ಅಥವಾ ಪಲ್ಲವಿಯನ್ನೋ ಪ್ರಾರಂಭಿಸಿದರೆ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಹಾಡುವ ಸಾಮರ್ಥ್ಯ ಇವರಿಗಿತ್ತು. ಕೈಯ್ಯಲ್ಲಿ ತಾಳ ಹಾಕದೇ ಸ್ವರಕಲ್ಪನೆ ಮಾಡಿ ಇವರು ಹಾಡುತ್ತಿದ್ದರು. ಆಗಿನ ಕಾಲದಲ್ಲಿ ಪ್ರಸಿದ್ಧ ಮೃದಂಗ ವಿದ್ವಾಂಸರಾಗಿದ್ದ ಅಳಗನಂಬಿ, ಪಾಲ್‌ಘಾಟ್ ಸುಬ್ಬಯ್ಯರ್ ಮತ್ತು ಬೆಂಗಳೂರಿನ ಪ್ರಸಿದ್ಧ ಪಿಟೀಲು ವಾದಕ ತಾಯಪ್ಪ ಮುಂತಾದವರು, ಇವರ ಕಛೇರಿಗೆ ಪಕ್ಕವಾದ್ಯ ನುಡಿಸಿ, ಬಿಡಾರಂ ಕೃಷ್ಣಪ್ಪನವರ ಅಸಾಧಾರಣ ತಾಳಜ್ಞಾನಕ್ಕೆ ಮಾರು ಹೋಗಿದ್ದರು. ಇವರ ಶೈಲಿಯಲ್ಲಿ ರಾಗಲಕ್ಷಣಕ್ಕಿರಬೇಕಾದ ಗ್ರಹ, ಅಂಶ, ನ್ಯಾಸ ಲಕ್ಷಣಗಳು ಶುದ್ಧವಾಗಿ ಎದ್ದು ಕಾಣುತ್ತಿದ್ದವು. ಸ್ಪಷ್ಟ ಉಚ್ಚಾರ ಹಾಗೂ ಇವರ ಸಂಗೀತ ನೂರಾರು ಜನಗಳಿಗೆ ಕೇಳಿಸುವಂತೆ ಆನಂದವನ್ನು ನೀಡುತ್ತಿತ್ತು. ಇವರ ಸಂಗೀತ ಕೇವಲ ಸಾಮಾನ್ಯ ಜನಗಳಿಗೆ ಮಾತ್ರವಲ್ಲದೆ, ಸಂಗೀತ ಜ್ಞಾನವಿದ್ದವರಿಗೂ ಇಷ್ಟವಾಗುತ್ತಿದ್ದಿತು. ಇವರ ಶೈಲಿಯನ್ನು ಅನುಸರಿಸಬೇಕಾದರೆ ವಿದ್ಯಾರ್ಥಿಗಳು ಒಂದು ಕಠಿಣ ತಪಸ್ಸನ್ನೇ ಮಾಡಬೇಕಾಗಿದ್ದಿತು.

ಕೃಷ್ಣಪ್ಪನವರು ಕೆಲವು ಉತ್ತಮ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ಅವರಲ್ಲಿ ಮುಖ್ಯರಾದವರೆಂದರೆ, ಗಾನವಿಶಾರದ ಬಿ. ದೇವೇಂದ್ರಪ್ಪ, ಸಂಗೀತ ವಿದ್ಯಾಸಾಗರ ಆರ್.ಆರ್. ಕೇಶವಮೂರ್ತಿ, ಗಾನಕಲಾಸಿಂಧು ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ, ಆಸ್ಥಾನ ವಿದ್ವಾನ್ ಎ.ಎಸ್. ಶಿವರುದ್ರಪ್ಪ, ವಿದ್ವಾಂಸರಾದ ಎ.ಕೆ. ಸುಬ್ಬರಾವ್, ಟಿ. ಗುರುರಾಜಪ್ಪ, ಬಿ. ಪುಟ್ಟಸ್ವಾಮಯ್ಯ ಹಾಗೂ ಮಹಿಳೆಯರಲ್ಲಿ ಮುಖ್ಯರಾದವರೆಂದರೆ ಬೆಂಗಳೂರು ನಾಗರತ್ನಮ್ಮ, ಚಂದ್ರಮುಖಿ ಶಾರದಮ್ಮ ಮುಂತಾದವರು ಕೃಷ್ಣಪ್ಪನವರ ಶಿಷ್ಯೆಯರು. ನಾಗರತ್ನಮ್ಮನವರು ತಮ್ಮ ಗುರುಗಳ ಆದೇಶದಂತೆ (ಕೃಷ್ಣಪ್ಪ) ತಿರುವಾಯೂರಿನಲ್ಲಿರುವ ತ್ಯಾಗರಾಜ ಸ್ವಾಮಿಗಳ ಸಮಾಧಿಯನ್ನು ಜೀರ್ಣೋದ್ಧಾರ ಮಾಡಿದ್ದು ಕೃಷ್ಣಪ್ಪನವರಿಗೆ ಹೆಚ್ಚಿನ ಸಂತೋಷವನ್ನು ಕೊಟ್ಟಿತು.

ಕೃಷ್ಣಪ್ಪನವರು ಆಗಿನ ಕಾಲದಲ್ಲಿ ಮೈಸೂರಿನ ಕೀರ್ತಿಯನ್ನು ಹರಡಿದ ಉತ್ತಮ ಗಾಯಕರಾಗಿದ್ದುದು ಮಾತ್ರವಲ್ಲದೆ ವಾಗ್ಗೇಯಕಾರರೂ ಆಗಿದ್ದರು. ಕೃಷ್ಣಪ್ಪನವರು ಹಲವು ಕೃತಿಗಳನ್ನು ಶ್ರೀ ಕೃಷ್ಣ ಎಂಬ ನಾಮಾಂಕಿತದಲ್ಲಿ ರಚಿಸಿದ್ದಾರೆ. ಬಿಡಾರಂ ಕೃಷ್ಣಪ್ಪನವರು 1931 ರಲ್ಲಿ ನಿಧನರಾದರು.

ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರು

ಇವರು ಹೊಸಗನ್ನಡ ನುಡಿಗನ್ನಡಿ ಎಂಬ ವ್ಯಾಕರಣವನ್ನು ಬರೆದಿದ್ದಾರೆ. ಇವರು ತಮ್ಮ ಪುಸ್ತಕದ ಮುನ್ನುಡಿಯಲ್ಲಿ ತಮ್ಮನ್ನು ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ ಎಂದು ಹೇಳಿಕೊಂಡಿದ್ದಾರೆ. ಮೈಸೂರಿನ ಸುತ್ತಮುತ್ತಲ ಪ್ರದೇಶವನ್ನು ಅಚ್ಚಗನ್ನಡ ನಾಡೆಂದು ಅವರೇ ಕರೆದಿದ್ದಾರೆ. ಇವರು ಶ್ರೀ ವೈಷ್ಣವ ಬ್ರಾಹ್ಮಣರೆಂದು ತಿಳಿಯುತ್ತದೆ. ತಮಿಳು ಇವರ ಮಾತೃಭಾಷೆ. ಇವರು ಶ್ರೀರಂಗಪಟ್ಟಣದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿ ಪಡೆದರು. ನಂತರ ಇವರು ಪ್ಲೀಡರ್ ಆಗಿ ಮದ್ರಾಸಿನಲ್ಲಿ ಹತ್ತು ವರ್ಷಗಳ ಕಾಲವಿದ್ದರು. ಇವರು ಬರೆದ ವ್ಯಾಕರಣ ಗ್ರಂಥವನ್ನು ಗಮನಿಸಿದರೆ, ಇವರಿಗೆ ಮಲಯಾಳಂ, ತುಳು, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಪಾಂಡಿತ್ಯವಿದ್ದಿತು.

ಇವರು ಬರೆದಿರುವ ಗ್ರಂಥಗಳಲ್ಲಿ ಮುಖ್ಯವಾದವುಗಳೆಂದರೆ ಶಬ್ದೋತ್ಪತ್ತಿ (1810), ಶಬ್ದಮಂಜರಿ (1811), ಧಾತು ಮಂಜರಿ (1812). ಈಗ ದೊರಕಿರುವ ಇವರ ಗ್ರಂಥಗಳೆಂದರೆ ಲಘುಕಾಮುದಿ (1813), ನಿರಂತರ (1814), ಸಾಧನಾ (1815) ಇವರು ರಚಿಸಿದ ಮಿಕ್ಕ ಗ್ರಂಥಗಳು ಈಗ ದೊರಕಿಲ್ಲ. ಇವರು ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ (1816) ತಾವು ಬರೆದ ಎಲ್ಲಾ ಗ್ರಂಥಗಳನ್ನೂ ಹಿರಿಯರು ಮಾತನಾಡುವ ಹೊಸಗನ್ನಡದಲ್ಲಿ ಬರೆದಿದ್ದೇನೆ ಎಂದು ಇವರೇ ಹೇಳಿಕೊಂಡಿದ್ದಾರೆ.


ಕೃಷ್ಣಮಾಚಾರ್ಯರು ಬರೆದ ವ್ಯಾಕರಣದ ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿದ ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರು, ಇವರು ಬರೆದ ವ್ಯಾಕರಣ ಗ್ರಂಥ ಸಮರ್ಪಕವಾಗಿದೆ ಎಂದು ಹೇಳಿದ ನಂತರ 1938 ರಲ್ಲಿ ಮಂಗಳೂರಿನ ಬಾಸಲ್ ಮಿಷನ್ ಸಂಸ್ಥೆಯವರು ಇದನ್ನು ಪ್ರಕಟಿಸಿದರು. ವ್ಯಾಕರಣ ಗ್ರಂಥದಲ್ಲಿ ಸರಿ ಎಂದು ಕಂಡು ಬಂದ ಕಡೆ ಇವರು ಗ್ರಾಮ್ಯ ಪದಗಳನ್ನು ಧಾರಾಳವಾಗಿ ಬಳಸಿದ್ದಾರೆ. ಉದಾ ಹರಣೆಗೆ, ತಿನ್ತಾನೆ ಬಂತು ಹಾಗೂ ಸಂಧಿ ಪದಗಳಲ್ಲಿ ಒಡೋದ್ನು, ಕಟ್ತೋಯಿತು, ಹನ್ನಿಬ್ಬರ, ಅಗಳ್ತೆ, ಕಾಲುರಿಚ ಮುಂತಾದವುಗಳನ್ನು ಇವರು ಬಳಸಿದ್ದಾರೆ.

ಕೃಷ್ಣಮಾಚಾರ್ಯರು ತಮ್ಮ ವ್ಯಾಕರಣವನ್ನು ಕೇಶಿರಾಜನ ಶಬ್ದಮಣಿ ದರ್ಪಣದ ಮಾದರಿಯಲ್ಲೇ ಬರೆದಿದ್ದಾರೆ. ಇವರು ಬರೆದ ವ್ಯಾಕರಣದಲ್ಲಿ ಹತ್ತು ಅಧ್ಯಾಯಗಳಿವೆ. ಅವುಗಳೇ 1) ಸಂಜ್ಞಾ ಪ್ರಕರಣ 2) ಸಂಧಿ ಪ್ರಕರಣ, 3) ಕೃದಂತ ಪ್ರಕರಣ, 4) ಶಬ್ದ ಪ್ರಕರಣ, 5) ಆಖ್ಯಾತ ಪ್ರಕರಣ) ಕೃದಂತ ಪ್ರಕರಣ 7) ತದ್ಧಿತ ಪ್ರಕರಣ, 8) ತದ್ಭವ ಪ್ರಕರಣ, 9) ಸಮಾಸ ಪ್ರಕರಣ, 10) ಪ್ರಯೋಗ ಪ್ರಕರಣ. ಈ ಎಲ್ಲಾ ಪ್ರಕರಣಗಳಲ್ಲಿಯೂ ಕೃಷ್ಣಮಾಚಾರ್ಯರು ಸಮನಾದ ಇಂಗ್ಲಿಷ್ ಪದಗಳನ್ನು ಕೊಟ್ಟಿದ್ದಾರೆ.

ಹಿಂದಿನ ವ್ಯಾಕರಣ ಗ್ರಂಥವನ್ನು, ಈ ಗ್ರಂಥದಲ್ಲಿ ಕಾಣುವ ಶಬ್ದಗಳಿಗೆ ತತ್ಸಮ, ತದ್ಭವ, ಅನ್ಯದೇಶ್ಯ ಹಾಗೂ ಗ್ರಾಮ್ಯ ಶಬ್ದಗಳನ್ನು ಕೃಷ್ಣಮಾಚಾರ್ಯ ಅವರು ಪಟ್ಟಿ ಮಾಡಿದ್ದಾರೆ. ನಾಗವರ್ಮ, ಕೇಶಿರಾಜ, ಭಟ್ಟಾ ಕಳಂಕ ಮುಂತಾದವರು ಹಳಗನ್ನಡದಲ್ಲಿ ಬರೆದ ಗ್ರಂಥಗಳನ್ನು ಕೃಷ್ಣಮಾಚಾರ್ಯರು ಹೊಸಗನ್ನಡದಲ್ಲಿ ಬರೆದು ಸಾಮಾನ್ಯ ಜನರಿಗೆ ಹಳಗನ್ನಡ ಗೊತ್ತಿಲ್ಲದವರಿಗೆ ಉಪಕಾರ ಮಾಡಿದ್ದಾರೆ. ಕೃಷ್ಣಮಾಚಾರ್ಯರು 1952 ರಲ್ಲಿ ನಿಧನರಾದರು.

ಹಿಜಬ್ ಧರಿಸಿ ಬಂದ ವಿದ್ಯಾರ್ಥಿನಿಯರು

ಕ್ಲಾಸ್ ಬಹಿಷ್ಕರಿಸಿ ವಿದ್ಯಾರ್ಥಿಗಳಿಂದ ಪ್ರತಿಭಟನೆ



ಮಂಗಳೂರು, ಮೇ 26– ತಣ್ಣಗಾಗಿದ್ದ ಹಿಜಾಬ್ ವಿವಾದ ಮಂಗಳೂರು ಕಾಲೇಜಿನಲ್ಲಿ ಮತ್ತೆ ಪ್ರಾರಂಭವಾಗಿದೆ.

ಮಂಗಳೂರಿನ ಹಂಪನಕಟ್ಟೆಯಲ್ಲಿರುವ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದರು. ಈ ಹಿನ್ನೆಲೆ ಕೆಲ ವಿದ್ಯಾರ್ಥಿಗಳು ನಾವು ಇನ್ಮುಂದೆ ಕೇಸರಿ ಶಾಲು ಧರಿಸಿ ಬರುತ್ತೇವೆ. ಕ್ಲಾಸ್ ಬಹಿಷ್ಕರಿಸಿ, ಎಬಿವಿಪಿ ನೇತೃತ್ವದಲ್ಲಿ ಕ್ಯಾಂಪಸ್ ಬಳಿ ಪ್ರತಿಭಟನೆ ಮಾಡಿದರು. ಇತ್ತೀಚೆಗೆ ಕಾಲೇಜು ಆಡಳಿತ ಮಂಡಳಿ ಮೀಟಿಂಗ್‌ನಲ್ಲಿ ಹಿಜಾಬ್ ಮತ್ತು ಕೇಸರಿ ಶಾಲು ಹಾಕಬಾರದು ಎಂದು ನಿರ್ಧಾರ ಮಾಡಲಾಗಿದೆ. ಆದರೂ ವಿದ್ಯಾರ್ಥಿನಿಯರು ಹಿಜಾಬ್ ಹಾಕಿಕೊಂಡು ಬಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾನಿರತ ವಿದ್ಯಾರ್ಥಿಗಳ ಜೊತೆ ವಿವಿ ರಿಜಿಸ್ಟ್ರಾರ್ ಕಿಶೋರ್ ಕುಮಾರ್ ಮಾತನಾಡಿದ್ದು, ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದ್ದಾರೆ. ಈ ವೇಳೆ ವಿದ್ಯಾರ್ಥಿಗಳು ಎರಡು ತಿಂಗಳಿನಿಂದ ಹಿಜಾಬ್ ನಿಯಮವನ್ನು ಕಾಲೇಜಿನಲ್ಲಿ ಪಾಲಿಸುತ್ತಿಲ್ಲ. ಇದಕ್ಕೆ ಕಾಲೇಜು ಪ್ರಾಂಶುಪಾಲರು ಮತ್ತು ಕೆಲ ಶಿಕ್ಷಕರ ಕಾರಣವಾಗಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ.

ಕಾಲೇಜು ವಿದ್ಯಾರ್ಥಿ ಸಂಘದ ನಾಯಕನ ಬದಲಾವಣೆಗೂ ಸಹ ಮನವಿ ಮಾಡಿದರು. ಕೊನೆಗೆ ರಿಜಿಸ್ಟ್ರಾರ್ ಹಿಜಾಬ್ ನಿಯಮ ಕಟ್ಟುನಿಟ್ಟಾಗಿ ಪಾಲಿಸುವ ಭರವಸೆ ಕೊಟ್ಟದ್ದು, ನಾಳೆಯಿಂದ ಯಾವುದೇ ಕಾರಣಕ್ಕೆ ಹಿಜಾಬ್ ಧರಿಸಿದವರಿಗೆ ಕಾಲೇಜಿನ ಒಳಗೆ ಬಿಡುವುದಿಲ್ಲವೆಂದು ಭರವಸೆ ಕೊಟ್ಟರು. ಭರವಸೆ ಹಿನ್ನೆಲೆ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟಿದ್ದಾರೆ. ನಾಳೆ ಶಾಸಕ ವೇದವ್ಯಾಸ ಕಾಮತ್ ನೇತೃತ್ವದಲ್ಲಿ ಕಾಲೇಜಿನಲ್ಲಿ ಸಭೆ ನಡೆಸುವುದಾಗಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಶೀಘ್ರದಲ್ಲೇ ಮದ್ಯದ ದರ ಕಡಿತ ಸಾಧ್ಯತೆ



ಬೆಂಗಳೂರು, ಮೇ 26– ಎಲ್ಲವೂ ಸುಸೂತ್ರವಾಗಿ ನಡೆದರೆ ಕರ್ನಾಟಕದಲ್ಲಿ ದುಬಾರಿ ಬೆಲೆಯ ಮದ್ಯದ ಬೆಲೆ ಅಗ್ಗವಾಗಲಿದೆ. ರಾಜ್ಯ ಅಬಕಾರಿ ಇಲಾಖೆಯು ಇತರ ರಾಜ್ಯಗಳಲ್ಲಿನ ಮದ್ಯದ ದರದ ಮಾದರಿಯನ್ನು ಅಧ್ಯಯನ ಮಾಡಿದ ನಂತರ ದುಬಾರಿ ಮದ್ಯದ ಬೆಲೆಯನ್ನು ಕಡಿಮೆ ಮಾಡಲು ಯೋಚಿಸುತ್ತಿದೆ. ಇದರಿಂದ ಮದ್ಯ ಮಾರಾಟ ಹೆಚ್ಚಳವಾಗುವ ನಿರೀಕ್ಷೆಯೊಂದಿಗೆ ರಾಜ್ಯ ಸರ್ಕಾರ ಹೆಚ್ಚುವರಿ ಆದಾಯದ ಮೇಲೆ ಕಣ್ಣಿಟ್ಟಿದೆ.

2021–22ರಲ್ಲಿ ಮದ್ಯದಿಂದ 24,580 ಕೋಟಿ ರೂ. ಆದಾಯ ಸಂಗ್ರಹ ಗುರಿ ನೀಡಲಾಗಿತ್ತು. ಆದರೆ ಗುರಿ ಮೀರಿ 26,276.83 ಕೋಟಿ ರೂಪಾಯಿ ಆದಾಯ ಸಂಗ್ರಹವಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಬಜೆಟ್‌ನಲ್ಲಿ 2022–23ನೇ ಸಾಲಿನಲ್ಲಿ 29,000 ಕೋಟಿ ಆದಾಯ ಸಂಗ್ರಹ ಗುರಿ ನೀಡಿದ್ದಾರೆ.

ಅಬಕಾರಿ ಸಚಿವ ಕೆ ಗೋಪಾಲಯ್ಯ ಅವರು ಮಾತನಾಡಿ, ಕರ್ನಾಟಕದಲ್ಲಿ ದುಬಾರಿ ಮದ್ಯದ ಬೆಲೆಯನ್ನು ಕಡಿಮೆ ಮಾಡುವ ಬಗ್ಗೆ ಯೋಚಿಸಲಾಗುತ್ತಿದೆ. ಇದಕ್ಕಾಗಿ ಐದು ತಂಡಗಳನ್ನು ರಚಿಸಲಾಗಿದ್ದು, ಈ ತಂಡಗಳು ಮಹಾರಾಷ್ಟ್ರ, ತೆಲಂಗಾಣ, ಕೇರಳ, ದೆಹಲಿ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಿಗೆ ಭೇಟಿ ನೀಡಿ, ದುಬಾರಿ ಮದ್ಯದ ಬೆಲೆಗಳು ಮತ್ತು ಅಬಕಾರಿ ಸುಂಕದ ಸ್ಲ್ಯಾಬ್‌ಗಳನ್ನು ಅಧ್ಯಯನ ಮಾಡಲಿವೆ. "ಜೂನ್ ಮೊದಲ ವಾರದಲ್ಲಿ ವಿಧಾನ ಪರಿಷತ್ ಸದಸ್ಯರ ಚುನಾವಣೆ ನಂತರ ಅಧ್ಯಯನ ಮಾಡುತ್ತೇವೆ ಎಂದಿದ್ದಾರೆ. ಅಬಕಾರಿ ಇಲಾಖೆಯ ಮೂಲಗಳ ಪ್ರಕಾರ, ಕರ್ನಾಟಕದಲ್ಲಿ ಮದ್ಯದಿಂದ ದಿನಕ್ಕೆ ಸರಾಸರಿ 75 ಕೋಟಿ ರೂಪಾಯಿ ಆದಾಯ ಸಂಗ್ರಹವಾಗುತ್ತಿದೆ. ಕರ್ನಾಟಕವು ಮದ್ಯದ ಬಳಕೆಯಲ್ಲಿ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ಆದರೆ ಅಬಕಾರಿ ಸುಂಕ ದೇಶದಲ್ಲಿಯೇ ಅತಿ ಹೆಚ್ಚು ವಿಧಿಸುತ್ತಿರುವುದರಿಂದ ಆದಾಯ ಕಡಿಮೆಯಾಗಲು ಕಾರಣವಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಇಂದು ಸಚಿವಾಲಯ ಬಂದ್

ಪ್ರತಿಭಟನೆ ಕಾನೂನುಬಾಹಿರ ಎಂದ ಸರ್ಕಾರ

ಬೆಂಗಳೂರು, ಮೇ 26– ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ಸಚಿವಾಲಯ ನೌಕರರ ಸಂಘ ಶುಕ್ರವಾರ ಸಚಿವಾಲಯ ಬಂದ್ ಕರೆ ನೀಡಿದ್ದು, ಸಿಬ್ಬಂದಿಗಳ ಪ್ರತಿಭಟನೆ ಕಾನೂನು ಬಾಹಿರ ಎಂದು ರಾಜ್ಯ ಸರ್ಕಾರ ಎಚ್ಚರಿಕೆ ನೀಡಿದೆ.

ನೌಕರರ ಸಂಘದವರು ಸಚಿವಾಲಯದ ಬಂದ್ ಆಚರಿಸಲು ಕರೆ ನೀಡಿರುವುದು ಕಾನೂನು ಬಾಹಿರವಾಗಿದೆ. ಈ ಕ್ರಮವನ್ನು ಸರ್ಕಾರವು ಬಹಳ ಗಂಭೀರವಾಗಿ ಪರಿಗಣಿಸಿದೆ. ಈ ಹಿನ್ನೆಲೆಯಲ್ಲಿ ಸಂಘದ ಸಿಬ್ಬಂದಿ ಕಚೇರಿಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು. ಒಂದು ವೇಳೆ ಸಚಿವಾಲಯದ ಸಿಬ್ಬಂದಿ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಕಚೇರಿಗೆ ಗೈರು ಹಾಜರಾದಲ್ಲಿ ಅದನ್ನು ಲೆಕ್ಕಕ್ಕಿಲ್ಲದ ಅವಧಿ ಎಂದು ಪರಿಗಣಿಸಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿದೆ. ಅಲ್ಲದೆ, ಕಚೇರಿಗೆ ಹಾಜರಾಗಲು ಇಚ್ಛೆಪಡುವ ಸಿಬ್ಬಂದಿಗೆ ಅಡ್ಡಿ ಪಡಿಸುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕ್ರಮವಹಿಸಲಾಗುವುದು ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಾಸಿನ್ ಮಲಿಕ್‌ಗೆ ಜೀವಾವಧಿ ಶಿಕ್ಷೆ ಸ್ವಾಗತಿಸಿದ ಅಜ್ಮೀರ್ ದರ್ಗಾ ಮುಖ್ಯಸ್ಥ

ಜೈಪುರ, ಮೇ 26– ಉಗ್ರರಿಗೆ ಆರ್ಥಿಕ ನೆರವು ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಕೋರ್ಟ್ ಕಾಶ್ಮೀರಿ ಪ್ರತ್ಯೇಕತಾ ವಾದಿ ನಾಯಕ ಯಾಸಿನ್ ಮಲಿಕ್‌ಗೆ ಜೀವಾವಧಿ ಶಿಕ್ಷೆ ನೀಡಿರುವುದನ್ನು ಸ್ವಾಗತಿಸಿದ ಅಜ್ಮೀರ್ ದರ್ಗಾದ ದಿವಾನ್ ಸೈಯದ್ ಜೈನುಲ್ ಅಬೇದಿನ್ ಅಲಿ ಖಾನ್ ಅವರು, ದೇಶದ ನ್ಯಾಯಾಂಗ ವ್ಯವಸ್ಥೆಯು ತನ್ನ ವಿವೇಕ, ಸ್ವಾತಂತ್ರ್ಯ ಮತ್ತು ಪಾರ ದರ್ಶಕತೆಯನ್ನು ಮತ್ತೊಮ್ಮೆ ಸಾಬೀತು ಪಡಿಸಿದೆ ಎಂದು ತಿಳಿಸಿದ್ದಾರೆ.



ಅಬೇದಿನ್ ಅಲಿ ಖಾನ್

ಈ ಅಪರಾಧಗಳು ಭಾರತದ ಕಲ್ಪನೆಯ ಹೃದಯ ಒಡೆಯುವ ಉದ್ದೇಶವನ್ನು ಹೊಂದಿದ್ದವು ಮತ್ತು ಜಮ್ಮು ಮತ್ತು ಕಾಶ್ಮೀರವನ್ನು ಭಾರತ ಒಕ್ಕೂಟದಿಂದ ಬಲವಂತವಾಗಿ ಪ್ರತ್ಯೇಕಿಸುವ ಉದ್ದೇಶವನ್ನು ಹೊಂದಿವೆ ಎಂದು ಅಜ್ಮೀರ್ ದರ್ಗಾ ಮುಖ್ಯಸ್ಥರು ಹೇಳಿದ್ದಾರೆ. ಸಂಪೂರ್ಣ ನ್ಯಾಯಾಂಗ ಪ್ರಕ್ರಿಯೆಯ ನಂತರ ಯಾಸಿನ್ ಮಲಿಕ್ ಅವರಿಗೆ ಶಿಕ್ಷೆ ನೀಡಲಾಗಿದೆ. ಭಾರತದ ನ್ಯಾಯಾಂಗ ವ್ಯವಸ್ಥೆಯು ತನ್ನ ವಿವೇಕ, ಸ್ವಾತಂತ್ರ್ಯ ಮತ್ತು ಪಾರ ದರ್ಶಕತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಇದನ್ನು ಇಡೀ ಜಗತ್ತು ಸದಾ ಪ್ರಶಂಸಿಸುತ್ತದೆ" ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

"ವಿಶ್ವದ ಮುಂದೆ ಪಾಕಿಸ್ತಾನ ನಿಜವಾದ ಬಣ್ಣ ಈಗ ಬಯಲಾಗಿದೆ. ಭಾರತದಲ್ಲಿ ಭಯೋತ್ಪಾದನೆಯನ್ನು ಪ್ರಚೋದಿಸುವ ಮೂಲಕ ಕಾಶ್ಮೀರದಲ್ಲಿ ಭಯೋತ್ಪಾದಕ ಘಟನೆಗಳನ್ನು ನಡೆಸಲು ಅಮಾಯಕ ಕಾಶ್ಮೀರಿಗಳ ಕೈಯಿಂದ ಪುಸ್ತಕಗಳನ್ನು ಕಸಿದುಕೊಂಡು ಅವರ ಕೈಗೆ ಬಂದೂಕುಗಳನ್ನು ನೀಡುತ್ತಿದೆ. ಯಾಸಿನ್ ಮಲಿಕ್ ಅವರಂತಹವರ ಮೂಲಕ ಭಾರತದಲ್ಲಿ ಭಯೋತ್ಪಾದನೆಗೆ ಹೇಗೆ ಆರ್ಥಿಕ ನೆರವು ನೀಡುತ್ತಿದೆ ಎಂಬುದು ಬಹಿರಂಗವಾಗಿದೆ? ಎಂದು ಅವರು ಹೇಳಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ವಿಭಿನ್ನ ಪಾತ್ರದಲ್ಲಿ ಸಾರಿ ಅಂದ ರಾಗಿಣಿ



ವೀರಮದಕರಿ ಚಿತ್ರದಿಂದ ಕನ್ನಡಿಗರ ಮನದಲ್ಲಿ ನೆಲೆಸಿರುವ ರಾಗಿಣಿ, ಈವರೆಗೂ ಇಪ್ಪತ್ತೈದಕ್ಕೂ ಹೆಚ್ಚಿನ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಪ್ರಸ್ತುತ ಅವರ ನಟನೆಯ ಚಿತ್ರ "ಸಾರಿ" ಬಿಡುಗಡೆಯ ಹಂತದಲ್ಲಿದೆ. ಮೇ 24 ರಾಗಿಣಿ ಹುಟ್ಟುಹಬ್ಬ. ಹಾಗಾಗಿ ಚಿತ್ರದ ವಿಭಿನ್ನ ಮೋಷನ್ ಪೋಸ್ಟರನ್ನು ಚಿತ್ರತಂಡ ಬಿಡುಗಡೆ ಮಾಡಿದೆ.

ನಾಯಕಿ ರಾಗಿಣಿ ದ್ವಿವೇದಿ ಮಾತನಾಡುತ್ತ ನನ್ನನ್ನು ಪತ್ರಕರ್ತ ಅಫ್ಜಲ್ ಭೇಟಿಯಾಗಿ ಈ ಚಿತ್ರದ ಕುರಿತು ಹೇಳಿದರು. ಕಥೆ ತುಂಬಾ ಇಷ್ಟವಾಯಿತು. ಈ ಚಿತ್ರದ ನಿರ್ದೇಶಕ ಬ್ರಹ್ಮ ಅವರ ಬಗ್ಗೆ ತಿಳಿದು ಆಶ್ಚರ್ಯವಾಯಿತು. ಅವರು ಒಬ್ಬ ಅತ್ಯುತ್ತಮ ತಂತ್ರಜ್ಞ. ನಾನು ಒಂದೇ ಥರದ ಪಾತ್ರ ಮಾಡಲು ಇಷ್ಟಪಡುವುದಿಲ್ಲ. ಬೇರೆಬೇರೆ ಪಾತ್ರ ಮಾಡಬೇಕೆಂದು ನನ್ನ ಆಸೆ. ಅದರಲ್ಲೂ ಈವರೆಗೂ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು,

ನಾನು ಅನಿಮೇಷನ್ ಹಾಗೂ ವಿಎಫ್ಎಕ್ಸ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ಈ ಹಿಂದೆ "ಸಿದ್ದಿಸೀರೆ" ಎಂಬ ಚಿತ್ರ ನಿರ್ದೇಶಿಸಿದ್ದ ನನಗೆ ಇದು ಎರಡನೇ ಚಿತ್ರ. ಅಫ್ಜಲ್ ಅವರು ಹೇಳಿದ ಒಂದೆಳೆ ಇಷ್ಟವಾಯಿತು. ನಾನು ಅದನ್ನು ಮುಂದುವರೆಸಿದೆ. ಇದರಲ್ಲಿ ಮಾಟ-ಮಂತ್ರ, ಬ್ಲ್ಯಾಕ್‌ಮ್ಯಾಜಿಕ್ ಅಂತ ಏನು ಇಲ್ಲ. ಇದೊಂದು ಕ್ರೈಂ ಥ್ರಿಲ್ಲರ್. ಸೂಪರ್ ಹೀರೋ ಕಾನ್ಸೆಪ್ಟ್‌ನ ಚಿತ್ರ ಎನ್ನುತ್ತಾರೆ ನಿರ್ದೇಶಕ ಬ್ರಹ್ಮ.

ಸಮಾರಂಭವೊಂದರಲ್ಲಿ ಬ್ರಹ್ಮ ಅವರ ಬಳಿ ಈ ಸಿನಿಮಾ ವಿಷಯ ಹೇಳಿದೆ. ನಂತರ ರಾಗಿಣಿ ಅವರು ಈ ಪಾತ್ರಕ್ಕೆ ಸೂಕ್ತ ಅನಿಸಿತು. ಅವರ ಬಳಿ ಹೋಗಿ ನೀವು ಈ ಚಿತ್ರದಲ್ಲಿ ನಟಿಸಬೇಕು ಎಂದು ಕೇಳಿದಾಗ, ತಕ್ಷಣ ಒಪ್ಪಿಕೊಂಡರು. ಕೆನಡಾ ನಿವಾಸಿ ನವೀನ್ ಕುಮಾರ್ ಈ ಚಿತ್ರದ ನಿರ್ಮಾಪಕರು. ಜೈಕೃಪ್ಲಾನಿ ಹಾಗೂ ಜೇನ್ ಜಾರ್ಜ್ ಸಹ ನಿರ್ಮಾಪಕರು. ಬೆಂಗಳೂರು, ಸಕಲೇಶಪುರದ ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ಮಾಡಿದ್ದೇವೆ. ಮುಂದಿನ ಭಾಗದ ಚಿತ್ರೀಕರಣ ಹೈದರಾಬಾದ್‌ನಲ್ಲಿ ನಡೆಯಲಿದೆ ಎಂದು ಕಾರ್ಯಕಾರಿ ನಿರ್ಮಾಪಕ ಅಫ್ಜಲ್ ಮಾಹಿತಿ ನೀಡಿದರು. ಛಾಯಾಗ್ರಾಹಕ ರಾಜೀವ್ ಗಣೇಶನ್ ಹಾಗೂ ನಟ ಸ್ವರ್ಣ ಚಂದ್ರ ಕೂಡ "ಸಾರಿ" ಚಿತ್ರದ ಬಗ್ಗೆ ಮಾತನಾಡಿದರು.



ಗುಡ್ ಗುಡ್ಡರ್ ಗುಡ್ಡೆಸ್ಟ್



ಸಂಭಾಷಣೆಕಾರನಾಗಿ ಗುರುತಿಸಿಕೊಂಡಿರುವ ಯುವಧೀರ, ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಗುಡ್ ಗುಡ್ಡರ್ ಗುಡೆಸ್ಟ್ ಸಿನಿಮಾ ಮೂಲಕ ನಿರ್ದೇಶನಕ್ಕಿಳಿದಿದ್ದಾರೆ. ವೀರಾಂಜನೇಯ ಸ್ವಾಮಿ ದೇಗುಲದಲ್ಲಿ ಈ ಚಿತ್ರದ ಮುಹೂರ್ತ ನೆರವೇರಿತು.


ನನ್ನ ಮೊದಲ ನಿರ್ದೇಶನದ ಚಿತ್ರವಿದು. ಡಾರ್ಕ್ ಹ್ಯೂಮರ್ ಕಂಟೆಂಟ್ ಇರುವ ಈ ಚಿತ್ರದ ಕಥೆ ಮೂರು ಟ್ರ್ಯಾಕ್‌ನಲ್ಲಿ ನಡೆಯುತ್ತದೆ. ಇದು ಯಾವ ಜಾನರ್ ಸಿನಿಮಾ ಅಂತ ವರ್ಗೀಕರಣ ಮಾಡುವುದು ಕಷ್ಟ, ಹೀಗಾಗಿ ಇದು ಮಲ್ಟಿಪಲ್ ಜಾನರ್‌ನ ಸಿನಿಮಾ ಎಂದು ನಿರ್ದೇಶಕ ಯುವಧೀರ ಚಿತ್ರದ ಕುರಿತಂತೆ ಮಾಹಿತಿ ಹಂಚಿಕೊಂಡರು. ಪ್ರಮುಖ ಪಾತ್ರಧಾರಿ ಸುಚೇಂದ್ರ ಪ್ರಸಾದ್ ಮಾತನಾಡಿ, ನಿಜ ಜೀವನದ ಕೆಲವು ಪ್ರಸಂಗಗಳನ್ನು ತಳುಕು ಹಾಕಿ ಈ ಚಿತ್ರದ ಕಥೆ ರೆಡಿ ಮಾಡಿದ್ದಾರೆ. ಒಳ್ಳೆ ಕಂಟೆಂಟ್ ಚಿತ್ರದಲ್ಲಿದೆ ಎಂದು ಹೇಳಿದರು.

ಯುವಧೀರ ನಿರ್ದೇಶನದ ಜೊತೆಗೆ ತಾವೇ ಈ ಸಿನಿಮಾದಲ್ಲಿ ನಾಯಕನಾಗಿಯೂ ಅಭಿನಯಿಸುತ್ತಿದ್ದು, ಇವರ ಜೋಡಿಯಾಗಿ ಆದ್ಯ ಪ್ರಿಯಾ ಕಾಣಿಸಿಕೊಳ್ಳಲಿದ್ದಾರೆ. ಸೋನುಗೌಡ, ಪ್ರಮೋದ್ ಶೆಟ್ಟಿ ಗೋಪಾಲ್ ಕೃಷ್ಣ ದೇಶಪಾಂಡೆ, ಸುಚೇಂದ್ರ ಪ್ರಸಾದ್, ವಿಮನೋಹರ್ ತಾರಾಬಳಗದಲ್ಲಿದ್ದಾರೆ.

ಸುರೇಶ್ ಬಿ ನಿರ್ಮಾಣದ ಈ ಚಿತ್ರಕ್ಕೆ ಬೆಂಗಳೂರು, ಮಂಗಳೂರು, ಮೈಸೂರು ಸುತ್ತಮುತ್ತ 45 ದಿನಗಳ ಕಾಲ ಶೂಟಿಂಗ್ ನಡೆಯಲಿದೆ ಸುದೀಪ್ ಹೊಲ್ಲೂರಿ ಕ್ಯಾಮೆರಾ, ಶಶಾಂಕ್ ಶೇಷಗಿರಿ ಸಂಗೀತ, ಕಿರಣ್ ಸಂಕಲನ ಸಿನಿಮಾಕ್ಕಿದೆ.

ಕಂಬಳದ ಇತಿಹಾಸ ಹೇಳುವ ವೀರಕಂಬಳ

ತುಳುನಾಡಿನ ಜಾನಪದ ಕ್ರೀಡೆಗಳಲ್ಲಿ ಕಂಬಳಕ್ಕೆ ಬಹುದೊಡ್ಡ ಹೆಸರಿದೆ. ಈಗ ಇದೇ ಹೆಸರಿನ ಚಿತ್ರವನ್ನು ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನಿರ್ದೇಶಿಸುತ್ತಿದ್ದಾರೆ. ಅರುಣ್ ರೈ ತೋಡಾರ್ ನಿರ್ಮಾಣದ ಈ ಚಿತ್ರದಲ್ಲಿ ಆದಿತ್ಯ, ರಾಧಿಕಾ ನಾರಾಯಣ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.




ಕೋಣಗಳ ಮೂಡ್ ಒಂದೇ ಥರ ಇರುವುದಿಲ್ಲ. ಕೋಣಗಳನ್ನು ನಿಯಂತ್ರಿಸಿ ಶೂಟ್ ಮಾಡುವುದು ಸುಲಭದ ಮಾತಾಗಿರಲಿಲ್ಲ. ಸುಮಾರು 500 ಕ್ಕೂ ಹೆಚ್ಚು ಜನ ಒಂದು ದಿನದ ಚಿತ್ರೀಕರಣದಲ್ಲಿ ಭಾಗವಹಿಸುತ್ತಿದ್ದರು. ಈ ಚಿತ್ರದಲ್ಲಿ ಕಥೆಯೇ ಹೀರೋ. ಅದು ಬಿಟ್ಟರೆ, ಕೋಣಗಳನ್ನು ಓಡಿಸುವುದರಲ್ಲಿ ಪ್ರಸಿದ್ಧರಾಗಿರುವ ಶ್ರೀನಿವಾಸಗೌಡ ಹಾಗೂ ನಾಟಕ ಕಲಾವಿದ ಸ್ವರಾಜ್ ಶೆಟ್ಟಿ ಕಂಬಳ ಓಡಿಸುವವರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಿಶೇಷ ಪಾತ್ರದಲ್ಲಿ ಆದಿತ್ಯ, ರಾಧಿಕಾ, ಚೇತನ್ ಪೊಲೀಸ್ ಕಮಿಷನರ್ ಆಗಿ ಕಾಣಿಸಿಕೊಂಡಿದ್ದಾರೆ. ನವೀನ್ ಪಡೀಲ್, ಗೋಪಿನಾಥ್ ಭಟ್, ಭೋಜರಾಜ್ ವಾಮಾಂಜುರು ಸೇರಿದಂತೆ ಹಲವಾರು ತುಳು ನಟರು ಈ ಚಿತ್ರದಲ್ಲಿದ್ದಾರೆ. ಬಹುತೇಕ ಚಿತ್ರೀಕರಣ ಮುಗಿದಿದ್ದು, ಸ್ವಲ್ಪ ಭಾಗದ ಚಿತ್ರೀಕರಣ ಮಾತ್ರ ಬಾಕಿಯಿದೆ. ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ "ವೀರ ಕಂಬಳ" ಪ್ರೇಕ್ಷಕರ ಮುಂದೆ ಬರಲಿದೆ. ಈ ಚಿತ್ರಕ್ಕೆ ದೇಸಿ ಸಂಗೀತ ಬೇಕಿತ್ತು. ಹಾಗಾಗಿ ಅಲ್ಲಿನ ಬಗ್ಗೆ ತಿಳಿದಿರುವ ಮಣಿಕಾಂತ್ ಕದ್ರಿ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಗಿರಿ ಈ ಚಿತ್ರದ ಛಾಯಾಗ್ರಾಹಕರು.

ತುಳು ಹಾಗೂ ಕನ್ನಡ ಭಾಷೆಗಳಲ್ಲಿ ಈ ಚಿತ್ರ ಬರುತ್ತಿದೆ. ತೆಲುಗು, ತಮಿಳು, ಹಿಂದಿ ಹಾಗೂ ಇಂಗ್ಲೀಷ್ ಭಾಷೆಗಳಿಗೆ ಡಬ್ ಮಾಡಿ, ರಿಲೀಸ್ ಮಾಡುತ್ತಿದ್ದೇವೆ. ವಿದೇಶಗಳಲ್ಲಿ ಪ್ರೀಮಿಯರ್ ಶೋ ನಡೆಸುವ ಯೋಜನೆಯಿದೆ ಎಂದು ಚಿತ್ರದ ಬಗ್ಗೆ ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಮಾಹಿತಿ ನೀಡಿದರು.

ನಟ ಆದಿತ್ಯ ಮಾತನಾಡುತ್ತ, ನನಗೆ ತುಳು ಚಿತ್ರದಲ್ಲಿ ಅಭಿನಯಿಸುವ ಆಸೆ ಮುಂಚಿನಿಂದಲೂ ಇತ್ತು. ಒಬ್ಬ ಡಾನ್ ಪಾತ್ರವನ್ನು ನಾನೀ ಚಿತ್ರದಲ್ಲಿ ನಿರ್ವಹಿಸಿದ್ದೇನೆ ಎಂದು ಹೇಳಿದರು.

ರಾಜೇಂದ್ರ ಸಿಂಗ್ ಬಾಬು ಅವರ ನಿರ್ದೇಶನದಲ್ಲಿ ಚಿತ್ರತುಂಬಾ ಚೆನ್ನಾಗಿ ಬಂದಿದೆ ನಾನು ಅವರ ಅಭಿಮಾನಿ ಕೂಡ ಎಂದರು ನಿರ್ಮಾಪಕ ಅರುಣ್ ರೈ ತೋಡಾರ್.

ಆರ್.ಗಿರಿ ಅವರ ಛಾಯಾಗ್ರಹಣ, ಮಣಿಕಾಂತ್ ಕದ್ರಿ ಅವರ ಸಂಗೀತ ನಿರ್ದೇಶನ ಹಾಗೂ ಶ್ರೀನಿವಾಸ್ ಆರ್.ಬಾಬು ಅವರ ಸಂಕಲನವಿರುವ ಈ ಚಿತ್ರಕ್ಕೆ ವಿಜಯ್ ಕುಮಾರ್ ಕಿಡಿಯಾಲ್ ಬೈಲ್ ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ರಾಜೇಶ್ ಕುಡ್ಲ ಅವರ ನಿರ್ಮಾಣ ನಿರ್ವಹಣೆ "ವೀರ ಕಂಬಳ" ಚಿತ್ರಕ್ಕಿದೆ.



ವಿಕ್ರಾಂತ್ ರೋಣ ಗಡಂಗ್ ರಕ್ಕಮ್ಮ ಹಾಡು ಬಿಡುಗಡೆ


ದುಬೈನ ಬುರ್ಜ್ ಖಲೀಫಾ ಮೇಲೆ ಕನ್ನಡದ ಕೀರ್ತಿಪತಾಕೆಯನ್ನು ಹಾರಿಸಿದ ಹಿರಿಮೆ ಹೊಂದಿರುವ ವಿಕ್ರಾಂತ್‌ರೋಣ ಚಿತ್ರವು ಪ್ರಾರಂಭವಾದಾಗಿನಿಂದ ಸುದ್ದಿ ಮಾಡುತ್ತಲೇ ಇದೆ. ಈ ಚಿತ್ರದಲ್ಲಿ ಬಾಲಿವುಡ್ ಹಾಟ್ ಹಾವರೀಟ್ ಜಾಕ್ವೆಲಿನ್ ಫರ್ನಾಂಡಿಸ್, ಕಿಚ್ಚ ಸುದೀಪ್ ಜೊತೆ ಸಖತ್ ಸ್ಟೆಪ್ ಹಾಕಿದ್ದಾರೆ. ಅದ್ದೂರಿಯಾಗಿ ಚಿತ್ರೀಕರಣಗೊಂಡಿರುವ ಆ ಹಾಡಿನ ಲಿರಿಕಲ್ ವೀಡಿಯೋ ಈಗ ಬಿಡುಗಡೆಯಾಗಿದ್ದು, ರಿಲೀಸಾದ ಕೆಲವೇ ಗಂಟೆಗಳಲ್ಲಿ ಲಕ್ಷಾಂತರ ವೀಕ್ಷಣೆಯಾಗಿದೆ.

ಜುಲೈ 28ರಂದು ತೆರೆಗೆ ಬರುವ ಈ ಚಿತ್ರದ ಗಡಂಗ್ ರಕ್ಕಮ್ಮ ಹಾಡಲ್ಲಿ ತನ್ನ ಬಳುಕುವ ಸೊಂಟದೊಂದಿಗೆ ಹೆಜ್ಜೆ ಹಾಕುವ ಮೂಲಕ ಪಡ್ಡೆ ಹೈಕ್ಳ ಹೃದಯ ಕದ್ದಿರುವ ಜಾಕ್ವೆಲಿನ್ ಅಭಿನಯದ ಈ ಹಾಡನ್ನು ಕಂಠೀರವ ಸ್ಟುಡಿಯೋದಲ್ಲಿ ಸೆಟ್ ಹಾಕಿ, ಆರು ದಿನಗಳ ಕಾಲ ಚಿತ್ರೀಕರಣ ಮಾಡಲಾಗಿತ್ತು ಸುಮಾರು 250 ನೃತ್ಯ ಕಲಾವಿದರು ಈ ಹಾಡಿನಲ್ಲಿ ಭಾಗವಹಿಸಿದ್ದರು. ನಿರ್ದೇಶಕ ಅನೂಪ್ ಭಂಡಾರಿ ಅವರೇ ಸಾಹಿತ್ಯ ಬರೆದಿರುವ ಈ ಹಾಡಿಗೆ ಅಜನೀಶ್ ಲೋಕನಾಥ್ ರಾಗಸಂಯೋಜನೆ ಮಾಡಿದ್ದಾರೆ.

ಶಾಲಿನಿ ಆರ್ಟ್ಸ್ ಮೂಲಕ ಶಾಲಿನಿ ಮಂಜುನಾಥ್ ಹಾಗೂ ಜಾಕ್ ಮಂಜುನಾಥ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಅತಿದೊಡ್ಡ ಮೊತ್ತದ ಬಂಡವಾಳ ಹೂಡಿಕೆಯಾಗಿರುವ ಈ ಚಿತ್ರವು ಕನ್ನಡ ಸೇರಿದಂತೆ ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.

ಸಿನಿಪದಬಂಧ-009

ಆಜ್ಹಾದ್ ಜಿ. ಆಚಾರ್ಯ 6361429085



ಹೆಸರು

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಉಪೇಂದ್ರ ಕಾಮದೇವನ ಪಾತ್ರದಲ್ಲಿ ಕಾಣಿಸಿಕೊಂಡ ಕಾಶಿನಾಥ್ ಸಿನಿಮಾ (8)
4. ಪುನೀತ್ ಪ್ರೀತಿಯ ಹೆಸರು ಚಿತ್ರವೂ ಹೌದು (2)
5. ಯೋಗರಾಜ್ ಭಟ್ಟರ ಸಿನಿಮಾದಲ್ಲಿ ಪ್ರಿಯಾಂಕಾ ಉಪೇಂದ್ರ ನಟಿಸಿದ್ದಾರೆ (4)
7. ತಿರುವು ಮುರುವುವಾದ --ಕಾಮ್ಯ (2)
9. ಸಂಗೀತ ಮೇಳೈಸಿದ ವಿಷ್ಣುವರ್ಧನ್ ಸಿನಿಮಾ ಉತ್ತರಾರ್ಧ (3)
11. ವಿಷ್ಣು ಸಿನಿಮಾದ "ಸಿಂಹಧ್ವನಿ" ಈ ಚಿತ್ರದಲ್ಲಿ ಮೆತ್ತಗಾಗಿದೆ (3)
13. ಮಿಲನ ಎಂಬರ್ಥದ ಮೈಸೂರಿನ ಚಿತ್ರಮಂದಿರ (3)
15. ಎಂ. ಎಸ್. ಸತ್ಯು ನಿರ್ಮಾಣ-ನಿರ್ದೇಶನದ ಕ್ಷಾಮ (2)
18. ವಿಷ್ಣುವರ್ಧನ್-ಖುಷ್ಬೂ ಅಭಿನಯದಲ್ಲಿ ಬಂದ ಕಾವೇರಿ (4)
19. "ಹುಷಾರ್"- ಪರೋಪಕಾರಿ ಮತ್ತು ಕೆ.ಜಿ.ಎಫ್ ಸಿನಿಮಾಗಳ ಹಾಡು (2)
20. ಅಮೋಲ್ ಪಾಲೇಕರ್ ನಟನೆಯ ಗೋಲ್‌ಮಾಲ್ ಚಿತ್ರದ ಕನ್ನಡ ಅವತರಣಿಕೆಯಲ್ಲಿ ಶಿವಣ್ಣ-ರಾಘಣ್ಣ (8)

ಮೇಲಿನಿಂದ ಕೆಳಕ್ಕೆ

1. ದೇವರಾಜ್-ವಿನಯಪ್ರಸಾದ್ ನಟಿಸಿದ ಬೆಂಕಿಗೂಡು (5)
2. ಶಶಿಕುಮಾರ್ ಚಂದ್ರಿಕಾ "ಬೇಕಾಗಿದ್ದಾರೆ" (3)
3. ಶಂಕರನಾಗ್ ನಿಗೂಢ---, ಗುಟ್ಟು (3)
4. ಕನ್ನಡದ ಕುಳ್ಳನ ಲಕ್ ಚಿತ್ರ (5)
6. ಅನು ಭಂಡಾರಿ ನಿರ್ದೇಶನದದಲ್ಲಿ ರಂಗು ತುಂಬಿ ಅಲೆಯಾಗಿ ಬಂದ ಚಿತ್ರ (5)
8. ಮಗನ ಮಗನಾದ ರವಿಚಂದ್ರನ್-ಮೀನಾ ಜೋಡಿಯ ಚಿತ್ರ (3)
10. ಚಿರಂಜೀವಿ ಸರ್ಜಾ-ರಾಧಿಕಾ ಚಿತ್ರ (5)
12. ಸವಿ ಸವಿ --- ಸಾವಿರ (3)
13. ಅಂಬರೀಶ್-ಮಹಾಲಕ್ಷ್ಮಿ ಈ ದೋಣಿಯಲ್ಲಿ ಪಯಣಿಸಿದರು (5)
14. ಹೊಸ ವರ್ಷ ಸಾರುವ ಹಬ್ಬ (5)
16. ತಿರುಗಿದ ಗಣೇಶ್-ಪ್ರಿಯಾ ಆನಂದ್ ಚಿತ್ರ, ಕಿತ್ತಳೆಯೂ ಹೌದು (3)
17. ಭೂತಯ್ಯನ ಮಗ ಅಯ್ಯು ಲೇಖಕರ ತವರೂರು-ಶೀರ್ಷಾಸನ ಹಾಕಿದೆ (3)

ಸಿನಿ ಪದಬಂಧ 008ರ ಸರಿ ಉತ್ತರ

ಕ	ಥೆ	ಯೊಂ	ದು	ಶು	ರು	ವಾ	ಗಿ	ದೆ		ಆ
ರು							ರಿ		ವಿ	ಶ್ವ
ನಾ	ರ	ದ	ವಿ	ಜ	ಯ			ಮೀ		ಮೇ
ಡ				ಗ			ಜ	ರಾ	ಸಂ	ಧ
ತಾ	ಕ	ತ್					ಮಾ		ಧ್ಯಾ	
ಯಿ			ಆ	ತ್ಮ	ಬಂ	ಧ	ನ			ರಾ
	ಜಾ		ಯು					ಸಂ	ಗ್ರಾ	ಮ
ಅ	ನು	ರಾ	ಧ			ಜಾ				ಶಾ
ಮೇ		ಗ			ನೀ	ಲ	ಮೇ	ಘ	ಶ್ಯಾ	ಮ
ರಿ	ಷಿ		ಸೇ							ಭಾ
ಕಾ		ಗಂ	ಡು	ಗ	ಲಿ	ಕು	ಮಾ	ರ	ರಾ	ಮ

ವಿಜೇತರು: ಗೌರಿಶಂಕರ್ S/O ಚಂದ್ರಶೇಖರ್
ನಂ. 244, ಪಂಚಾಚಾರ್ಯ ಬಡಾವಣೆ,
ಬೆಳವಾಡಿ, ಮೈಸೂರು

ಹೊಂಬಾಳೆ ಫಿಲಂಸ್ ಬಘೀರನಿಗೆ ಚಾಲನೆ



ಕೆಜಿಎಫ್ 2 ನಂಥ ಬಿಗ್ ಹಿಟ್ ಚಿತ್ರ ನಿರ್ಮಿಸಿರುವ ಹೊಂಬಾಳೆ ಫಿಲಂಸ್ ವಿಜಯ್ ಕಿರಗಂದೂರ್ ನಿರ್ಮಾಣದ "ಬಘೀರ" ಚಿತ್ರದ ಮುಹೂರ್ತ ಇತ್ತೀಚೆಗೆ ನಡೆಯಿತು. ಡಾ॥ಸೂರಿ ಅವರ ನಿರ್ದೇಶನದ ಈ ಚಿತ್ರದಲ್ಲಿ, ಶ್ರೀಮುರಳಿ ನಾಯಕರಾಗಿ ಅಭಿನಯಿಸುತ್ತಿದ್ದಾರೆ. ಚಿತ್ರದ ಮೊದಲ ದೃಶ್ಯಕ್ಕೆ ನಿರ್ಮಾಪಕ ವಿಜಯ್ ಕಿರಗಂದೂರ್ ಅವರ ಸಹೋದರ ಮಂಜುನಾಥ್ ಆರಂಭ ಫಲಕ ತೋರಿಸಿದರು. ಶೀಘ್ರದಲ್ಲೇ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ. ಪ್ರಶಾಂತ್ ನೀಲ್ ಈ ಚಿತ್ರಕ್ಕೆ ಕಥೆ ಬರೆದಿದ್ದು, ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಎ ಜೆ ಶೆಟ್ಟಿ ಛಾಯಾಗ್ರಹಣ ಹಾಗೂ ಶಿವಕುಮಾರ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದ್ದು, ರಂಗಾಯಣ ರಘು, ಅಚ್ಯುತಕುಮಾರ್ ಇತರರು ಪ್ರಮುಖ ತಾರಾಬಳಗದಲ್ಲಿದ್ದಾರೆ.

ಈ ವಾರ ತೆರೆಗೆ ಕಿರಿಕ್ ಶಂಕರ್

ಮುಕುಂದ ಮುರಾರಿ ಖ್ಯಾತಿಯ ಎಂ.ಎನ್. ಕುಮಾರ್ ಅವರ ನಿರ್ಮಾಣದ ಲೂಸ್ ಮಾದ ಯೋಗಿ ಅಭಿನಯದ 'ಕಿರಿಕ್‌ಶಂಕರ್' ಈವಾರ ತೆರೆ ಕಾಣುತ್ತಿದೆ. ಚಿತ್ರದ ಟ್ರೇಲರ್‌ನ್ನು ಕಬ್ಜ ನಿರ್ದೇಶಕ ಆರ್. ಚಂದ್ರು ಬಿಡುಗಡೆ ಗೊಳಿಸಿ ಮಾತನಾಡಿ, ನಾನು ತಾಜ್‌ಮಹಲ್ ಚಿತ್ರ ಮಾಡಿದಾಗಿನಿಂದಲೂ ಕುಮಾರ್ ಪ್ರೋತ್ಸಾಹ ನೀಡುತ್ತಿದ್ದಾರೆ. ಅವರು ಈಗಲೇ ಸಿನಿಮಾ ಮಾಡಿಕೊಡು ಅಂದರೂ, ನಾನು ಸಿದ್ಧ. ಕಿರಿಕ್‌ಶಂಕರ್ ಚಿತ್ರದ ಟ್ರೈಲರ್ ಪ್ರಾಮಿಸಿಂಗ್ ಆಗಿದೆ. ಚಿತ್ರ ಜನರ ಮನ ಗೆಲ್ಲಲಿ ಎಂದು ಹಾರೈಸಿದರು.



ನಿರ್ದೇಶಕ ಆರ್. ಅನಂತರಾಜು ಮಾತನಾಡುತ್ತ ಒಳ್ಳೆಯ ಮನಸ್ಸುಗಳು ಸೇರಿ ಮಾಡುವ ಕೆಲಸ ಯಾವಾಗಲೂ ಒಳ್ಳೆಯದೇ ಆಗುತ್ತದೆ. ನಾಯಕ ಶಂಕರ್ ತಂದೆ, ತಾಯಿಯನ್ನು ಕಳೆದುಕೊಂಡು ತಂಗಿಯರನ್ನು ನೋಡಿಕೊಳ್ಳುವ ಜವಬ್ದಾರಿ ಹೊತ್ತಿರುವ ಹುಡುಗ. ಎಲ್ಲರ ಜೊತೆ ಯಾವಾಗಲೂ ಕಿರಿಕ್ ಮಾಡಿಕೊಂಡೇ ಬರುವ ಶಂಕರ್, ತನ್ನ ವ್ಯಕ್ತಿತ್ವವನ್ನು ಹಾಗೇ ಬೆಳೆಸಿಕೊಂಡು ಬಂದಿರುತ್ತಾನೆ. ಅಂಥವನ ಜೀವನದಲ್ಲಿ ಹುಡುಗಿಯೊಬ್ಬಳು ಎಂಟ್ರಿ ಕೊಟ್ಟಾಗ, ಶಂಕರ್ ಜೀವನದಲ್ಲೇ ಒಂದು ಕಿರಿಕ್ ಉಂಟಾಗುತ್ತದೆ. ಅದು ಮುಂದೆ ತುಂಬಾ ಸೀರಿಯಸ್ ಹಂತಕ್ಕೆ ಹೋಗುತ್ತದೆ. ಮುಂದೆ ಶಂಕರ್ ಅದನ್ನೆಲ್ಲ ಯಾವ ರೀತಿ ಎದುರಿಸುತ್ತಾನೆ ಎನ್ನುವುದೇ ಈ ಚಿತ್ರದ ಒನ್‌ಲೈನ್ ಸ್ಟೋರಿ ಎಂದು ಹೇಳಿದರು.

ನಿರ್ಮಾಪಕ ಕುಮಾರ್ ಮಾತನಾಡುತ್ತ, ನಾನು ಕಳೆದ ಏಪ್ರಿಲ್‌ನಲ್ಲೇ ಚಿತ್ರವನ್ನು ಬಿಡುಗಡೆ ಮಾಡುವುದಾಗಿ ಹೇಳಿ ಸಿದ್ಧತೆ ಮಾಡಿಕೊಂಡಿದ್ದೆ. ಆದರೆ ಆ ಸಮಯದಲ್ಲಿ ತುಂಬಾ ಚಿತ್ರಗಳು ಬಿಡುಗಡೆಯಾಗಿದ್ದ ರಿಂದ ಮುಂದಕ್ಕೆ ಹೋಗಿ ಈಗ ರಿಲೀಸ್ ಮಾಡುತ್ತಿದ್ದೇವೆ, ಮೇ 27ರಂದು 150ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಕಿರಿಕ್‌ಶಂಕರ್ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದೇವೆ ಎಂದು ಹೇಳಿದರು.

ನಂತರ ನಾಯಕ ಲೂಸ್‌ಮಾದ ಯೋಗಿ ಮಾತನಾಡುತ್ತ ನಾನು ಅಣ್ಣಾವ್ರ ಬ್ಯಾನರ್ ಬಿಟ್ಟರೆ, ಬೇರೆ ದೊಡ್ಡ ಬ್ಯಾನರ್‌ನಲ್ಲಿ ಕೆಲಸ ಮಾಡಿರುವುದು ಅಂದ್ರೆ ಇವರ ಜೊತೆಗೇ. ನಿರ್ದೇಶಕರು ಸಹ ಸಾಕಷ್ಟು ಹಿಟ್ ಚಿತ್ರಗಳನ್ನು ನೀಡಿದವರು. ಚಿತ್ರದಲ್ಲಿ ಈಗಿನ ಯುವಕರಿಗೆ ಉತ್ತಮವಾದ ಸಂದೇಶವಿದೆ ಎಂದರು.

ಯುವನಟಿ ಅದ್ವಿಕ ಇದೇ ಮೊದಲ ಬಾರಿಗೆ ನಾಯಕಿಯಾಗಿ ಬಣ್ಣಹಚ್ಚಿದ್ದು, ತನ್ನ ಪಾತ್ರದ ಕುರಿತಂತೆ ಸಂಕ್ಷಿಪ್ತವಾಗಿ ಹೇಳಿ, ಚಿತ್ರೀಕರಣದ ಅನುಭವಗಳನ್ನು ಹಂಚಿ ಕೊಂಡರು. ನಟ ರಿತೇಶ್, ಸಂಕಲನಕಾರ ನಾಗೇಂದ್ರ ಅರಸ್, ಸಂಗೀತ ನಿರ್ದೇಶಕ ವೀರಸಮರ್ಥ, ಛಾಯಾಗ್ರಾಹಕ ಜೆ.ಜಿ.ಕೃಷ್ಣ ಹಾಗೂ ಚಿತ್ರದ ಕಾರ್ಯಕಾರಿ ನಿರ್ಮಾಪಕ ಯೋಗೀಶ್ ಹುಣಸೂರು ಅವರು ಕಿರಿಕ್‌ಶಂಕರ್ ಚಿತ್ರದ ವಿಶೇಷತೆಗಳ ಕುರಿತಂತೆ ಮಾತನಾಡಿದರು.

ಧಾರಾಕಾರ ಮಳೆ: ಕೆ.ಆರ್.ಪೇಟೆ ಬಸ್ ನಿಲ್ದಾಣ ಜಲಾವೃತ

ಪ್ರಯಾಣಿಕರ ಪರದಾಟ, ಲಕ್ಷಾಂತರ ರೂ. ನಷ್ಟ

ಕೆ.ಆರ್.ಪೇಟೆ, ಮೇ 26(ಶ್ರೀನಿವಾಸ್)– ಧಾರಾಕಾರ ಮಳೆಗೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಜಲಾವೃತವಾಗಿ ಪ್ರಯಾಣಿಕರು ಪರದಾಡಿದ ಘಟನೆ ಗುರುವಾರ ಸಂಜೆ ನಡೆದಿದೆ.

ಸಂಜೆ 4.30ಕ್ಕೆ ಆರಂಭವಾದ ಮಳೆ ಸುಮಾರು 6 ಗಂಟೆವರೆಗೂ ಧಾರಾಕಾರವಾಗಿ ಸುರಿದಿದೆ. ಈ ವೇಳೆ ತಗ್ಗು ಪ್ರದೇಶದಲ್ಲಿ ನಿರ್ಮಾಣವಾಗಿರುವ ಇಲ್ಲಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ನೀರು ನುಗ್ಗಿದ್ದು, ಕೆರೆಯಂತಾಗಿ ಪ್ರಯಾಣಿಕರು ಪರದಾಡುವಂತಾಯಿತು. ಅಲ್ಲದೇ ನಿಲ್ದಾಣದೊಳಗಿರುವ ಬೇಕರಿ, ಹೋಟೆಲ್, ಜನರಲ್ ಸ್ಟೋರ್‌ಗೆ ಮಳೆ ನೀರು ನುಗ್ಗಿ ಬಿಸ್ಕತ್ ಪೊಟ್ಟಣ, ಸಿಹಿ ತಿಂಡಿಗಳು, ಬೀಡಿ, ಸಿಗರೇಟ್ ಪೊಟ್ಟಣ, ಚಾಕೋಲೆಟ್, ಹೋಟೆಲ್‌ನಲ್ಲಿ ದಾಸ್ತಾನು ಮಾಡಿದ್ದ ದಿನಸಿ ಪದಾರ್ಥಗಳು, ದಿನಬಳಕೆಯ ವಸ್ತುಗಳು ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಅಲ್ಲದೇ ನಿಯಂತ್ರಕರ ಕೊಠಡಿ(ಟಿಸಿ)ಗೆ ನೀರು ನುಗ್ಗಿ ದಾಖಲೆ ಪತ್ರಗಳು ನಾಶವಾಗಿವೆ ಎನ್ನಲಾಗಿದೆ. ವಿವಿಧ ಊರುಗಳಿಗೆ ಹೋಗಲು ಬಸ್ ನಿಲ್ದಾಣದಲ್ಲಿ ತಮ್ಮ ಲಗೇಜುಗಳೊಂದಿಗೆ ಬಸ್‌ಗಾಗಿ ಕಾಯುತ್ತಿದ್ದ ಪ್ರಯಾಣಿಕರು ಬಸ್ ನಿಲ್ದಾಣದಲ್ಲಿ ನೀರು ಶೇಖರಣೆಯಾಗುತ್ತಿರುವುದನ್ನು ಕಂಡು ಹೊರ ಬರಲು ಹರಸಾಹಸಪಟ್ಟರು. ಇನ್ನು ಬೈಕ್ ಸ್ಟಾಂಡ್‌ನಲ್ಲೂ ಮಳೆ ನೀರು ತುಂಬಿಕೊಂಡು ನೂರಾರು ಬೈಕ್‌ಗಳು ನೀರಿನಲ್ಲಿ ಮುಳುಗಿದ್ದವು.



ಸುಸಜ್ಜಿತ ಬಸ್ ನಿಲ್ದಾಣಕ್ಕೆ ಒತ್ತಾಯ: ಚನ್ನಪ್ಪನ ಕಟ್ಟೆ ಎತ್ತರ ಮಾಡದೇ ಕಟ್ಟೆಯೊಳಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ನಿರ್ಮಿಸಿರುವ ಕಾರಣ ಭಾರೀ ಮಳೆಯಾದ ಸಂದರ್ಭ ಪದೇ ಪದೆ ಬಸ್ ನಿಲ್ದಾಣ ಜಲಾವೃತವಾಗುತ್ತಿದೆ. ಇದರಿಂದ ಪ್ರಯಾಣಿಕರು ತೊಂದರೆ ಅನುಭವಿಸುತ್ತಿದ್ದಾರೆ. ಕಳೆದ ವರ್ಷ ಮಳೆಯಿಂದಾಗಿ ಬಸ್ ನಿಲ್ದಾಣ ಜಲಾವೃತವಾಗಿ 22 ಮಂದಿ ಪ್ರಯಾಣಿಕರು ಅಪಾಯಕ್ಕೆ ಸಿಲುಕಿದ್ದರು. ಆಗ ನಾಡದೋಣಿ ಮೂಲಕ ತಾಲೂಕು ಆಡಳಿತ ಅಗ್ನಿಶಾಮಕ, ಪೊಲೀಸ್ ಇಲಾಖೆ ಸಹಕಾರದೊಂದಿಗೆ ಪ್ರಯಾಣಿಕರನ್ನು ಪಾರು ಮಾಡಿತ್ತು. ಈಗ ಮತ್ತೆ ಅದೇ ರೀತಿಯ ತೊಂದರೆಯಾಗಿದೆ. ಹಾಗಾಗಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಚನ್ನಪ್ಪನ ಕಟ್ಟೆಯಲ್ಲಿ ನಿರ್ಮಿಸಿರುವ ಬಸ್ ನಿಲ್ದಾಣವನ್ನು ರಸ್ತೆ ಮಟ್ಟಕ್ಕೆ ಎತ್ತರಿಸಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಹಿಂದೂಪರ ಹೋರಾಟಗಾರ ಪುನೀತ್ ಕೆರೆಹಳ್ಳಿ, ರೈತ ಮಳವಳ್ಳಿ ಕುಮಾರ್ ಮಾರಾಮಾರಿ

ದೂರು–ಪ್ರತಿದೂರು ದಾಖಲು

ಮಳವಳ್ಳಿ, ಮೇ 26– ಹಿಂದೂಪರ ಹೋರಾಟಗಾರ ಪುನೀತ್ ಕುಮಾರ್ ಅಲಿಯಾಸ್ ಪುನೀತ್ ಕೆರೆಹಳ್ಳಿ ಮತ್ತು ತಾಲೂಕಿನ ಮೊಳ್ಳೆದೊಡ್ಡಿ ರೈತ ಕುಮಾರ್ ಅಲಿಯಾಸ್ ಮಳವಳ್ಳಿ ಕುಮಾರ್ ಎಂಬುವರ ನಡುವೆ ಮಳವಳ್ಳಿ ಪಟ್ಟಣದಲ್ಲಿ ಮಾರಾಮಾರಿ ನಡೆದಿದ್ದು, ದೂರು ಹಾಗೂ ಪ್ರತಿ ದೂರು ದಾಖಲಾಗಿದೆ.



ಪುನೀತ್ ಕೆರೆಹಳ್ಳಿ

ಮಳವಳ್ಳಿ ಕುಮಾರ್ ತನ್ನ ವಿರುದ್ಧ ಫೇಸ್‌ಬುಕ್‌ನಲ್ಲಿ ಸುಳ್ಳು ಸುದ್ದಿ ಹರಡಿದ ಕಾರಣದಿಂದ ಆತನ ಮೇಲೆ ಮಳವಳ್ಳಿ ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಲು ನಾನು ಮೇ 23 ರಂದು ರಾತ್ರಿ 8 ಗಂಟೆ ಸುಮಾರಿಗೆ ಮಳವಳ್ಳಿಗೆ ಬಂದಿದ್ದು, ದೂರು ನೀಡಿದ ನಂತರ ವೈಭವ್ ಹೋಟೆಲ್‌ಗೆ ಊಟಕ್ಕಾಗಿ ಹೋಗಲು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂದೆ ನಡೆದುಕೊಂಡು ಹೋಗುತ್ತಿರುವಾಗ ಬುಲೆಟ್ ಬೈಕ್‌ನಲ್ಲಿ ಬಂದ ಕುಮಾರ ನನ್ನ ಮೇಲೆ ದೂರು ನೀಡುತ್ತೀಯಾ ಎಂದು ಪ್ರಶ್ನಿಸಿದ್ದಲ್ಲದೇ ಅದು ಹೇಗೆ ಮಳವಳ್ಳಿ ದಾಟಿ ಜೀವಂತವಾಗಿ ಹೋಗುತ್ತೀಯಾ ನೋಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿ ಬೈಕ್‌ನ ಕೀ ಇಂದ ಚುಚ್ಚಲು ಮುಂದಾಗಿದ್ದಾನೆ ಎಂದು ಪುನೀತ್ ಕೆರೆಹಳ್ಳಿ ಮೇ 23 ರಂದು ರಾತ್ರಿ 11.45ರಲ್ಲಿ ಮಳವಳ್ಳಿ ಪಟ್ಟಣ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಪುನೀತ್ ಕೆರೆಹಳ್ಳಿ ಮೇ 23ರಂದು ರಾತ್ರಿ ಸುಮಾರು 8.30ರಲ್ಲಿ ನನಗೆ ಕರೆ ಮಾಡಿ ಲೊಕೇಷನ್ ಕಳುಹಿಸು ಎಂದು ಕೇಳಿದ್ದಾನೆ. ಆಗ ನಾನು ನನ್ನ ಗ್ರಾಮದಲ್ಲಿದ್ದ ಕಾರಣ ಅಲ್ಲಿನ ಲೊಕೇಷನ್ ಕಳುಹಿಸಿದ್ದೇನೆ. ಮತ್ತೆ ಕರೆ ಮಾಡಿದ ಆತ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಇರುವುದಾಗಿ ತಿಳಿಸಿ ಅಲ್ಲಿಗೆ ಬಾ ಏನೇ ಇದ್ದರೂ ಮಾತುಕತೆಯಲ್ಲಿ ಬಗೆಹರಿಸಿಕೊಳ್ಳೋಣ ಎಂದು ಕರೆದ. ತಾನೂ ಅಲ್ಲಿಗೆ ಹೋದಾಗ ಆತ ನಿನ್ನನ್ನು ಮುಗಿಸಲೆಂದೇ ಬಂದಿದ್ದೇನೆ ಎಂದು ಕೆನ್ನೆಗೆ ಹೊಡೆದು ನನ್ನನ್ನು ಕೆಳಗೆ ಬೀಳಿಸಿದ್ದಾನೆ. ಆ ಸಮಯದಲ್ಲಿ ಆ ಮಾರ್ಗವಾಗಿ ಬಂದ ಮೊಳ್ಳೆದೊಡ್ಡಿ ಗ್ರಾಮದ ಲಿಂಗರಾಜು, ಸುನೀಲ್ ನನ್ನನ್ನು ರಕ್ಷಿಸಿ ಗ್ರಾಮಕ್ಕೆ ಕಳುಹಿಸಿದರು. ಈ ಸಮಯದಲ್ಲಿ ಪುನೀತ್ ಕೆರೆಹಳ್ಳಿ ಜೊತೆ ಸುಮಾರು 15 ಮಂದಿ ಇದ್ದರು ಎಂದು ಕುಮಾರ್ ಮೇ 25ರಂದು ದೂರು ಸಲ್ಲಿಸಿದ್ದಾರೆ. ದೂರು ಮತ್ತು ಪ್ರತಿದೂರನ್ನು ದಾಖಲಿಸಿಕೊಂಡಿರುವ ಮಳವಳ್ಳಿ ಪಟ್ಟಣ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನೀತಿ ಸಂಹಿತೆ ಉಲ್ಲಂಘಿಸಿದ ಮಾಜಿ ಸಿಎಂ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯ



ಮಂಡ್ಯ, ಮೇ 26(ಮೋಹನ್‌ರಾಜ್)– ದಕ್ಷಿಣ ಪದವೀಧರ ಚುನಾವಣೆ ಸಂಬಂಧ ಕಳೆದ ಮಂಗಳವಾರ ನಗರದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಸಮಾವೇಶಕ್ಕೆ ಸರ್ಕಾರಿ ವಾಹನದಲ್ಲಿ ಆಗಮಿಸಿ ಪ್ರಚಾರ ಸಭೆ ಮುಗಿಸಿ ಹೋದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಪದವೀಧರ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ನೀತಿ ಸಂಹಿತೆ ಜಾರಿ ಮಾಡಿದ್ದು, ಯಾವ ರಾಜಕಾರಣಿಗಳು ಚುನಾವಣಾ ಪ್ರಚಾರಕ್ಕೆ ಸರ್ಕಾರಿ ವಾಹನ ಬಳಸುವಂತಿಲ್ಲ. ಆದರೆ ವಿಪಕ್ಷ ನಾಯಕರಾಗಿರುವ ಸಿದ್ದರಾಮಯ್ಯ ಸರ್ಕಾರಿ ವಾಹನದಲ್ಲಿ ಬಂದಿದ್ದು, ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ. ಇವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿದರು. ಈ ಬಗ್ಗೆ ಡಿಸಿ ಅವರಿಗೆ ಮನವಿ ಸಲ್ಲಿಸಿದ್ದು, ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದರು.

ಇನ್ನು ಸಚಿವ ಅಶ್ವತ್ ನಾರಾಯಣ್ ಮಂಡ್ಯಕ್ಕೆ ಬಂದಾಗ ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಸಿಇಓ ದೂರು ದಾಖಲಿಸಿದ್ದು, ಕಾಲೇಜುಗಳಲ್ಲಿ ಕೇವಲ ಮತ ಪ್ರಚಾರ ಮಾಡಿದ್ದೇವೆ. ಪದವೀಧರರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಕಾಲೇಜುಗಳಿಗೆ ತೆರಳಿದ್ದೇವೆ. ಮಾಂಡವ್ಯ ಕಾಲೇಜಿನಲ್ಲಿ ಯಾವುದೋ ಕಾರ್ಯಕ್ರಮ ನಡೆಯುತ್ತಿದ್ದ ಸಂದರ್ಭ ಸಚಿವರನ್ನು ವೇದಿಕೆಗೆ ಆಹ್ವಾನಿಸಿದಾಗ ವೇದಿಕೆಯಲ್ಲಿ ಪ್ರಚಾರ ಮಾಡಿದ್ದು ಕಾಕತಾಳೀಯವಷ್ಟೇ. ಅಲ್ಲಿ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆಯಾಗಿಲ್ಲ ಎಂದು ಸಚಿವರ ನಡೆ ಸಮರ್ಥಿಸಿಕೊಂಡರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಖಂಡರಾದ ಸುರೇಶ್, ನಾಗಾನಂದ, ಎಲೆಚಾಕನಹಳ್ಳಿ ಬಸವರಾಜು, ಹರ್ಷ ಇದ್ದರು.

ಕಬ್ಬಿಗೆ ಪ್ರೋತ್ಸಾಹ ಧನಕ್ಕೆ ಒತ್ತಾಯಿಸಿ ಮನವಿ

ಮದ್ದೂರು, ಮೇ 26– ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ದರದ ಜೊತೆಗೆ 500 ರೂ. ಪ್ರೋತ್ಸಾಹ ಧನ ನೀಡಿ ಕಬ್ಬು ಬೆಳೆಗಾರರಿಗೆ ಅನುಕೂಲ ಕಲ್ಪಿಸಬೇಕೆಂದು ಒತ್ತಾಯಿಸಿ ರೈತ ಸಂಘದಿಂದ ತಾಲೂಕಿನ ಕೊಪ್ಪ ಎನ್‌ಎಸ್‌ಎಲ್ ಸಕ್ಕರೆ ಕಾರ್ಖಾನೆ ಉಪಾಧ್ಯಕ್ಷ ಪಿಜಿಕೆ ದತ್ತ ಅವರಿಗೆ ಗುರುವಾರ ಮನವಿ ಸಲ್ಲಿಸಲಾಯಿತು.

ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಜಿ.ಎ.ಶಂಕರ್ ಮಾತನಾಡಿ, ಕಬ್ಬಿಗೆ ಎಫ್‌ಆರ್‌ಪಿ ದರ ಬಿಟ್ಟು ಬೇರೆ ಯಾವುದೇ ಪ್ರೋತ್ಸಾಹ ಧನ ಸಿಗದೆ ಕಬ್ಬು ಬೆಳೆಗಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿ ಟನ್ ಕಬ್ಬಿಗೆ 500 ರೂ. ಪ್ರೋತ್ಸಾಹ ಧನ ನೀಡಬೇಕು ಎಂದು ಒತ್ತಾಯಿಸಿದರು.

ಕಬ್ಬಿನ ಉಪ ಉತ್ಪನ್ನಗಳ ಲಾಭಾಂಶದಲ್ಲಿ ಕಬ್ಬು ಬೆಳೆಗಾರರಿಗೆ ಶೇ.70 ರಷ್ಟನ್ನು ಪಾವತಿಸುವಂತೆ ಗಂಗರಾಜನ್ ವರದಿ ಹೇಳಿದ್ದರೂ, ಕಾರ್ಖಾನೆ ಆಡಳಿತ ಮಂಡಳಿ ಈ ಸಂಬಂಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ದರದ ಜತೆಗೆ 500 ರೂ. ಪ್ರೋತ್ಸಾಹ ಧನ ಘೋಷಣೆ ಮಾಡಿ ಕಾರ್ಖಾನೆ ಆರಂಭಿಸಬೇಕು.



ಇಲ್ಲದಿದ್ದರೆ ಕಾರ್ಖಾನೆ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಕಾರ್ಖಾನೆ ಉಪಾಧ್ಯಕ್ಷ ದತ್ತ, ಕಬ್ಬಿನ ಬೆಲೆ ನಿಗದಿ ಮಾಡುವ ಸಂಬಂಧ ಕಬ್ಬು ಬೆಳೆಗಾರರ ಹಾಗೂ ರೈತ ಸಂಘದ ಸಭೆ ಕರೆದು ಅಂತಿಮ ತೀರ್ಮಾನ ಕೈಗೊಂಡ ನಂತರ ಕಾರ್ಖಾನೆ ಆರಂಭಿಸಲಾಗುವುದು ಎಂದರು.

ಈ ವೇಳೆ ರೈತ ಸಂಘದ ಮುಖಂಡರಾದ ಮದರಾಜು, ಲಿಂಗಪ್ಪಾಜಿ, ಅಶೋಕ್, ರಾಮಣ್ಣ, ರಾಮಣ್ಣ, ಶಿವಕುಮಾರ್, ಸಿದ್ದೇಗೌಡ ಇದ್ದರು.

ಚರ್ಚ್‌ನಲ್ಲಿ ಮಗು ಬಿಟ್ಟು ಹೋದ ಅಪರಿಚಿತರು

ಮಂಡ್ಯ, ಮೇ 26(ಮೋಹನ್ ರಾಜ್)– ಅಪರಿಚಿತರು ಸುಮಾರು 1 ವರ್ಷದ ಗಂಡು ಮಗುವನ್ನು ನಗರದ ಫ್ಯಾಕ್ಟರಿ ಸರ್ಕಲ್ ಬಳಿಯ ಚರ್ಚ್‌ನಲ್ಲಿ ಬಿಟ್ಟು ಹೋಗಿದ್ದಾರೆ.



ಗುರುವಾರ ಬೆಳಗ್ಗೆ ಚರ್ಚ್‌ಗೆ ಮಗು ಕರೆ ತಂದಿದ್ದ ಇಬ್ಬರು ಸ್ವಲ್ಪ ಹೊತ್ತು ಅಲ್ಲೇ ಕಾಲ ಕಳೆದು ಬಳಿಕ ಚರ್ಚ್‌ನಲ್ಲೇ ಮಗು ಬಿಟ್ಟು ಪರಾರಿಯಾಗಿದ್ದಾರೆ. ಸುಮಾರು ಹೊತ್ತಿನಿಂದ ಇದ್ದ ಮಗು ಅಳಲು ಶುರು ಮಾಡಿದಾಗ ಚರ್ಚ್ ಸಿಬ್ಬಂದಿ ಪೋಷಕರನ್ನು ಹುಡುಕಿಸಿದ್ದು, ಯಾರು ಸಿಗದೇ ಇದ್ದರಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಚರ್ಚ್ ಸಿಬ್ಬಂದಿ ಮಾಹಿತಿ ನೀಡಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಮಗುವನ್ನು ವಶಕ್ಕೆ ಪಡೆದರು. ಬಳಿಕ ಅನಾರೋಗ್ಯದಿಂದ ಮಗು ಬಳಲುತ್ತಿರುವುದನ್ನು ಪತ್ತೆ ಹಚ್ಚಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದಾರೆ.

ಮೇಲ್ನೋಟಕ್ಕೆ ಮಕ್ಕಳ ಪೋಷಕರೇ ಕಾಯಿಲೆ ಇರುವ ಮಗುವನ್ನು ಸಾಕಲಾಗದೇ ಹೀಗೆ ಬಿಟ್ಟು ಹೋಗಿದ್ದಾರೆಂದು ಅಧಿಕಾರಿಗಳು ಶಂಕಿಸಿದ್ದಾರೆ. ಈ ಸಂಬಂಧ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಬಲ್ಲೇನಹಳ್ಳಿ ಡೈರಿಗೆ ಸ್ವಾಮೀಗೌಡ ಅಧ್ಯಕ್ಷ

ಕೆ.ಆರ್.ಪೇಟೆ, ಮೇ 26(ಶ್ರೀನಿವಾಸ್)– ತಾಲೂಕಿನ ಬಲ್ಲೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಡುನಿಂಗಣ್ಣನ ಸ್ವಾಮೀಗೌಡ, ಉಪಾಧ್ಯಕ್ಷರಾಗಿ ಯಶೋಧಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಬಿ.ವಿ.ಮಾಧವ ಹಾಗೂ ಉಪಾಧ್ಯಕ್ಷೆ ಧನಲಕ್ಷ್ಮಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಸ್ವಾಮೀಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಯಶೋಧಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಶೋಭಾ, ಸಹ ಚುನಾವಣಾಧಿಕಾರಿ ಸಂಘದ ಕಾರ್ಯದರ್ಶಿ ಬಿ.ಕೆ.ಕುಮಾರ್ ಘೋಷಿಸಿದರು.

ನೂತನ ಅಧ್ಯಕ್ಷ ಆಡುನಿಂಗಣ್ಣ ಸ್ವಾಮೀಗೌಡ ಮತ್ತು ಉಪಾಧ್ಯಕ್ಷೆ ಯಶೋಧಮ್ಮ ಅವರನ್ನು ನಿರ್ದೇಶಕರಾದ ಕೃಷ್ಣೇಗೌಡ, ಪುಟ್ಟೇಗೌಡ, ಬಿ.ಎಸ್.ಯೋಗೇಶ್, ಸೋಮಶೇಖರ್, ದೇವರಾಜು, ಮಂಗಳಮ್ಮ ಮುಖಂಡರಾದ ಕೆ.ಬಿ.ಮಹೇಶ್‌ಕುಮಾರ್, ಬಿ.ಟಿ.ವೆಂಕಟೇಶ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ರೂಪಾ, ಬಿ.ಟಿ.ಪ್ರಕಾಶ್, ಬಿ.ಸಿ.ರಾಮಕೃಷ್ಣ, ಪುಟ್ಟಸ್ವಾಮೀಗೌಡ, ಬಿ.ಎನ್.ಪುಟ್ಟರಾಜು, ಡಿ.ವಿ.ಕುಮಾರ್, ಅಶೋಕ್, ಸೋಮು, ನಾಗರಾಜು, ನವೀನ್‌ಕುಮಾರ್, ಪಟೇಲ್ ಸ್ವಾಮಣ್ಣ, ಯೋಗೇಶ್, ಜಯರಾಮ್, ನಂಜಪ್ಪರ ಶಿವಣ್ಣ, ಟೈಲರ್ ಕುಮಾರ್, ಪ್ರಥಮ ದರ್ಜೆ ವಿದ್ಯುತ್ ಗುತ್ತಿಗೆದಾರ ರಾಮು, ಎಸ್.ಎಸ್.ಕಾರ್ತಿಕ್ ಮತ್ತಿತರರು ಅಭಿನಂದಿಸಿದರು.



ಐಪಿಎಲ್: ಇಂದು 2ನೇ ಕ್ವಾಲಿಫೈಯರ್ ಪಂದ್ಯ

ಅಹಮದಾಬಾದ್, ಮೇ 26– ಇಲ್ಲಿನ ನರೇಂದ್ರ ಮೋದಿ ಮೈದಾನದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು, ರಾಜಸ್ಥಾನ್ ರಾಯಲ್ಸ್ ನಡುವೆ 2ನೇ ಕ್ವಾಲಿಫೈಯರ್ ಪಂದ್ಯ ಶುಕ್ರವಾರ (ಮೇ 27) ನಡೆಯಲಿದ್ದು, ಪಂದ್ಯ ರಾತ್ರಿ 7.30ಕ್ಕೆ ಆರಂಭವಾಗಲಿದೆ.



ಪ್ರಸಕ್ತ ಸಾಲಿನ ಲೀಗ್ ಹಂತದಲ್ಲಿ ಹಲವು ಏಳು ಬೀಳುಗಳ ನಡುವೆ ಪ್ಲೇ ಆಫ್ ಪ್ರವೇಶಿಸಿರುವ ಉಭಯ ತಂಡಗಳು ಫೈನಲ್ ಪ್ರವೇಶಕ್ಕೆ ಕಾದಾಟ ನಡೆಸಲಿವೆ. ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಸೋಲು ಅನುಭವಿಸಿರುವ ಆರ್‌ಆರ್ ನಾಳಿನ ಪಂದ್ಯ ದಲ್ಲಿ ಆರ್‌ಸಿಬಿ ವಿರುದ್ಧ ಗೆದ್ದು ಫೈನಲ್ ಪ್ರವೇಶಿಸುವ ಇರಾದೆಯಲ್ಲಿದೆ. ಮತ್ತೊಂದೆಡೆ ಭರ್ಜರಿ ಪ್ರದರ್ಶನ ನೀಡುತ್ತಿರುವ ಆರ್‌ಸಿಬಿ ಎಲಿಮನೇಟರ್ ಪಂದ್ಯದಲ್ಲಿ ಬಲಿಷ್ಠ ಲಕ್ನೋ ತಂಡವನ್ನು ಸೋಲಿಸಿದ್ದು, ನಾಳಿನ ಪಂದ್ಯ ಗೆದ್ದು ಫೈನಲ್ ಪ್ರವೇಶಿಸಿ ಚೊಚ್ಚಲ ಟ್ರೋಫಿ ಗೆಲ್ಲುವ ತವಕದಲ್ಲಿದೆ. ಒಟ್ಟಾರೆ ನಾಳಿನ ಪಂದ್ಯ ರೋಚಕತೆಯಿಂದ ಕೂಡಿರಲಿದ್ದು, ಕ್ರಿಕೆಟ್ ಅಭಿಮಾನಿಗಳಿಗೆ ಭರಪೂರ ಮನರಂಜನೆ ಸಿಗಲಿದೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಮೇ 26– ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಮೇ 28ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ಸುಭಾಷ್ ನಗರ, ಅಶೋಕ ನಗರ, ವಿ.ವಿ.ರೋಡ್, ಹೊಸಹಳ್ಳಿ, ವಿನಾಯಕ ಬಡಾವಣೆ, ನೂರಡಿ ರಸ್ತೆ, ನೆಹರು ನಗರ, ಹೊಸಹಳ್ಳಿ, ದ್ವಾರಕ ನಗರ, ಗಾಂಧಿನಗರ, NGO'S layout, , ಶ್ರೀರಾಮ ನಗರ, ಕಾವೇರಿ ನಗರ 1 & 2ನೇ ಹಂತ, ಚಂದ್ರ ದರ್ಶನ, ಚಾಮುಂಡೇಶ್ವರಿನಗರ, ಶಂಕರನಗರ, ಇಂಡುವಾಳು, ಕಿರಗಂದೂರು, ಕಲ್ಲಹಳ್ಳಿ, ಕ್ಯಾತುಂಗೆರೆ, ಕಾರಸವಾಡಿ, ಮಂಗಲ, ಹನಿಯಂಬಾಡಿ, ಚೀರನಹಳ್ಳಿ, ಹೆಬ್ಬಕವಾಡಿ, ಕೊತ್ತತ್ತಿ, ಮೊತ್ತಹಳ್ಳಿ, ಬೇವಿನಹಳ್ಳಿ, ಹುಲ್ಲುಕೆರೆ, ಎ.ಹುಲಿಕೆರೆ, ಬಿ.ಹುಲಿಕೆರೆ. ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹೈಕಮಾಂಡ್ ಸೂಚಿಸಿದರೆ ನಾಗಮಂಗಲದಿಂದ ಸ್ಪರ್ಧೆ



ನಾಗಮಂಗಲ, ಮೇ 26(ಮೋಹನ್ ರಾಜ್)– ಹೈಕಮಾಂಡ್ ಸೂಚಿಸಿದರೆ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ನಾಗಮಂಗಲ ಕ್ಷೇತ್ರದಿಂದ ಸ್ಪರ್ಧಿಸುತ್ತೇನೆ ಎಂದು ಬಿಜೆಪಿ ಮುಖಂಡರಾದ ಲಕ್ಷ್ಮಿ ಅಶ್ವಿನ್‌ಗೌಡ ತಿಳಿಸಿದರು. ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈಗ ಜೆಡಿಎಸ್ ಬಗ್ಗೆ ಮಾತನಾಡುವುದಕ್ಕಿಂತ ನಾನಿರುವ ಪಕ್ಷಕ್ಕೆ ನನ್ನ ಕೊಡುಗೆ ನೀಡಲು ಗಮನ ಹರಿಸಿದ್ದೇನೆ. ಬಿಜೆಪಿಗೆ ಸಾಮಾನ್ಯ ಕಾರ್ಯಕರ್ತೆಯಾಗಿ ಸೇರಿದ್ದು, ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಸಂಘಟನೆಗೆ ಹೆಚ್ಚು ತೊಡಗಿಸಿಕೊಂಡಿದ್ದೇನೆ. ಸದ್ಯಕ್ಕೆ ನಾನು ಯಾವುದೇ ಕ್ಷೇತ್ರ ಆಯ್ಕೆ ಮಾಡಿಕೊಂಡಿಲ್ಲ. ಪಕ್ಷ ನೀಡಿರುವ ಜವಾಬ್ದಾರಿ ನಿಭಾಯಿಸುತ್ತಿದ್ದೇನೆ ಎಂದರು.

ಬಿಜೆಪಿ ಸೇರ್ಪಡೆಗೊಳ್ಳುವಾಗ ಯಾವುದೇ ಆಸೆಯಿಂದ ಪಕ್ಷ ಸೇರ್ಪಡೆಗೊಂಡಿಲ್ಲ. ಸಾಮಾನ್ಯ ಕಾರ್ಯಕರ್ತೆಯಾಗಿ ಪಕ್ಷ ನೀಡುವ ಜವಾಬ್ದಾರಿ ನಿಭಾಯಿಸುತ್ತೇನೆ. ಪಕ್ಷಕ್ಕೆ ನನ್ನ ಕೊಡುಗೆ ಏನು, ಅಭಿವೃದ್ಧಿ ಹೇಗೆ ಮಾಡಬೇಕು ಮತ್ತು ಜಿಲ್ಲೆಯಲ್ಲಿ ಪಕ್ಷವನ್ನು ಹೇಗೆ ಸಂಘಟಿಸಬೇಕು ಎಂಬುದನ್ನು ಅರಿತು ಕೆಲಸ ನಿರ್ವಹಿಸುತ್ತೇನೆ. ಬಿಜೆಪಿ ಪಕ್ಷಕ್ಕೆ ದುಡಿಯುವ ಪ್ರಾಮಾಣಿಕ ಕಾರ್ಯಕರ್ತರನ್ನು ಗುರುತಿಸುತ್ತದೆ ಎಂದರು.

ಜೆಡಿಎಸ್ ಅಧಿಕಾರಕ್ಕೆ ಬರುವುದು, ಹೆಚ್‌ಡಿಕೆ ಸಿಎಂ ಆಗುವುದು ಗ್ಯಾರಂಟಿ

ಒಂದನೇ ಪುಟದಿಂದ

ಆಗುತ್ತಾರೆಂದು ನಾನು ಹೇಳಿದ್ದೆ. 2013ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುತ್ತಾರೆಂದು ನಾನು ಹೇಳಿದ್ದೆ. ಅದು ನಿಜವೂ ಆಯಿತು. ಹಾಗಾಗಿ ಈಗ ಹೇಳುತ್ತಿದ್ದೇನೆ. ನಾನು ನುಡಿದಂತೆ ಆಗುತ್ತಿದೆ. ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿದ್ದು, ಹೆಚ್.ಡಿ.ಕುಮಾರಸ್ವಾಮಿ ಖಚಿತವಾಗಿ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಹೇಳಿದರು.

ಯಾವುದೇ ವಿಚಾರದ ಕುರಿತು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಣಯ ತೆಗೆದುಕೊಳ್ಳುವ ಶಕ್ತಿ ಜೆಡಿಎಸ್‌ನಲ್ಲಿದೆ. ಆದರೆ ಪ್ರಧಾನಿ ನರೇಂದ್ರ ಮೋದಿ ಅವರಿಗಾಗಲೀ, ಸೋನಿಯಾಗಾಂಧಿ ಅವರಿಗಾಗಲೀ ಆ ಶಕ್ತಿ ಇಲ್ಲ ಎಂದು ಹೇಳಿದರು.

ಸಂಸದ ಪ್ರತಾಪ್‌ಸಿಂಹ ಅವರಿಗೆ ಮೋದಿಯವರೇ ದೇವರಾದರೆ, ನಮಗೆ ದೇವೇಗೌಡರು ದೇವರು. ನಮ್ಮ ಮನೆ ದೇವರು. ದೇವೇಗೌಡರ ಸರ್ಕಾರದಲ್ಲಿ ನಾನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಕಾಂಗ್ರೆಸ್ ಅನ್ನು ನೋಡಿ ಬಂದಿದ್ದೇನೆ. ರಾಜ್ಯದಲ್ಲಿ ಯಾವ ಬೆಳೆ ಬೆಳೆಯುತ್ತಾರೆ. ಯಾವ ಕಡೆಗಳಲ್ಲಿ ಏನೇನು ಫಸಲು ತೆಗೆಯುತ್ತಾರೆ ಎಂಬುದು ಹೆಚ್.ಡಿ.ದೇವೇಗೌಡರಿಗೆ ಚೆನ್ನಾಗಿ ತಿಳಿದಿದೆ. ಇವೆಲ್ಲದರ ಬಗ್ಗೆ ನರೇಂದ್ರ ಮೋದಿಯವರಿಗೆ ಏನು ಗೊತ್ತಿದೆ ಎಂದು ಲೇವಡಿ ಮಾಡಿದರು.

ಭ್ರಷ್ಟಾಚಾರಕ್ಕೆ ಅವಕಾಶ ನೀಡುವುದಿಲ್ಲ ಎಂದು ಒಂದೆಡೆ ಮೋದಿ ಹೇಳುತ್ತಿದ್ದರೆ, ಅದೇ ಬಿಜೆಪಿ ಸರ್ಕಾರದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿಲ್ಲವೇ ಎಂದು ಬಿಜೆಪಿ ವಿರುದ್ಧ ಕಿಡಿಕಾರಿದರು. ಜೆಡಿಎಸ್ ಒಂದು ಕುಟುಂಬದ ಪಕ್ಷ ಇದ್ದಂತೆ. ಚಾಮರಾಜನಗರ ಜಿಲ್ಲೆಯವರಿಗೆ ನೋವಾದರೆ ಬೆಳಗಾವಿಯಲ್ಲಿ ಅನುಕಂಪ ತೋರಿಸುವ ಜನರಿದ್ದಾರೆ. ಎಲ್ಲರೂ ಬೇರೆಯುವಂತಹ ರಾಜಕೀಯ ಪಕ್ಷ ಇದ್ದರೆ ಅದು ಜೆಡಿಎಸ್ ಮಾತ್ರ ಎಂದು ಹೇಳಿದರು.

ಇಂದು ಕಾಂಗ್ರೆಸ್ ಸಂಸ್ಕೃತಿಯನ್ನು ಬದಲಿಸಲು ಸಾಧ್ಯವಿಲ್ಲ ಎಂದ ಅವರು, ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಅವರ ಸ್ಥಿತಿ ದತ್ತು ತೆಗೆದುಕೊಂಡ ಮಗನಂತಹ ಪರಿಸ್ಥಿತಿ ಇದೆಯೇ ಹೊರತು, ಹುಟ್ಟಿದ ಮಗನಂತೆ ಇಲ್ಲ ಎಂದು ಸಿದ್ದರಾಮಯ್ಯ ಅವರನ್ನು ಲೇವಡಿ ಮಾಡಿದರು. ಸಭೆಯಲ್ಲಿ ಶಾಸಕರಾದ ಎಂ.ಅಶ್ವಿನ್‌ಕುಮಾರ್, ಕೆ.ಮಹದೇವ್, ಎಂ.ಶ್ರೀನಿವಾಸ್, ಕೆ.ಅನ್ನದಾನಿ, ಸುರೇಶ್‌ಗೌಡ, ಪರಿಷತ್ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡ, ಸಿ.ಎನ್.ಮಂಜೇಗೌಡ, ಮುಖಂಡರಾದ ಅಬ್ದುಲ್ ಅಜೀಜ್, ಚಿಂತಕ ಪ್ರೊ.ಪಿ.ವಿ. ನಂಜರಾಜ ಅರಸ್, ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎನ್.ನರಸಿಂಹಸ್ವಾಮಿ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಅಶ್ವಿನಿ ಅನಂತು ಇನ್ನಿತರರು ಭಾಗವಹಿಸಿದ್ದರು.

ವಿಧಾನಸೌಧದಲ್ಲಿ ಕುಮಾರಸ್ವಾಮಿ ಕೂರಿಸಿ ಸಾಯ್ತೇನೆ...!

ಎರಡು ಹೊತ್ತು ಊಟ ಮಾಡಿ ನೆಮ್ಮದಿಯಾಗಿ ಬದುಕುವ ಸರ್ಕಾರ ಬರಬೇಕು. ಅದಕ್ಕಾಗಿ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದು ಹೇಳಿದರು. ಟಿಪ್ಪುವಿನ ಕುರಿತು ಪ್ರೊ.ಪಿ.ವಿ.ನಂಜರಾಜ ಅರಸು ಅವರು ಸತ್ಯವನ್ನೇ ಹೇಳಿದ್ದಾರೆ. ಜೆಡಿಎಸ್ ಸರ್ಕಾರ ಬಂದರೆ ಅವರಿಗೆ ಗೌರವಯುತ ಸ್ಥಾನ ನೀಡುತ್ತೇವೆ. ಟಿಪ್ಪು ಮಕ್ಕಳನ್ನು ಬಿಡುಗಡೆ ಮಾಡಲು ಬ್ರಿಟಿಷರಿಗೆ ದುಡ್ಡು ಸಂಗ್ರಹಿಸಿ ಕೊಟ್ಟವರು ಒಕ್ಕಲಿಗರು. ಅಂದರೆ ರೈತರ ಮಕ್ಕಳು. ಇತಿಹಾಸವನ್ನು ಅರಿಯದವರು ಮೊದಲು ಇದನ್ನು ತಿಳಿದುಕೊಳ್ಳಬೇಕಿದೆ ಎಂದು ವಿರೋಧಿಗಳಿಗೆ ಕುಟುಕಿದರು.

ಚುನಾವಣಾ ಕ್ಷೇತ್ರದಿಂದ ದೂರ ಉಳಿದಿಲ್ಲ: ಕೆಟಿಎಸ್

ನಾನು ಚುನಾವಣಾ ಕ್ಷೇತ್ರದ ಬದಲಾವಣೆ ಕೇಳಿದ್ದೇನೆಯೇ ಹೊರತು ಚುನಾವಣಾ ಕಣದಿಂದ ದೂರ ಉಳಿದಿಲ್ಲ, ವಿಧಾನ ಸಭೆಗೆ ಸ್ಪರ್ಧಿಸಲು ಬಡ್ತಿ ಕೇಳಿದ್ದೇನೆ ಎಂದು ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ ಸ್ಪಷ್ಟಪಡಿಸಿದರು. ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಪದವೀಧರರನ್ನು ಸಂಪೂರ್ಣ ಮರೆತು ಬಿಟ್ಟಿದೆ. ಪದವೀಧರರಿಗೂ ಕಾಂಗ್ರೆಸ್‌ಗೂ ಒಗ್ಗುವುದಿಲ್ಲ. ಆದರೆ ದೇವೇಗೌಡರ ಅವಧಿಯಲ್ಲಿ ಲಕ್ಷಾಂತರ ಶಿಕ್ಷಕರ ನೇಮಕವಾಗಿದೆ. ಕುಮಾರಸ್ವಾಮಿ ಅವಧಿಯಲ್ಲಿ ಕಾಲೇಜುಗಳನ್ನು ತೆರೆಯುವ ಜೊತೆಗೆ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರನ್ನೂ ನೇಮಕಾತಿ ಮಾಡಿದ್ದಾರೆ ಎಂದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಹೆಚ್.ಡಿ.ರೇವಣ್ಣ ಕ್ರಾಂತಿಯನ್ನೇ ಮಾಡಿದರು. ಎಲ್ಲಾ ಇಲಾಖೆಗಳಲ್ಲೂ ನಾಡಿನ ಅಭಿವೃದ್ಧಿಗೆ ಕೈ ಹಾಕಿದ್ದರೆ ಹೊರತು ಅದರಲ್ಲಿ ಬೇರೆ ಉದ್ದೇಶ ಇರಲಿಲ್ಲ. ದಕ್ಷಿಣ ಪದವೀಧರ ಕ್ಷೇತ್ರ ಜೆಡಿಎಸ್‌ನ ಭದ್ರಕೋಟೆಯಾಗಿದ್ದು, ನಾಲ್ಕು ಜಿಲ್ಲೆಗಳ ಮತದಾರರು ಜೆಡಿಎಸ್ ಅಭ್ಯರ್ಥಿಗೆ ಮತ ನೀಡಲಿದ್ದಾರೆ ಎಂದರು.

ನಾಮಪತ್ರ ಸಲ್ಲಿಕೆಗೆ ತೆರೆ

ಮೈಸೂರು, ಮೇ 26(ಎಸ್‌ಬಿಡಿ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಇಂದು ತೆರೆಬಿತ್ತು. ಸ್ಪರ್ಧಾಕಾಂಕ್ಷಿಗಳು ಮಧ್ಯಾಹ್ನ 3 ಗಂಟೆಯೊಳಗೆ ಚುನಾವಣಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ತಮ್ಮ ಉಮೇದುವಾರಿಕೆ ಸಲ್ಲಿಸಿದರು. ಇಂದು ಬಿಎಸ್‌ಪಿ ಡಾ.ಚನ್ನ ಕೇಶವಮೂರ್ತಿ, ಎಸ್‌ಡಿಪಿಐನ ಅಮ್ಜದ್‌ಖಾನ್, ಆರ್‌ಪಿಎಫ್‌ಐನ ಎನ್.ವೀರಭದ್ರಸ್ವಾಮಿ, ಪಕ್ಷೇತರ ಅಭ್ಯರ್ಥಿಗಳಾದ ಹೆಚ್.ಪಿ.ಸುಜಾತ, ರಾಜೇಂದ್ರಸಿಂಗ್ ಬಾಬು, ಪ್ರಸನ್ನಕುಮಾರ್, ಎಸ್.ರಾಮು, ಡಾ.ವೆಂಕಟೇಶ್ ಗುರುವಾರ ನಾಮಪತ್ರ ಸಲ್ಲಿಸಿದರು. ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು, ಬಿಜೆಪಿ ಅಭ್ಯರ್ಥಿ ಎಂ.ವಿ. ರವಿಶಂಕರ್ ಕೂಡ ಹೆಚ್ಚುವರಿ ಸೆಟ್ ಉಮೇದುವಾರಿಕೆ ಸಲ್ಲಿಸಿದ್ದಾರೆ. ಇದುವರೆಗೆ ಒಟ್ಟು 15 ಮಂದಿ ನಾಮಪತ್ರ ಸಲ್ಲಿಸಿದ್ದಾರೆ.

ಬಿಜೆಪಿಯದ್ದು ಗೋಲ್‌ಮಾಲ್ ಸರ್ಕಾರ: ಹೆಚ್.ಡಿ.ರೇವಣ್ಣ ಕಿಡಿ

ಬಿಜೆಪಿಯದ್ದು ಗೋಲ್‌ಮಾಲ್ ಸರ್ಕಾರ. ಇಲ್ಲಿ ಬರೀ ಹಗರಣಗಳೇ ತುಂಬಿವೆ. ಕಾಂಗ್ರೆಸ್ ಮತ್ತು ಬಿಜೆಪಿ ಹತ್ತು ವರ್ಷಗಳಲ್ಲಿ ಒಂದೇ ಒಂದು ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡಲಿಲ್ಲ. ಆದರೆ ಹೆಚ್.ಡಿ.ಕುಮಾರಸ್ವಾಮಿ ಆಡಳಿತದ ಸಂದರ್ಭದಲ್ಲಿ ಪದವೀಧರರ ಮತ್ತು ಶಿಕ್ಷಣ ಇಲಾಖೆಯಲ್ಲಿ ಸಾಕಷ್ಟು ಕೆಲಸಗಳಾಗಿವೆ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳ ವಿರುದ್ಧ ಟೀಕಾ ಪ್ರಹಾರ ನಡೆಸಿದರು.

ರಾಜ್ಯದಲಿ 48 ತಾಲೂಕುಗಳಲ್ಲಿ ಪಿಯು ಕಾಲೇಜು, 50 ತಾಲೂಕುಗಳಲ್ಲಿ ಪ್ರಥಮ ದರ್ಜೆ ಕಾಲೇಜುಗಳೇ ಇರಲಿಲ್ಲ. 600 ಪ್ರೌಢಶಾಲೆಗಳನ್ನು ಮಂಜೂರು ಮಾಡಿ ಶಿಕ್ಷಕರ ನೇಮಕಾತಿ ನಡೆಯಿತು. ಶಿಕ್ಷಕರ ಹಲವಾರು ಬೇಡಿಕೆಗಳಿದ್ದು, ಅದನ್ನು ನಮ್ಮ ಸರ್ಕಾರ ಬಂದಾಗ ಪರಿಹರಿಸುತ್ತೇವೆ. ಪರಿಷತ್ ಚುನಾವಣೆಯಲ್ಲಿ ಧ್ವನಿ ಎತ್ತುವವರನ್ನು ಆಯ್ಕೆ ಮಾಡಬೇಕು ಎಂದರು.

ಬಿಜೆಪಿ ಸರ್ಕಾರ ಉದ್ಯೋಗ ಸೃಷ್ಟಿಸುವುದನ್ನು ಬಿಟ್ಟು ಬೇರೆ ವಿಚಾರಗಳನ್ನೇ ಹುಟ್ಟು ಹಾಕಿ ನಿಜವಾದ ವಿಚಾರಗಳನ್ನು ಮರೆಮಾಚುತ್ತಿದೆ ಎಂದು ಜೆಡಿಎಸ್ ಸಂಸದೀಯ ಸಮಿತಿ ಅಧ್ಯಕ್ಷ ಹೆಚ್.ಕೆ.ಕುಮಾರಸ್ವಾಮಿ ರಾಜ್ಯ ಸರ್ಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಸರ್ಕಾರ ಉದ್ಯೋಗ ಕಲ್ಪಿಸುವ ಬಗ್ಗೆ ಗಮನ ನೀಡದೇ ಬೇರೆಲ್ಲಾ ವಿಚಾರಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಯಾವುದೇ ಜನಪರ ಕೆಲಸ ಗಳನ್ನು ಮಾಡಲಿಲ್ಲ. ಹೆಚ್.ಡಿ.ಕುಮಾರಸ್ವಾಮಿ ಮುಖ್ಯ ಮಂತ್ರಿಯಾಗಿದ್ದಾಗ ಸಾಕಷ್ಟು ಜನಪರ ಕೆಲಸಗಳಾಗಿವೆ. ನೌಕರರ ಪರವಾಗಿ ಹಲವಾರು ಹೋರಾಟಗಳನ್ನು ಮಾಡಿ ನ್ಯಾಯ ಕೊಡಿಸಿದ್ದಾರೆ ಎಂದು ತಿಳಿಸಿದರು.

ನಮ್ಮದು ಮನೆಜಗಳ, ಜಿ.ಟಿ.ದೇವೇಗೌಡ, ಮರಿತಿಬ್ಬೇಗೌಡರೊಂದಿಗೆ ಮಾತನಾಡಿ ಸರಿಪಡಿಸುತ್ತೇವೆ: ಇಬ್ರಾಹಿಂ ಹೇಳಿಕೆ

ಮೈಸೂರು,ಮೇ 26(ಆರ್‌ಕೆಬಿ)– ಮನೆ ಜಗಳ ಸಹಜ. ಹಾಗಾಗಿ ನಾನು ಶಾಸಕ ಜಿ.ಟಿ.ದೇವೇಗೌಡ ಮತ್ತು ಮರಿತಿಬ್ಬೇಗೌಡರೊಂದಿಗೆ ಚರ್ಚಿಸಿ ಪಕ್ಷದಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ತಿಳಿಸಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜೆಡಿಎಸ್‌ನಿಂದ ಮರಿತಿಬ್ಬೇಗೌಡ ಅಂತರ ಕಾಯ್ದುಕೊಂಡಿದ್ದಾರೆಂಬುದಾದರೆ ಅವರೊಂದಿಗೆ ಚರ್ಚಿಸುತ್ತೇವೆ. ಜೊತೆಗೆ ಜಿ.ಟಿ.ದೇವೇಗೌಡರನ್ನು ಭೇಟಿಯಾಗಿ ಅವರೊಂದಿಗೂ ಮಾತುಕತೆ ನಡೆಸಿ ಆಂತರಿಕ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು. ಮುಂದೆ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗಲಾಗುವುದು. ಒಟ್ಟಾರೆ ಚುನಾವಣೆಯಲ್ಲಿ ನಮ್ಮ ಪಕ್ಷ ಎಲ್ಲಾ ಕ್ಷೇತ್ರಗಳಲ್ಲೂ ಗೆಲುವು ಸಾಧಿಸುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಮಗನಿಗೆ ಸೀಟ್ ಕೊಡಿಸಲಾಗದ ಯಡಿಯೂರಪ್ಪ: ಇಬ್ರಾಹಿಂ ವ್ಯಂಗ್ಯ: ಬಿಜೆಪಿಯನ್ನು ಕಟ್ಟಿ ಬೆಳೆಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಮಗನಿಗೇ ಸೀಟ್ ಕೊಡಿಸಲಾಗಲಿಲ್ಲ. ಯಡಿಯೂರಪ್ಪ ಅವರಿಗೆ ಇದಕ್ಕಿಂತ ಅವಮಾನ ಇನ್ನೇನು ಬೇಕು ಎಂದು ಲೇವಡಿ ಮಾಡಿದರು.

ಸಂತೋಷ್ ಅವರು ಆರ್‌ಎಸ್‌ಎಸ್‌ನವರೇ ಇದ್ದರೂ ಅವರು ದುಡ್ಡಿರುವವರಿಗೆ ಮಣೆ ಹಾಕದೇ ಯುವಕರನ್ನು ಹುಡುಕಿ ಹುಡುಕಿ ಕಾರ್ಯಕರ್ತರಿಗೆ ಅಧಿಕಾರ ನೀಡುತ್ತಿದ್ದಾರೆ. ಹೀಗಾಗಿ ಅವರನ್ನು ನಾನು ಅಭಿನಂದಿಸುವುದಾಗಿ ತಿಳಿಸಿದ ಅವರು, ಸಂತೋಷ್ ಅವರದ್ದು ಕೇಶವ ಕೃಪಾ ಆದರೆ, ನಮ್ಮದು ಬಸವ ಕೃಪಾ. ಇದೇ ನಮಗೂ ಅವರಿಗೂ ಇರುವ ವ್ಯತ್ಯಾಸ ಎಂದು ಹೇಳಿದರು.

ಬಿಜೆಪಿಯವರಿಗೆ ಬೇರೆಯವರ ಮಕ್ಕಳೇ ಗತಿ: ನಮ್ಮಲ್ಲಿರುವವರನ್ನು ಕಾಂಗ್ರೆಸ್‌ನವರು ಕರೆದುಕೊಂಡು ಹೋಗಿದ್ದರು. ಬಿಜೆಪಿಯವರು ಬೇರೆಯವರ ಮಕ್ಕಳನ್ನು ನಮ್ಮ ಮಕ್ಕಳು ಎನ್ನುತ್ತಾರೆ ಎಂದು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷವನ್ನು ಇಬ್ರಾಹಿಂ ತರಾಟೆಗೆ ತೆಗೆದುಕೊಂಡರು. ಪಠ್ಯ ಪುಸ್ತಕದಿಂದ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಟೈಟಲ್ ತೆಗೆದಿರುವ ವಿಚಾರ ಕುರಿತು ಸರ್ಕಾರದ ವಿರುದ್ಧ ಕಿಡಿಕಾರಿದ ಅವರು, ಈ ವಿಚಾರ 70 ವರ್ಷದಿಂದ ಇಲ್ಲದ್ದು ಈಗೇಕೆ ಬಂತು. ಚಿತ್ರದಲ್ಲಿ ಟಿಪ್ಪು ಸುಲ್ತಾನ್ ಅವರನ್ನು ಹುಲಿಯೊಂದಿಗೆ ಸೆಣಸುತ್ತಿರುವುದನ್ನು ತೋರಿಸಿದ್ದಾರೆ. ಹಾಗಾದರೆ ಹಿಂದಿನ ಕಾಲದಲ್ಲಿ ಫೋಟೋಗ್ರಫಿ ಇತ್ತು. ಹುಲಿಯನ್ನು ಹೊಡೆಯೋಕೆ ಹೋಗಿದ್ದನ್ನು ಯಾರಾದರೂ ಫೋಟೋ ತೆಗೆದಿದ್ದಾರೆಯೇ? ಎಂದು ಪ್ರಶ್ನಿಸಿದರು.

ಅಂತೆಯೇ ಸಿದ್ದರಾಮಯ್ಯ ಅವರನ್ನು ಹುಲಿಯಾ ಎನ್ನುತ್ತೇವೆ. ಯಡಿಯೂರಪ್ಪ ಅವರನ್ನು ರಾಜಾಹುಲಿ ಎನ್ನುತ್ತೇವೆ. ಹಾಗಾದರೆ ಅವರು ಕಾಡಿನಲ್ಲಿದ್ದರಾ? ಎಂದು ಪ್ರಶ್ನಿಸಿದರು. ಒಬ್ಬ ಸಂಸದನಾಗಿ ಏನು ಮಾತನಾಡಬೇಕು ಎಂಬ ಪ್ರಜ್ಞೆ ಇಲ್ಲ. ಮೈಸೂರು ಕುವೆಂಪು ನಾಡು, ಪುಟ್ಟಪ್ಪನವರ ಬಳಿ ನಾವೆಲ್ಲರೂ ಪಾಠ ಕೇಳಿದ್ದೇವೆ. ಪುಟ್ಟಪ್ಪನವರ ಪುಸ್ತಕಗಳನ್ನು ತೆಗೆಯಲು ಹೊರಟಿದ್ದಾರೆ. ನಮ್ಮವ್ವ ಕರ್ನಾಟಕ ಮಾತೆ, ನಮ್ಮ ಅಜ್ಜಿ ಭಾರತಮಾತೆ, ಮೊದಲು ಅವ್ವನನ್ನು ನೋಡು ಎಂದರೆ, ಅಜ್ಜಿ ನೋಡಲು ಹೊರಟಿದ್ದಾರೆ ಎಂದು ವ್ಯಂಗ್ಯವಾಗಿ ಹೇಳಿದರು.

ಜಿ.ಟಿ.ದೇವೇಗೌಡರು ಜೆಡಿಎಸ್ ಪಕ್ಷದ ಬುನಾದಿ, ಯಾವುದೇ ಕಾರಣಕ್ಕೂ ಪಕ್ಷ ಬಿಡಲಾರರು: ರೇವಣ್ಣ

ಮೈಸೂರು, ಮೇ 26– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಜೆಡಿಎಸ್ ಪಕ್ಷದ ಬುನಾದಿ. ಅವರು ಯಾವುದೇ ಕಾರಣಕ್ಕೂ ಬೇರೆ ಪಕ್ಷಕ್ಕೆ ಹೋಗುವುದಿಲ್ಲ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಸ್ಪಷ್ಟಪಡಿಸಿದರು.

ಮೈಸೂರಿನಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಅವರು, ನಾವೆಲ್ಲರೂ ಒಟ್ಟಾಗಿ 2023ರ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ. ಹೆಚ್.ಡಿ.ದೇವೇಗೌಡರು ಪಕ್ಷವನ್ನು ಅಧಿಕಾರಕ್ಕೆ ತರಲು ಹೆಚ್.ಡಿ.ಕುಮಾರಸ್ವಾಮಿ ಮತ್ತು ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರಿಗೆ ಜವಾಬ್ದಾರಿ ವಹಿಸಿದ್ದಾರೆ. ಈ ಇಬ್ಬರು ನಾಯಕರು 2023ರಲ್ಲಿ ಜೆಡಿಎಸ್ ಅಧಿಕಾರಕ್ಕೆ ತರಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಪಠ್ಯಪುಸ್ತಕ ಆಯ್ಕೆ ಸಮಿತಿ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಮೇ 26– ನೂತನ ಪಠ್ಯಪುಸ್ತಕ ಆಯ್ಕೆ ಸಮಿತಿಯನ್ನು ವಜಾಗೊಳಿಸುವಂತೆ ಹಾಗೂ ಅರ್ಹ ಶಿಕ್ಷಣ ತಜ್ಞರನ್ನು ಪಠ್ಯಪುಸ್ತಕ ಆಯ್ಕೆ ಸಮಿತಿಗೆ ನೇಮಿಸುವಂತೆ ಒತ್ತಾಯಿಸಿ ಭಾರತೀಯ ಪರಿವರ್ತನ ಸಂಘ (ಬಿಪಿಎಸ್) ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಎದುರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಂಡರಬಾಳು ವಾಸು ಅವರ ನೇತೃತ್ವದಲ್ಲಿ ಜವಾಯಿಸಿದ ಪ್ರತಿಭಟನಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು. ಶಿರಸ್ತೇದಾರ ಪರಶಿವಮೂರ್ತಿ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಪಠ್ಯಪುಸ್ತಕಗಳು ಮಕ್ಕಳ ವ್ಯಕ್ತಿತ್ವವನ್ನು ರೂಪಿಸಬಲ್ಲ ಸಾಧನಗಳಾಗಿರುವುದರಿಂದ ಉದಾತ್ತರು, ವಿಶಾಲ ಮನಸ್ಥಿತಿ ಉಳ್ಳವರು, ಜಾತಿಧರ್ಮ ಪಂಥಗಳನ್ನು ಮೀರಿದ ವಸ್ತುನಿಷ್ಟ ಆಲೋಚನೆಯುಳ್ಳ ತಜ್ಞರು ಪಠ್ಯಪುಸ್ತಕ ಆಯ್ಕೆ ಸಮಿತಿಯಲ್ಲಿ ಇರಬೇಕಾಗುತ್ತದೆ. ಆದರೆ ಈಗ ಸರ್ಕಾರ ನೇಮಿಸಿರುವ ವಿದ್ಯಾರ್ಥಿಗಳ ಪಠ್ಯಪುಸ್ತಕ ಸಮಿತಿಯಲ್ಲಿ ಅಂತಹ ಗುಣಗಳು ಇಲ್ಲದವರು ಇದ್ದಾರೆ. ಲಿಂಗ ಸಮಾನತೆ, ಜಾತ್ಯತೀತ ಮೌಲ್ಯಗಳನ್ನು ನೇರವಾಗಿ ಅಣಕಿಸುವವರು, ಕನ್ನಡನಾಡಿಗೆ ಘನತೆ ತಂದುಕೊಟ್ಟ ಮಹಾಕವಿ ಕುವೆಂಪು ಅಂಥವರನ್ನೇ ಅಣಕಿಸಿ ಬರೆಯುವ ಸಂಕುಚಿತ ಬುದ್ದಿಯುಳ್ಳವರು ಇದ್ದಾರೆ. ಇಂತಹ ಮನುವಾದಿ ಮನಸ್ಥಿತಿಯುಳ್ಳ ಜನರು ಪಠ್ಯಪುಸ್ತಕ ಆಯ್ಕೆ ಸಮಿತಿಯಲ್ಲಿರುವುದು ಈ ನಾಡಿನ ವಿದ್ವತ್ ಲೋಕ ನಾಚಿಕೆಪಡುವಂತಹ ತಲೆತಗ್ಗಿಸುವಂತಹ ಸಂಗತಿಯಾಗಿದೆ ಎಂದು ದೂರಿದರು. ಮನುವಾದಿ ಸಿದ್ದಾಂತದ ಪ್ರಚಾರಕ ಹೆಡಗೆವಾರ್ ಅವರ ಲೇಖನ ಹತ್ತನೆಯ ತರಗತಿ ಮಕ್ಕಳಿಗೆ ಕಲಿಸುವುದು, ಸುಳ್ಳು ಭಾಷಣಗಳ ಮೂಲಕ ರಾಜ್ಯದ ವಿದ್ಯಾವಂತ ಸಮುದಾಯದಲ್ಲಿ ತೀರಾ ಅಪಹಾಸ್ಯಕ್ಕೆ ಗುರಿಯಾಗಿರುವ ವ್ಯಕ್ತಿಯೊಬ್ಬರ ಲೇಖನವನ್ನು ಪಠ್ಯಪುಸ್ತಕದಲ್ಲಿ ಸೇರಿಸಿರುವುದು ಈ ರಾಜ್ಯದ ಘನ ಸಂಸ್ಕೃತಿಗೆ ಮಾಡಿದ ಅವಮಾನವಾಗಿದೆ ಎಂದು ಆರೋಪಿಸಿದರು.

ವರ್ಷಗಳು ಕಳೆದರೂ ಕೂಡ ಕಾಲೇಜು ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾನಿಲಯಗಳ ಸಂಶೋಧಕರಿಗೆ ವಿದ್ಯಾರ್ಥಿವೇತನವನ್ನು ಸರಿಯಾಗಿ ವಿತರಿಸಿಲ್ಲ. ಅದೇ ಅನರ್ಹ ಸಮಿತಿಗೆ ಪಿಯುಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಜವಾಬ್ದಾರಿ ನೀಡಿರುವುದು ರಾಜ್ಯ ಸರ್ಕಾರದ ಉದ್ದಟತನ, ಬೇಜವಾಬ್ದಾರಿ ನಿಲುವಾಗಿದೆ. ಮನುವಾದಿ ಮನಸ್ಥಿತಿ ಸಮಿತಿಯನ್ನು ವಜಾ ಮಾಡಬೇಕು. ಬರಗೂರು ರಾಮಚಂದ್ರಪ್ಪನವರ ಸಮಿತಿಯು ನೀಡಿದ್ದ ಪಠ್ಯಪುಸ್ತಕಗಳನ್ನೇ ಮುಂದುವರಿಸಬೇಕು. ಹೊಸ ಶಿಕ್ಷಣ ತಜ್ಞರನ್ನು ನೇಮಿಸಿ ಪಠ್ಯಗಳನ್ನು ಸಿದ್ದಪಡಿಸಬೇಕು ಎಂದು ಪ್ರತಿಭಟನಕಾರರು ಅಗ್ರಹಿಸಿದರು.

ಪ್ರತಿಭಟನೆಯಲ್ಲಿ ಭಾರತೀಯ ಪರಿವರ್ತನ ಸಂಘದ ರಾಜ್ಯ ಉಪಾಧ್ಯಕ್ಷ ಸೋಸಲೆ ಸಿದ್ದರಾಜು, ಟೌನ್ ಅಧ್ಯಕ್ಷ ರಾಮ ಸಮುದ್ರ ಬಾಬು, ಇರಸವಾಡಿ ಮಹೇಶ್, ಕಂದಹಳ್ಳಿ ರಮೇಶ್, ಗೌತಮ್, ಭರತ್, ಕೃಷ್ಣ, ಸ್ವಾಮಿ, ಪ್ರಸನ್ನ ಇತರರು ಭಾಗವಹಿಸಿದ್ದರು.

ಪರಿಶಿಷ್ಟ ಜಾತಿ, ಪಂಗಡದವರಿಗೆ ಬಿಜೆಪಿಯಿಂದ ಸಾಕಷ್ಟು ಸೌಲಭ್ಯಗಳು

ಜಿಲ್ಲಾ ಬಿಜೆಪಿ ಎಸ್‌ಟಿ ಮೋರ್ಚಾ ಸಭೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷರ ಹೇಳಿಕೆ



ಚಾಮರಾಜನಗರ, ಮೇ.26– ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಅನೇಕ ಸೌಲಭ್ಯಗಳನ್ನು ಕೊಟ್ಟಿದೆ ಎಂದು ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ನಗರದ ಮೇಘಾ ಕಾಂಪ್ಲೆಕ್ಸ್‌ನಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಜಿಲ್ಲಾ ಎಸ್ಟಿ ಮೋರ್ಚಾದ ಕಾರ್ಯಕಾರಿಣಿ ಸಭೆಯನ್ನು ಉದ್ಘಾಟಿಸಿ ಪದಾಧಿಕಾರಿಗಳಿಗೆ ಆದೇಶ ಪ್ರತಿ ವಿತರಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಬಿಜೆಪಿ ಎಸ್ಟಿ ಮೋರ್ಚಾ ಬಹಳ ಸದೃಢವಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದು, ಪ್ರಧಾನಮಂತ್ರಿ ನರೇಂದ್ರಮೋದಿಯವರ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾದ್ಯಂತ ಗಿಡ ನಡೆಯುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದೆ ಎಂದರು.

ಮುಖ್ಯಮಂತ್ರಿ ಬಸವರಾಜು ಎಸ್ ಬೊಮ್ಮಾಯಿ ಅವರು ಬಜೆಟ್‌ನಲ್ಲಿ ಎಸ್ಸಿಎಸ್ಟಿ ಸಮುದಾಯದವರ ಏಳಿಗೆಗಾಗಿ 27 ಸಾವಿರ ಕೋಟಿ ರೂ. ಹಣ ಮೀಸಲಿಟ್ಟು ಅ ಸಮುದಾಯದವರ ಕಲ್ಯಾಣಕ್ಕಾಗಿ ಬಳಸುವಂತೆ ಆದೇಶ ನೀಡಿದೆ ಇಲ್ಲದಿದ್ದರೆ ಶಿಸ್ತುಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ. ಪಕ್ಷದ ಕಾರ್ಯಕ್ರಮಗಳು, ಸರ್ಕಾರದ ಯೋಜನೆಗಳನ್ನು ಜನತೆಗೆ ತಿಳಿಸುವ ಮೂಲಕ ಎಸ್ಟಿ ಮೋರ್ಚಾದ ಸಂಘಟನಾ ಶಕ್ತಿಯನ್ನು ಜಿಲ್ಲೆಯಲ್ಲಿ ಹೆಚ್ಚಿನ ಮಟ್ಟದಲ್ಲಿ ಬೆಳೆಸಬೇಕು ಎಂದರು. ದಕ್ಷಿಣ ಪದವೀಧರ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಎಸ್ಟಿ ಮೋರ್ಚಾದ ರಾಜ್ಯ ಖಜಾಂಚಿ, ಜಿಲ್ಲಾ ಉಸ್ತುವಾರಿ ಶಿವಕುಮಾರ್ ಮಾತನಾಡಿ, ಪಕ್ಷದ ಸಿದ್ಧಾಂತಕ್ಕೆ ಬದ್ದರಾಗಿ ಕೆಲಸ ಮಾಡಿದರೆ ಅಧಿಕಾರ, ಸೂಕ್ತ ಸ್ಥಾನ–ಮಾನ ಸಿಕ್ಕೆಸಿಗುತ್ತದೆ ಅದರಲ್ಲಿ ಯಾವುದೇ ಅನುಮಾನ ಬೇಡ. ನಾನು ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನಾಗಿದ್ದು, ಪಕ್ಷದ ನೀಡಿದ ಕೆಲಸಗಳನ್ನು ಬಹಳ ಜವಾಬ್ದಾರಿಯುತವಾಗಿ ನಿರ್ವಹಿಸಿದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಸ್ಪರ್ಧಿಸಿ ಮೈಸೂರು ಇತಿಹಾಸದಲ್ಲಿ ಸುಣ್ಣದಕೇರಿ ಭಾಗದಲ್ಲಿ ಗೆದ್ದಿದ್ದೇನೆ. ಇಂದು ಮೂರು ಬಾರಿ ಗೆದ್ದು ಮೈಸೂರು ಮಹಾನಗರ ಪಾಲಿಕೆಯಲ್ಲಿ ಆಡಳಿತ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಪಕ್ಷದ ಸಿದ್ದಾಂತಕ್ಕೆ ಬದ್ದರಾಗಿ ಕೆಲಸ ಮಾಡಿದರೆ ಅಧಿಕಾರ ಸಿಗುತ್ತದೆ ಅನ್ನುವುದಕ್ಕೆ ನಾನೇ ನಿದರ್ಶನ ಎಂದರು.

ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ಎಸ್‌ಟಿ ಮೋರ್ಚಾದ ಜಿಲ್ಲಾಧ್ಯಕ್ಷ ಜಯಸುಂದರ್ ಮಾತನಾಡಿ, ಜಿಲ್ಲೆಯಲ್ಲಿ ಎಸ್ಟಿ ಮೋರ್ಚಾವನ್ನು ತಳಮಟ್ಟದಿಂದ ಸಂಘಟಿಸಿ ಮುಂಬರುವ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ ಸರ್ಕಾರಕ್ಕೆ ಶಕ್ತಿ ತುಂಬುವ ಕೆಲಸ ಮಾಡಲಾಗುವುದು ಎಂದರು

ದಕ್ಷಿಣ ಪದವೀಧರ ಕ್ಷೇತ್ರದ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರು ಈ ಭಾಗದ ಶಕ್ತಿಯಾಗಿದ್ದಾರೆ. ಅವರನ್ನು ಮೊದಲ ಪ್ರಾಶಸ್ತ್ಯದ ಮತಗಳಿಂದ ಗೆಲ್ಲಿಸಲು ನಾವೆಲ್ಲರೂ ಶ್ರಮಿಸೋಣ ಎಂದರು.

ಮೈ.ವಿ.ರವಿಶಂಕರ್ ಗೆಲ್ಲಿಸಲು ಮನವಿ: ಜಿಲ್ಲಾಧ್ಯಕ್ಷ ಆರ್.ಸುಂದರ್ ಮಾತನಾಡಿ, ದಕ್ಷಿಣ ಪದವೀಧರ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಗೆಲ್ಲಿಸಲು ಪಕ್ಷದ ಕಾರ್ಯಕರ್ತರು, ಮುಖಂಡರು ಶ್ರಮಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಗಲ ಶಿವಕುಮಾರ್, ಎಸ್‌ಟಿ ಮೋರ್ಚಾದ ರಾಜ್ಯ ಉಪಾಧ್ಯಕ್ಷ ಮಲ್ಲೇಶ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಅಗರರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಂಕರ್, ಪುಷ್ಪಾ, ಜಿಲ್ಲಾ ಕಾರ್ಯದರ್ಶಿ ಮಹೇಶ್ ಬಸವಾಪುರ, ಜಿಲ್ಲಾ ಕಾರ್ಯದರ್ಶಿ ಶ್ರೀನಿವಾಸ, ಹಾಸನ ಜಿಲ್ಲಾ ಪ್ರಭಾರಿ ನಿಜಗುಣರಾಜ್, ನಗರಸಭಾ ಮಾಜಿ ಅಧ್ಯಕ್ಷರುಗಳಾದ ಸುರೇಶ್ ನಾಯಕ, ಮಹದೇವನಾಯಕ ಮುಖಂಡರಾದ ಬಾಲಸುಬ್ರಹ್ಮಣ್ಯ, ಮಾಂಬಳ್ಳಿ ಶಿವಪ್ಪ, ರಮೇಶ್ ಇತರರು ಭಾಗವಹಿಸಿದ್ದರು.

ನಾಳೆಯಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮೇ 26– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ, ಹರದನಹಳ್ಳಿ, ಸಂತೇಮರಹಳ್ಳಿ, ಗುಂಡ್ಲುಪೇಟೆ ಮತ್ತು ಬೇಗೂರು ಉಪವಿಭಾಗಗಳ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜಿಲ್ಲೆಯ ವಿವಿಧೆಡೆ ಮೇ 28 ಮತ್ತು 29 ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮೇ 28ರಂದು ಅಟ್ಟುಗೂಳಿಪುರ ವ್ಯಾಪ್ತಿಯ ಸಿದ್ದಯ್ಯನಪುರ, ಹೊಂಗಲವಾಡಿ, ಕೋಳಿಪಾಳ್ಯ, ಬಂಧಿಗೌಡನಹಳ್ಳಿ, ಅಟ್ಟುಗೂಳಿಪುರ, ಹೊನ್ನಳ್ಳಿ ವ್ಯಾಪ್ತಿಯ ಕೊತ್ತಲವಾಡಿ, ಅರಕಲವಾಡಿ, ಯರಗನಹಳ್ಳಿ, ಸುವರ್ಣನಗರ, ಫ್ಯಾಕ್ಟರಿ, ಬಿಸಿಲವಾಡಿ, ಪುಣಜನೂರು, ಡೊಳ್ಳಿಪುರ, ಚನ್ನಪನಪುರ, ಅಮಚವಾಡಿ, ಮಾದಲವಾಡಿ ಮತ್ತು ಅರಕಲವಾಡಿ ವ್ಯಾಪ್ತಿಯ ಕಿಲಿಗೆರೆ, ಉನಗುಂಬ, ಯರಗನಹಳ್ಳಿ, ಅಚ್ಚಟ್ಟಿಪುರ, ಯಾನಗಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮೇ 29ರಂದು ದೊಡ್ಡರಾಯಪೇಟೆ ವ್ಯಾಪ್ತಿಯ ಚಾಮರಾಜನಗರ ಟೌನ್–1, ಕೋಡಿಮೋಳೆ, ರಾಮಸಮುದ್ರ, ಮಾದಾಪುರ, ಕಾಗಲವಾಡಿ, ಸೋಮವಾರಪೇಟೆ ಟೌನ್–2, ಹರದನಹಳ್ಳಿ, ಬೇಡರಪುರ, ಟಿ.ಕೆ ಮೋಳೆ, ಶಿವಪುರ, ಗೂಳಿಪುರ ಎನ್.ಜೆ.ವೈ, ಸಂತೇಮರಹಳ್ಳಿ ವ್ಯಾಪ್ತಿಯ ಹೊನ್ನೂರು, ಕುದೇರು, ಉಮ್ಮತ್ತೂರು, ಸಂತೇಮರಹಳ್ಳಿ, ಕೆಂಪನಪುರ, ನವಿಲೂರು, ದುಗ್ಗಟ್ಟಿ, ಆಲ್ದೂರು, ಅಂಬಳೆ, ಮಂಗಲ, ಚುಂಗಡಿಪುರ, ಅವಿತ್ ಗ್ರೀನ್ ಸೋಲಾರ್, ಹರವೆ ವ್ಯಾಪ್ತಿಯ ಮೂಡ್ನಾಕೂಡು, ಮುಕ್ಕಡಹಳ್ಳಿ, ಉಡಿಗಾಲ, ನಂಜದೇವನಪುರ, ಕಲ್ಪುರ, ದೇವಲಾಪುರ, ತಮ್ಮಡಹಳ್ಳಿ, ಎನ್.ಜೆ.ವೈ, ಕಬ್ಬಳ್ಳಿ ವ್ಯಾಪ್ತಿಯ ಕಬ್ಬಳ್ಳಿ, ಸೋಮಳ್ಳಿ, ಪಡಗೂರು, ಬೆಳಚಲವಾಡಿ, ನಿಟ್ರೆ, ಅಗತಗೌಡನಹಳ್ಳಿ, ಜನ್ನೂರು ವ್ಯಾಪ್ತಿಯ ಉಮ್ಮತ್ತೂರು, ಬಾಗಳಿ, ಲಿಂಗಣಾಪುರ, ಜನ್ನೂರು, ಜನ್ನೂರು ಹೊಸೂರು, ಹಳ್ಳಿಕೆರೆಹುಂಡಿ, ಗಣಗನೂರು, ಗಣಗನೂರುಪುರ, ನವಿಲೂರು, ಆಲ್ದೂರು, ಬಿಎಂಕೆ ಹುಂಡಿ, ಗೊದ್ದಲಹುಂಡಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ 1912 ಸಂಪರ್ಕಿಸುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪ್ರಾಪ್ತ ಮಕ್ಕಳ ರಕ್ಷಣೆಗಾಗಿ ಮುಂಜಾಗ್ರತಾ ಕ್ರಮಗಳಿಗೆ ಮನವಿ

ಚಾಮರಾಜನಗರ, ಮೇ 26– ಅಪ್ರಾಪ್ತ ಮಕ್ಕಳು ತೆರೆದ ಕೊಳವೆ ಬಾವಿ, ಕೃಷಿ ಹೊಂಡ, ಕೆರೆಕಟ್ಟೆ, ಕಾಲುವೆ ಮುಂತಾದ ಜಲಮೂಲಗಳಲ್ಲಿ ಬಿದ್ದು ಸಾವನ್ನಪ್ಪುತ್ತಿರುವ ಘಟನೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದು, ಇಂತಹ ಅವಘಡಗಳನ್ನು ತಡೆಯುವ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಸಾರ್ವಜನಿಕರು ಮುಂಜಾಗ್ರತಾ ಕ್ರಮಗಳನ್ನು ವಹಿಸುವಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮನವಿ ಮಾಡಿದ್ದಾರೆ.

ಕೆರೆ–ಕಟ್ಟೆ, ಮ್ಯಾನ್‌ಹೋಲ್, ಕೃಷಿ ಹೊಂಡ, ಕೊಳವೆ ಬಾವಿಗಳು, ಕಲ್ಯಾಣಿಗಳು, ಕೊಳಚೆ ಚರಂಡಿಗಳು, ನದಿ ಜಲಪಾತಗಳ ತೀರ, ಸಂಪು, ಕಲ್ಲುಕೋರೆ, ಈಜುಕೊಳ ಇನ್ನಿತರ ಕಡೆಗಳಲ್ಲಿ ಮುಂಜಾಗ್ರತಾ ಕ್ರಮಗಳಾದ ಮುಳ್ಳುತಂತಿ, ತಡೆಗೋಡೆ ಹಾಗೂ ಎಚ್ಚರಿಕೆಯ ಫಲಕಗಳನ್ನು ಅಳವಡಿಸಿ ಅವಘಡಗಳನ್ನು ತಡೆಯಲು ಸಹಕಾರ ನೀಡುವಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸಂಪರ್ಕ ಜಾಲ ಬಂದ' ಕಾರ್ಯಕ್ರಮ ಉದ್ಘಾಟನೆ



ಚಾಮರಾಜನಗರ, ಮೇ 26– ರೈತರು ಶ್ರಮಪಟ್ಟರೆ ವ್ಯವಸಾಯದಲ್ಲಿ ಉತ್ತಮ ಬೇಳೆ ತೆಗೆಯಲು ಸಾಧ್ಯವಾಗುತ್ತದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ರೈತರಿಗೆ ಹಲವಾರು ಯೋಜನೆಗಳು ಇವೆ ಎಂದು ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರ ಕೃಷಿ ಹವಮಾನ ತಜ್ಞರಾದ ರಜತ್ ತಿಳಿಸಿದರು.

ತಾಲೂಕಿನ ಬಿಸವಾಡಿ ಲಕ್ಷ್ಮಿದೇವಿ ದೇವಸ್ಥಾನದ ಆವರಣದಲ್ಲಿ ಓ.ಡಿ.ಪಿ ಸಂಸ್ಥೆ ಹಾಗೂ ನಿಸರ್ಗ ರೈತರ ಉತ್ಪಾದಕರ ಸಮಿತಿಯ ಸಂಯುಕ್ತಾಶ್ರಯದಲ್ಲಿ "ಸಂಪರ್ಕ ಜಾಲ ಬಂದ" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರೈತರು ಯಾವುದೇ ಬೆಳೆಗಳನ್ನು ಬೆಳೆಯಬೇಕಾದರೆ ಜಮೀನಿನ ಮಣ್ಣು ಪರಿಕ್ಷಿಸುವುದು ಒಳ್ಳೆಯದು. ಕೆಲವು ಬೆಳೆಗಳಿಗೆ ಮಣ್ಣು ಉಪಯುಕ್ತವಾಗುವುದಿಲ್ಲ. ಇದರಿಂದ ಬೆಳೆಗಳು ನಾಶವಾಗುತ್ತದೆ. ಸರ್ಕಾರಗಳು ರೈತರ ಏಳಿಗೆಗೆ ಚೆಕ್ ಡ್ಯಾಂ.ಯೋಜನೆ, ಯಾವ ಸಮಯದಲ್ಲಿ ಯಾವ ಬೆಳೆ ಬೆಳೆದರೆ ಉತ್ತಮ ಎಂದು ತಿಳಿದುಕೊಳ್ಳುವುದು ಉತ್ತಮ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಬಿಸಲವಾಡಿ ಗ್ರಾಪಂ ಕಾರ್ಯದರ್ಶಿ ಗೋವಿಂದರಾಜು ಮಾತನಾಡಿ ಗ್ರಾಮ ಪಂಚಾಯಿತಿ ವತಿಯಿಂದ ರೈತರಿಗೆ ಹಲವಾರು ಯೋಜನೆಗಳು ಇದೇ. ಅದರ ಅನುಕೂಲಗಳನ್ನು ಪಡೆದು ಉತ್ತಮ ರೈತರಾಗ ಬಹುದು ಎಂದು ಹೇಳಿದರು. ಸರ್ಕಾರದ ಯೋಜನೆಗಳು ಕೃಷೀ ಇಲಾಖೆ, ತೋಟಗಾರಿಕೆ ಇಲಾಖೆ ಕಂದಾಯ ಇಲಾಖೆ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಕೃಷಿಗೆ ಸಂಭಂದ ಪಟ್ಟ ಮಾಹಿತಿಯನ್ನು ಪಡೆಯಬಹುದು ಎಂದರು.

ನಿಸರ್ಗ ರೈತರ ಉತ್ಪಾದಕರ ಸಮಿತಿ ಅಧ್ಯಕ್ಷ ನಾಗರಾಜು.ಪಿ ಅವರು ರೈತರಿಗೆ ಸಂಘ ಸಂಸ್ಥೆಗಳಿಂದ ಅಗುವ ಪ್ರಯೋಜನಗಳನ್ನು ಪ್ರಾಸ್ತಾವಿಕವಾಗಿ ತಿಳಿಸಿದರು.

ಗ್ರಾಮ ವಿಕಾಸ ಮಹಾ ಒಕ್ಕೂಟ ಅಧ್ಯಕ್ಷ ಆರೋಗ್ಯರವರು ವೇದಿಕೆಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ರೈತ ಸಂಪರ್ಕ ಕೇಂದ್ರದ ನಂದಿನಿ, ಕಮಿಟಿ ನಿರ್ದೇಶಕರಾದ ಜಿ.ಬಿ.ನಾಗರಾಜು, ಎಂ.ನಾಗರಾಜು, ದೇವಮ್ಮ, ಮಂಗಳಮ್ಮ, ಕಾರ್ಯಕರ್ತರಾದ ರವಿಕುಮಾರ್, ಸರೋಜ ಇದ್ದರು.

ಗುಂಬಳ್ಳಿ ಸರ್ಕಾರಿ ಪ್ರೌಢಶಾಲೆಗೆ ಶೇ.100 ಫಲಿತಾಂಶ

ಯಳಂದೂರು, ಮೇ26(ವಿ.ನಾಗರಾಜು)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನ ಗುಂಬಳ್ಳಿ ಪ್ರೌಢಶಾಲೆಯು ಶೇ.100ರಷ್ಟು ಫಲಿತಾಂಶ ಪಡೆದಿದೆ.

ತಾಲೂಕಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಮೊದಲ ಅಗ್ರಶ್ರೇಣಿಯ ಅಂಕಗಳನ್ನು ಪಡೆದ ಸಂಜನಾ.ವಿ.(610), ಭವಾನಿ(608), ಲಕ್ಷ್ಮಿ(608), ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 60 ವಿದ್ಯಾರ್ಥಿಗಳಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ 12 ವಿದ್ಯಾರ್ಥಿಗಳು, ಪ್ರಥಮ ಶ್ರೇಣಿ 40, ದ್ವಿತೀಯ ಶ್ರೇಣಿ 6 ವಿದ್ಯಾರ್ಥಿಗಳು, ಓರ್ವ ವಿದ್ಯಾರ್ಥಿ ತೃತೀಯ ಶ್ರೇಣಿ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಕಾಂತರಾಜು, ತಾಲೂಕು ಆಡಳಿತ, ಎಸ್‌ಟಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು, ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ಶುಭ ಹಾರೈಸಿದ್ದಾರೆ.

ವಿರಾಜಪೇಟೆ ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆ

ಅಧ್ಯಕ್ಷೆ ಸೇರಿ ಬಿಜೆಪಿಯ ಸದಸ್ಯರು ಗೈರು; ಪ್ರತಿಪಕ್ಷ ಆಕ್ರೋಶ



ವಿರಾಜಪೇಟೆ, ಮೇ 26– ವಿರಾಜಪೇಟೆ ಪಟ್ಟಣ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಆಡಳಿತ ಪಕ್ಷದ ಸದಸ್ಯರ ವಿರುದ್ಧ ಪ್ರತಿಪಕ್ಷದ ಸದಸ್ಯರು ಧಿಕ್ಕಾರ ಕೂಗಿ ಪ್ರತಿಭಟಿಸಿದ ಪ್ರಸಂಗ ಎದುರಾಯಿತು. ಗುರುವಾರ ಬೆಳಗ್ಗೆ 11 ಗಂಟೆಗೆ ಪಂಚಾಯಿತಿ ಪುರಭವನದಲ್ಲಿ ಪಪಂ ಸಭೆ ಕರೆಯಲಾಗಿತ್ತು. ಆದರೆ ಸಭೆಗೆ ಆಡಳಿತ ಪಕ್ಷ ಬಿಜೆಪಿಯ 8 ಸದಸ್ಯರು ಗೈರು ಆಗಿದ್ದ ಕಾರಣ, ಇವರ ನಡೆಯನ್ನು ಖಂಡಿಸಿದ ಪ್ರತಿಪಕ್ಷ ಸದಸ್ಯರು ನಿಯಮದಂತೆ ಸಭೆ ನಡೆಸುವಂತೆ ಮುಖ್ಯಾಧಿಕಾರಿ ಚಂದ್ರಕುಮಾರ್ ಅವರನ್ನು ಕೋರಿದರು. ಆದರೆ ಸಭೆ ನಡೆಸಲು ಸಾಧ್ಯವಿಲ್ಲ. ಅಧ್ಯಕ್ಷೆ ತುರ್ತಾಗಿ ಬೆಂಗಳೂರಿಗೆ ಹೋಗಿದ್ದಾರೆ. ಅದರಿಂದ ಸಭೆ ಮುಂದೂಡುವುದಾಗಿ ಅಧಿಕಾರಿ ತಿಳಿಸಿದರು. ಇದರಿಂದ ಆಕ್ರೋಶಗೊಂಡ ಪ್ರತಿಪಕ್ಷ ಸದಸ್ಯರು ಸಭೆ ಬಹಿಷ್ಕರಿಸಿ ಪಂಚಾಯಿತಿ ಎದುರು ದಿಕ್ಕಾರ ಕೂಗಿದರು.

ಈ ವೇಳೆ ಹಿರಿಯ ಸದಸ್ಯ ಎಸ್.ಹೆಚ್. ಮತೀನ್ ಮಾತನಾಡಿ, ನಿಯಮದಂತೆ ಸಭೆ ನಡೆಸಬೇಕು. ಪಟ್ಟಣ ವ್ಯಾಪ್ತಿಯಲ್ಲಿ ಹಲವು ಸಮಸ್ಯೆಗಳಿದ್ದು, ಈಗಾಗಲೇ ಮಳೆಯ ಮುನ್ಸೂಚನೆ ಬಗ್ಗೆ ಚರ್ಚಿಸಬೇಕಾಗಿದೆ. ಆಡಳಿತ ಪಕ್ಷದವರಿಗೆ ಪಟ್ಟಣದ ಅಭಿವೃದ್ಧಿ ಬೇಡವಾಗಿದೆ. ಸಭೆಗೆ ಬಾರದಿದ್ದವರು ಏನನ್ನು ಮಾಡಲು ಸಾಧ್ಯ, ಚುನಾಯಿತರಾಗಿ ಬಂದ ಮೇಲೆ ಜನರು ನಮ್ಮನ್ನು ಕೇಳುತ್ತಾರೆ. ಅವರ ಸಮಸ್ಯೆಗಳನ್ನು ಬಗೆಹರಿಸುವುದು ನಮ್ಮ ಕರ್ತವ್ಯವಾಗಿದೆ. ಅದರಿಂದ ಸಭೆ ನಡೆಸುವಂತೆ ಮುಖ್ಯಾಧಿಕಾರಿಯನ್ನು ಒತ್ತಾಯಿಸಿದರೂ ಸಭೆಯನ್ನು ಮುಂದೂಡಿದ್ದಾರೆ ಎಂದು ಅಧಿಕಾರಿ ವಿರುದ್ಧ ಹರಿಹಾಯ್ದರು.

ಪ್ರತಿಪಕ್ಷದ ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿ ನಿಗದಿಯಂತೆ ಸಮಯ ಕಳೆದರೂ ಆಡಳಿತ ಪಕ್ಷದ ಅಧ್ಯಕ್ಷರು, ಉಪಾಧ್ಯಕ್ಷರು, ಸ್ಥಾಯಿ ಸಮಿತಿ ಸೇರಿದಂತೆ ಇತರ ಸದಸ್ಯರುಗಳು ಸಭೆಗೆ ಬಾರದಿರುವುದು ಉತ್ತಮ ಬೆಳವಣಿಗೆಯಲ್ಲ. ನಿಯಮದಂತೆ ಇಂದಿನ ಸಭೆಗೆ ಇಲ್ಲಿರುವ ಓರ್ವ ಸದಸ್ಯರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸಭೆ ನಡೆಸುವಂತೆ ಸಲಹೆ ನೀಡಿದರಲ್ಲದೆ, ನಾವು 8 ಸದಸ್ಯರಿದ್ದು ಕೋರಂ ಇದೆ ಹಾಗೂ ಸಭೆಯಲ್ಲಿ ಪಟ್ಟಣದ ಸಮಸ್ಯೆಗಳ ಬಗ್ಗೆ ಹಾಗೂ ಅಯ್ಯಪ್ಪ ಬೆಟ್ಟ ಬಿರುಕು ಬಿಟ್ಟಿರುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಲು ಸಭೆಯಲ್ಲಿ ಚರ್ಚಿಸಲು ಅನೇಕ ವಿಚಾರಗಳಿವೆ. ಇದನ್ನು ಅರಿಯದ ಬಿಜೆಪಿಯ ಸದಸ್ಯರು ಸಭೆಗೆ ಗೈರು ಆಗಿರುವುದು ಜನರೇ ಅವರಿಗೆ ತಕ್ಕಪಾಠ ಕಲಿಸಲಿದ್ದಾರೆ. ಈ ಸಂಬಂಧ ಜಿಲ್ಲಾಧಿಕಾರಿಗೆ ದೂರು ನೀಡುವುದಾಗಿ ಹೇಳಿದರು.

ಸದಸ್ಯ ರಂಜಿ ಪೂಣಚ್ಚ ಮಾತನಾಡಿ, ಪಟ್ಟಣದ ಎಲ್ಲಾ ಕಡೆಗಳಲ್ಲಿ ಚರಂಡಿ ಕೊಳೆತು ನಾರುತ್ತಿದೆ, ನೀರಿನ ಪೂರೈಕೆ ಸೂಕ್ತವಾಗಿಲ್ಲ, ರಸ್ತೆಗಳು ದುಸ್ಥಿತಿಯಲ್ಲಿದೆ. ಹೀಗಿರುವಾಗ ಆಡಳಿತ ನಡೆಸುವವರ ವರ್ತನೆ ಸರಿಯಲ್ಲ. ಇವರು ರಾಜಿನಾಮೆ ನೀಡಿ ಹೊರ ಹೋಗಲಿ ನಾವು ಅಧಿಕಾರ ನಡೆಸುತ್ತೇವೆ ಎಂದರಲ್ಲದೆ, ನಂತರ 'ಮಿತ್ರ'ನೊಂದಿಗೆ ಮಾತನಾಡಿ, ಇಂದು ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ನಡೆಯಬೇಕಿತ್ತು. ಆದರೆ ಇಂದು ಅಧ್ಯಕ್ಷ ಸ್ಥಾನ ಪ್ರತಿಪಕ್ಷದ ಪಾಲಾಗುವುದು ನಿಶ್ಚಿತವಾಗಿದ್ದರಿಂದ ಸೋಲನ್ನು ಅರಗಿಸಿಕೊಳ್ಳಲಾಗದೆ ಬಿಜೆಪಿ ಸದಸ್ಯರು ಸಭೆಗೆ ಬರಲಿಲ್ಲ. ಪಟ್ಟಣದ ಅಭಿವೃದ್ಧಿ ಗ್ರಾಮಗಳಿಗಿಂತ ಕಡೆಯಾಗಿದೆ. ಸಭೆ ನಡೆಸದೆ ಅಭಿವೃದ್ಧಿ ಚಿಂತನೆ ಮಾಡದೆ ಆಡಳಿತರೂಢ ಬಿಜೆಪಿ ನುಣುಚಿಕೊಳ್ಳುತ್ತಿರುವುದು ವಿಷಾದನೀಯ ಎಂದರು.

ಸದಸ್ಯ ಮುಹ್ಮದ್ ರಾಫಿ ಮಾತನಾಡಿ, ಪಂಚಾಯಿತಿ ಆಡಳಿತ ನಿಂತ ನೀರಾಗಿದೆ. ಅಭಿವೃದ್ಧಿ ಶೂನ್ಯವಾಗಿದೆ. ಮೂರು ತಿಂಗಳಿಂದ ಮಾಸಿಕ ಕಲಾಪ ನಡೆಸಿಲ್ಲ ಆದರೆ ಇಂದಿನ ಸಭೆಗೂ ಆಡಳಿತ ಪಕ್ಷದವರು ಗೈರಾಗಿರುವುದು ಉತ್ತಮ ನಡತೆಯಲ್ಲ ಎಂದರು. ಸದಸ್ಯರಾದ ರಜನಿಕಾಂತ್, ಅಗಸ್ಟಿನ್ ಬೆನ್ನಿ ಮಾತನಾಡಿದರು. ಎಂ.ಕೆ.ದೇಚಮ್ಮ, ಫಸಿಹಾ ತಬಸಮ್, ಅಬ್ದುಲ್ ಜಲೀಲ್, ಅಭಿಯಂತರ ಹೇಮ್‌ಕುಮಾರ್ ಪಂಚಾಯಿತಿ ಸಿಬ್ಬಂದಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಕಾಡುಹಂದಿಗಳಿಗೆ ಗುಂಡಿಕ್ಕಲು ಕೇರಳ ಸರ್ಕಾರ ಆದೇಶ

ಕರ್ನಾಟಕದಲ್ಲಿ 2017ರಿಂದ ಈ ಕಾನೂನು ಜಾರಿಯಲ್ಲಿದೆ

- ಗುಂಡಿಕ್ಕುವ ಮುನ್ನ ಅರಣ್ಯ ಇಲಾಖೆ ಅನುಮತಿ ಬೇಕು
- ಇಲಾಖೆಯವರೇ ರಸಾಯನಿಕ ವಸ್ತು ಬಳಸಿ ಕೊಲ್ಲಬಹುದು

ಮಡಿಕೇರಿ,ಮೇ 26– ಕೊಡಗು ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಕಾಡು ಹಂದಿಗಳ ಉಪಟಳ ಹೆಚ್ಚಿದ್ದು, ಕೃಷಿಕರು ಭತ್ತದ ಗದ್ದೆಗಳನ್ನು ಪಾಳು ಬಿಡುವಂತಾಗಿದೆ. ಪರಿಣಾಮ ಸಾವಿರಾರು ಎಕರೆ ಭತ್ತ ಬೆಳೆಯುತ್ತಿದ್ದ ಗದ್ದೆಗಳು ಇದೀಗ ಬರಡು ಭೂಮಿಯಂತಾಗಿದೆ.



ಕೇರಳ ಸರಕಾರ ರೈತರು ಮತ್ತು ಬೆಳೆಗಾರರ ಕೃಷಿ ಫಸಲು ನಷ್ಟ ಉಂಟು ಮಾಡುತ್ತಿರುವ ಕಾಡು ಹಂದಿಗಳಿಗೆ ಗುಂಡಿಕ್ಕಲು ಆದೇಶ ನೀಡಿದ್ದು, ಇದು ಅಲ್ಲಿನ ಕೃಷಿಕರಿಗೆ ವರದಾನವಾಗಿ ಪರಿಣಮಿಸಿದೆ.

ಕರ್ನಾಟಕ ರಾಜ್ಯದಲ್ಲೂ 2017ರಲ್ಲೇ ಸರಕಾರ ಕೃಷಿ ಫಸಲು ನಷ್ಟ ಮಾಡುವ ಕಾಡು ಹಂದಿಗಳಿಗೆ ಗುಂಡಿಕ್ಕಲು ಆದೇಶ ನೀಡಿದ್ದು, ಪ್ರಸ್ತುತ ಜಾರಿಯಲ್ಲಿದೆ ಎಂದು ವಿರಾಜಪೇಟೆ ಕ್ಷೇತ್ರ ಶಾಸಕ, ಸರಕಾರಿ ಭೂಮಿ ಸಂರಕ್ಷಣಾ ಸಮಿತಿ ಅಧ್ಯಕ್ಷ ಕೆ.ಜಿ. ಬೋಪಯ್ಯ ಮಾಹಿತಿ ನೀಡಿದ್ದಾರೆ. ಬೆಳೆ ಮತ್ತು ಕೃಷಿ ನಷ್ಟ ಮಾಡುತ್ತಿರುವ ಕಾಡು ಹಂದಿಗಳಿಗೆ ಗುಂಡು ಹೊಡೆಯುವ ಸಂದರ್ಭ ಅರಣ್ಯ ಇಲಾಖೆಗೆ ಮಾಹಿತಿ ನೀಡಬೇಕು ಎಂಬ ನಿಯಮ ಇದೆ. ಅರಣ್ಯ ಇಲಾಖೆ ಸ್ಥಳ ಮಹಜರು ನಡೆಸಿ ಸೂಕ್ತ ಸ್ಥಳದಲ್ಲಿ ಆ ಕಾಡು ಹಂದಿಯನ್ನು ರಾಸಾಯನಿಕ ಬಳಸಿ ಗುಂಡಿ ತೆಗೆದು ಹೂತು ಹಾಕಬೇಕು ಎಂಬ ನಿಯಮವೂ ಇದೆ ಎಂದು ಶಾಸಕ ಬೋಪಯ್ಯ ಹೇಳಿದರು.

ಶಾಸಕ ಅಪ್ಪಚ್ಚು ರಂಜನ್ ಮಾಹಿತಿ ನೀಡಿ, ಕೊಡಗು ಜಿಲ್ಲೆಯಲ್ಲಿಯೂ ಕೃಷಿ ಮತ್ತು ಬೆಳೆ ನಷ್ಟ ಮಾಡುವ ಕಾಡು ಹಂದಿಗಳಿಗೆ ಗುಂಡಿಕ್ಕುವ ಅವಕಾಶ ಇದೆ. ಕಾಡು ಹಂದಿಗಳಿಂದ ನಷ್ಟಕ್ಕೆ ತುತ್ತಾಗುವ ಬೆಳೆಗಾರರು ಮತ್ತು ರೈತರಿಗೆ ತೊಂದರೆ ನೀಡದಂತೆ ಅರಣ್ಯಾಧಿಕಾರಿಗಳಿಗೆ ನಿರ್ದೇಶನವನ್ನೂ ನೀಡಲಾಗಿದೆ. ಅರಣ್ಯ ಅಧಿಕಾರಿಗಳು ಕೂಡ ಸೂಕ್ತವಾಗಿ ಸ್ಪಂದಿಸುತ್ತಿದ್ದಾರೆ ಎಂದರು.

ಜೆಸಿಬಿಗೆ ಸಿಲುಕಿ ಕಾರ್ಮಿಕ ಸಾವು

ಮಡಿಕೇರಿ,ಮೇ 26– ಬ್ರೇಕ್ ವಿಫಲಗೊಂಡು ಹಿಮ್ಮುಖವಾಗಿ ಚಲಿಸಿದ ಜೆಸಿಬಿ ಅಡಿಗೆ ಸಿಲುಕಿ ಕಾರ್ಮಿಕನೊಬ್ಬ ಮೃತಪಟ್ಟ ಘಟನೆ ಮಡಿಕೇರಿ ಸಮೀಪದ ಕೂಟುಹೊಳೆ ಬಳಿ ನಡೆದಿದೆ. ಹಾಸನ ಮೂಲದ ಕಾರ್ಮಿಕ ಸಂತೋಷ್(22) ಮೃತಪಟ್ಟ ದುರ್ದೈವಿಯಾಗಿದ್ದಾರೆ.



ಕೂಟುಹೊಳೆ ಸಮೀಪ ವ್ಯಕ್ತಿಯೊಬ್ಬರ ತೋಟದಲ್ಲಿ ಜೆಸಿಬಿ ಕೆಲಸ ನಿರ್ವಹಿಸಲಾಗುತ್ತಿತ್ತು. ಈ ವೇಳೆ ಜೆಸಿಬಿಯ ಬ್ರೇಕ್ ವಿಫಲಗೊಂಡು ಇಳಿಜಾರಿನಲ್ಲಿ ಹಿಮ್ಮುಖವಾಗಿ ಚಲಿಸಿದೆ ಈ ಸಂದರ್ಭ ಕಾರ್ಮಿಕ ಸಂತೋಷ್ ಜೆಸಿಬಿ ಅಡಿಗೆ ಸಿಲುಕಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ತೀವ್ರತೆಗೆ ಕಾರ್ಮಿಕ ಸಂತೋಷ್ ಅವರ ಒಂದು ಕಾಲು ಸಂಪೂರ್ಣ ದೇಹದಿಂದ ಬೇರ್ಪಟ್ಟಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಮಹಜರು ನಡೆಸಿ ಮೃತದೇಹವನ್ನು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ. ಈ ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಎಸ್‌ಎಸ್‌ಎಲ್‌ಸಿ: ಕರಿಕೆ ಶಾಲೆ ವಿದ್ಯಾರ್ಥಿನಿ ಟಿ.ಎಸ್.ಶ್ರೀಷ್ಮ ಪ್ರಥಮ



ಮಡಿಕೇರಿ ಮೇ 26– 2021–22 ನೇ ಶೈಕ್ಷಣಿಕ ಸಾಲಿನ 10ನೇ ತರಗತಿಯ ಪರೀಕ್ಷೆಯಲ್ಲಿ ಕರಿಕೆಯ ಎಳ್ಳುಕುಚ್ಚಿ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಟಿ.ಎಸ್.ಶ್ರೀಷ್ಮ ಶೇ.95.68 (598) ಅಂಕಗಳೊಂದಿಗೆ ಶಾಲೆಗೆ ಪ್ರಥಮ ಸ್ಥಾನ ಗಳಿಸಿದ್ದಾಳೆ.

ಕನ್ನಡ 124, ಇಂಗ್ಲಿಷ್ 92, ಹಿಂದಿ 86, ಗಣಿತ 99, ವಿಜ್ಞಾನ 97 ಮತ್ತು ಸಮಾಜ ವಿಜ್ಞಾನ 100 ಅಂಕಗಳನ್ನು ಪಡೆದಿದ್ದಾಳೆ. ಟಿ.ಆರ್.ಶ್ರೀನಿವಾಸ್ ಹಾಗೂ ಸುಜಾತ ದಂಪತಿ ಪುತ್ರಿ.

ನಾಳೆ ಅಮೃತ ಭಾರತಿಗೆ ಕನ್ನಡದ ಆರತಿ

ಮಡಿಕೇರಿ ಮೇ 26–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಮೇ 28 ರಂದು ಬೆಳಗ್ಗೆ 11 ಗಂಟೆಗೆ ನಗರದ ಕ್ರಿಸ್ಟಲ್ ಕೋರ್ಟ್‌ನಲ್ಲಿ ಅಮೃತ ಭಾರತಿಗೆ ಕನ್ನಡದ ಆರತಿ ಕಾರ್ಯಕ್ರಮ ನಡೆಯಲಿದೆ.

ಮೇ 28 ರಂದು ಬೆಳಗ್ಗೆ 9.30 ಗಂಟೆಗೆ ನಗರದ ಗಾಂಧಿ ಮೈದಾನದಲ್ಲಿರುವ ಗಾಂಧಿ ಪ್ರತಿಮೆಗೆ ಗಣ್ಯರಿಂದ ಪುಷ್ಪಾರ್ಚನೆ ನೆರವೇರಿಸಿ, ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಕ್ರಿಸ್ಟಲ್ ಕೋರ್ಟ್ ಸಭಾಂಗಣದಲ್ಲಿ ಸಮಾವೇಶಗೊಳ್ಳಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಕೆ.ಜಿ.ಬೋಪಯ್ಯ, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ರವಿಕುಶಾಲಪ್ಪ, ಸಂಸದ ಪ್ರತಾಪ್‌ಸಿಂಹ, ಶಾಸಕರಾದ ವೀಣಾ ಅಚ್ಚಯ್ಯ, ಎಸ್.ಎಲ್.ಬೋಜೇಗೌಡ, ಸುಜಾ ಕುಶಾಲಪ್ಪ, ಆಯನೂರು ಮಂಜುನಾಥ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಎಸ್‌ಪಿ ಎಂ.ಎ.ಅಯ್ಯಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

ಮಡಿಕೇರಿ ಬಡಾವಣೆಗಳಿಗೆ ಕಲುಷಿತ ನೀರು ಪೂರೈಕೆ

ಮನವಿ ಮಾಡಿದರೂ ಕ್ರಮ ಕೈಗೊಳ್ಳದ ಅಧಿಕಾರಿಗಳು: ನಾಗರಿಕರ ಆರೋಪ



ಮಡಿಕೇರಿ,ಮೇ 26– ಮಡಿಕೇರಿ ನಗರಸಭೆ ವ್ಯಾಪ್ತಿಗೆ ಒಳಪಡುವ ಕನ್ನಂಡ ಬಾಣೆ ಪಂಪ್‌ಹೌಸ್‌ನಿಂದ ನಗರದ ಹಲವು ವಾರ್ಡ್‌ಗಳಿಗೆ ಕಲುಷಿತ ನೀರು ಪೂರೈಕೆಯಾಗುತ್ತಿದೆ ಎನ್ನುವ ಆರೋಪ ಕೇಳಿ ಬಂದಿದೆ. ವಾರ್ಡ್ ಸಂ.6ರಲ್ಲಿರುವ ಕನ್ನಂಡಬಾಣೆಯ ಪಂಪ್‌ಹೌಸ್‌ನ ಬಾವಿಯಿಂದ ಕನ್ನಂಡಬಾಣೆ, ಪುಟಾಣಿನಗರ, ದೇಚೂರು, ಪೊಲೀಸ್ ವಸತಿಗೃಹ, ಆಸ್ಪತ್ರೆ ಸೇರಿದಂತೆ ವಿವಿಧ ಬಡಾವಣೆಗಳಿಗೆ ಕಲುಷಿತ ನೀರು ಸರಬರಾಜಾಗುತ್ತಿದೆ. ಪಂಪ್‌ಹೌಸ್ ಸುತ್ತಮುತ್ತ ಇರುವ ಕೆಲವು ಮನೆಗಳ ಕಲ್ಮಶ ನೀರು ಜಲಮೂಲ ಸೇರುತ್ತಿದ್ದು, ಈ ಪ್ರದೇಶ ಸಂಪೂರ್ಣ ಕಾಡುಗಳಿಂದ ತುಂಬಿದ್ದು, ಕೊಳಚೆ ನೀರು ಪಂಪ್‌ಹೌಸ್ ಬಾವಿಗೆ ಸೇರುತ್ತಿದೆ ಎನ್ನಲಾಗುತ್ತಿದೆ.

ಪಂಪ್‌ಹೌಸ್‌ನ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಕೋಟ್ಯಾಂತರ ರೂ. ಹಣವನ್ನು ಖರ್ಚು ಮಾಡಲಾಗಿದೆ. ಆದರೂ ಯಾವುದೇ ನಿರ್ವಹಣೆ ಇಲ್ಲದೆ ಅಶುದ್ಧ ನೀರು ಜನರ ಪಾಲಾಗುತ್ತಿದೆ. ಕಲುಷಿತ ನೀರಿಗೆ ಆಲಮ್ ಹಾಗೂ ಬ್ಲೀಚಿಂಗ್ ಪೌಡರ್ ಹಾಕಿ ನೀರು ಸರಬರಾಜು ಮಾಡಲಾಗುತ್ತಿದೆ. ಈ ರೀತಿಯ ನೀರು ಸೇವನೆಯಿಂದ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಇದೆ ಎಂದು ಆತಂಕ ವ್ಯಕ್ತಪಡಿಸಿರುವ ಸ್ಥಳೀಯರು, ಮಳೆಗಾಲದಲ್ಲಿ ನೀರಿನೊಂದಿಗೆ ತ್ಯಾಜ್ಯ ಬರುತ್ತಿದ್ದು, ನೀರಿನ ಬಣ್ಣವೇ ಬದಲಾಗುತ್ತಿದೆ. ಈ ಬಗ್ಗೆ ಹಲವು ಬಾರಿ ನಗರಸಭೆಗೆ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಸುಮಾರು 70 ವರ್ಷಗಳ ಹಿಂದೆ ತೆರೆಯಲ್ಪಟ್ಟ ಪಂಪ್‌ಹೌಸ್‌ನ ಬಾವಿಯ ಅಭಿವೃದ್ಧಿಗೆ ಎಸ್‌ಎಸ್‌ಸಿ ಮುಕ್ತ ನಿಧಿ ಹಾಗೂ 2019–20ನೇ ಸಾಲಿನ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಲ್ಲಿ ಒಟ್ಟು ರೂ.23 ಲಕ್ಷ ವೆಚ್ಚ ಮಾಡಲಾಗಿದೆ.

ನಿಷ್ಕ್ರೀಯ ಯಂತ್ರ: ಶುದ್ಧ ಕುಡಿಯುವ ನೀರು ಪೂರೈಸುವ ದೃಷ್ಟಿಯಿಂದ ಒಂದು ವರ್ಷದ ಹಿಂದೆ ನಗರಸಭೆ ವತಿಯಿಂದ ನೀರು ಶುದ್ಧೀಕರಣ ಯಂತ್ರವನ್ನು ಅಳವಡಿಸಲಾಗಿದೆ. ಆದರೆ ಇಲ್ಲಿಯವರೆಗೆ ಯಾವುದೇ ಪೈಪ್‌ಲೈನ್ ಅಳವಡಿಸಿಲ್ಲ, ನಗರಸಭೆಯ ನಿರ್ಲಕ್ಷ್ಯದಿಂದ ಲಕ್ಷಾಂತರ ರೂ. ಬೆಲೆಯ ಯಂತ್ರ ನಿಷ್ಕ್ರೀಯವಾಗಿದೆ.

ಕಾಂಗ್ರೆಸ್ ಅಸಮಾಧಾನ: ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ನಗರಾಧ್ಯಕ್ಷ ಹಾಗೂ ಸ್ಥಳೀಯ ನಿವಾಸಿ ಕೆ.ಜಿ.ಪೀಟರ್ ಮಾತನಾಡಿ ಪ್ರಸ್ತುತ ದಿನಗಳಲ್ಲಿ ಮನೆಗಳ ಸಂಖ್ಯೆ ಹೆಚ್ಚಾಗಿದ್ದು, ಕಲುಷಿತ ನೀರು ಪಂಪ್‌ಹೌಸ್‌ನ ಜಲಮೂಲಕ್ಕೆ ಸೇರುತ್ತಿದೆ. ಸುಮಾರು 20 ಸಾವಿರಕ್ಕಿಂತಲೂ ಅಧಿಕ ಮಂದಿ ಈ ನೀರನ್ನು ಬಳಕೆ ಮಾಡುತ್ತಿದ್ದಾರೆ. ನೀರಿಗೆ ಆಲಮ್ ಮತ್ತು ಬ್ಲೀಚಿಂಗ್ ಪೌಡರ್ ಹಾಕಿ ಶುದ್ಧ ನೀರಿನಂತೆ ಸರಬರಾಜು ಮಾಡಲಾಗುತ್ತಿದೆ ಎಂದು ದೂರಿದರು. ಈ ಹಿಂದೆ ನಗರಸಭಾ ಅಧ್ಯಕ್ಷರು ಹಾಗೂ ಪೌರಾಯುಕ್ತರಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ವಿವಿಧ ಕಾಮಗಾರಿಯ ಹೆಸರಿನಲ್ಲಿ ಜನರ ಹಣವನ್ನು ಪೋಲು ಮಾಡುವ ಬದಲು ಜನರಿಗೆ ಶುದ್ಧ ಕುಡಿಯುವ ನೀರನ್ನು ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಿ ಎಂದು ಒತ್ತಾಯಿಸಿದರು.

ಅಧಿಕ ಮುಂಗಾರು ಪೂರ್ವ ಮಳೆ

ಹೆಚ್ಚುವರಿ ನೀರನ್ನು ತ.ನಾಡಿಗೆ ಬಿಡುಗಡೆ ಮಾಡಿದ ಕರ್ನಾಟಕ

ಬೆಂಗಳೂರು, ಮೇ 26– ಈ ವರ್ಷದ ಜನವರಿಯಿಂದ 132 ಪ್ರತಿಶತ ಅಧಿಕ ಪೂರ್ವ ಮುಂಗಾರು ಮಳೆ ಮತ್ತು ಉತ್ತಮ ನೈಋತ್ಯ ಮಾನ್ಸೂನ್ ಮತ್ತು ಹೆಚ್ಚುವರಿ



ಈಶಾನ್ಯ ಮಾನ್ಸೂನ್ ಬಿದ್ದಿರುವುದರಿಂದ ರಾಜ್ಯ ಜೂನ್ 2021ರಿಂದ ಮೇ 2022 ಜಲ ವರ್ಷಕ್ಕೆ ತಮಿಳುನಾಡಿಗೆ 100 ಟಿಎಂಸಿ ಅಡಿ ಹೆಚ್ಚುವರಿ ಕಾವೇರಿ ನೀರನ್ನು ಬಿಡುಗಡೆ ಮಾಡಿದೆ. ಕಾವೇರಿ ಜಲವಿವಾದಗಳ ನ್ಯಾಯಾಧಿಕರಣದ ಅಂತಿಮ ಆದೇಶದಂತೆ ಇಡೀ ಜಲ ವರ್ಷಕ್ಕೆ ಅಗತ್ಯವಿರುವ 177.25 ಟಿಎಂಸಿ ಅಡಿಯಷ್ಟು, ರಾಜ್ಯವು 277 ಟಿಎಂಸಿ ಅಡಿ ಬಿಡುಗಡೆ ಮಾಡಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ತಿಳಿಸಿವೆ. ಕಳೆದ ಜನವರಿಯಿಂದ ರಾಜ್ಯ ಸರಾಸರಿ 100 ಮಿಲಿ ಮೀಟರ್ ಗಿಂತ 231 ಮಿಲಿ ಮೀಟರ್ ಪೂರ್ವ ಮುಂಗಾರು ಮಳೆಯನ್ನು ಪಡೆದಿದೆ. ಕಳೆದ 50 ವರ್ಷಗಳಲ್ಲಿ ಅತ್ಯಧಿಕವಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಸಮಿತಿ ಮಾಜಿ ನಿರ್ದೇಶಕ ಡಾ. ಶ್ರೀನಿವಾಸ್ ರೆಡ್ಡಿ ಹೇಳಿದ್ದಾರೆ.

ರಾಜ್ಯಸಭೆ, ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಜೊತೆಗೆ ಕಾಂಗ್ರೆಸ್ ಮೈತ್ರಿ ಇಲ್ಲ


ಕಾರವಾರ, ಮೇ 26– ಮುಂಬರುವ ರಾಜ್ಯಸಭಾ ಚುನಾವಣೆ ಹಾಗೂ 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಜೊತೆಗೆ ಕಾಂಗ್ರೆಸ್ ಮೈತ್ರಿಯನ್ನು ವಿಪಕ್ಷ ನಾಯಕ ಸಿದ್ದರಾಮಯ್ಯ ಗುರುವಾರ ತಳ್ಳಿ ಹಾಕಿದ್ದಾರೆ.



ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಯಲ್ಲಿ 4ನೇ ಸ್ಥಾನಕ್ಕೆ ಮೂರು ಪಕ್ಷಗಳೂ ಮತಗಳ ಕೊರತೆ ಇರುವಂತೆಯೇ ಸಿದ್ದರಾಮಯ್ಯ ನೀಡಿರುವ ಹೇಳಿಕೆ ಮಹತ್ವ ಪಡೆದಿದೆ. ತಾನು ರಾಷ್ಟ್ರ ರಾಜಕಾರಣಕ್ಕೆ ಹೋಗಲ್ಲ, ರಾಜ್ಯ ರಾಜಕೀಯದಲ್ಲಿಯೇ ಸಕ್ರಿಯನಾಗಿರುವುದಾಗಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಜೆಡಿಎಸ್ ಜೊತೆಗೆ ಯಾವುದೇ ಸಂಬಂಧವಿರಲ್ಲ. ಚುನಾವಣೆ ಸಂದರ್ಭದಲ್ಲಿ ಜೆಡಿಎಸ್ ಜೊತೆಗೆ ಯಾವುದೇ ರಾಜಕೀಯ ಸಂಬಂಧ ಹೊಂದಲ್ಲ ಎಂದು ಸಿದ್ದರಾಮಯ್ಯ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಬಿಜೆಪಿಯ ನಿರ್ಮಲಾ ಸೀತಾರಾಮನ್, ಕೆಸಿ ರಾಮಮೂರ್ತಿ, ಕಾಂಗ್ರೆಸ್ ಪಕ್ಷದ ಜೈರಾಮ್ ರಮೇಶ್, ದಿವಂಗತ ಆಸ್ಕರ್ ಫರ್ನಾಂಡೀಸ್ ಅವರ ಅಧಿಕಾರ ಅವಧಿ ಜೂನ್ 30ಕ್ಕೆ ಮುಗಿಯುವುದರಿಂದ ಜೂನ್ 10ಕ್ಕೆ ಚುನಾವಣೆ ನಡೆಯಲಿದೆ. ಮೇ 31 ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ. ರಾಜ್ಯಸಭಾ ಚುನಾವಣೆಯಲ್ಲಿ ಗೆಲ್ಲಲು ಒಬ್ಬ ಅಭ್ಯರ್ಥಿಗೆ 45 ಮತಗಳ ಅಗತ್ಯವಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಬಿಜೆಪಿ ಎರಡು, ಕಾಂಗ್ರೆಸ್ ಒಂದು ಸ್ಥಾನದ ಸುಲಭವಾಗಿ ಗೆಲ್ಲಬಹುದಾಗಿದೆ, ಜೆಡಿಎಸ್ ಬಿಜೆಪಿ ಅಥವಾ ಕಾಂಗ್ರೆಸ್ ಪಕ್ಷದ ಬೆಂಬಲದಿಂದ ಒಂದರಲ್ಲಿ ಗೆಲುವು ಸಾಧಿಸಬಹುದಾಗಿದೆ. ಅದೇ ರೀತಿ ಬಿಜೆಪಿ ಅಥವಾ ಕಾಂಗ್ರೆಸ್ ನಾಲ್ಕನೇ ಸ್ಥಾನ ಗೆಲ್ಲಬೇಕಿದ್ದರೆ ಜೆಡಿಎಸ್ ಬೆಂಬಲ ಬೇಕಾಗಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಇಂದು ದಾವೋಸ್‌ನಿಂದ ಸಿಎಂ ವಾಪಸ್

ಬೆಂಗಳೂರು, ಮೇ 26– ನಾಳೆ ದಾವೋಸ್‌ನಿಂದ ಮುಖ್ಯಮಂತ್ರಿ ಬಸವರಾಜ



ಬೊಮ್ಮಾಯಿ ವಾಪಸಾಗಲಿದ್ದಾರೆ. ದುಬೈ ಮಾರ್ಗವಾಗಿ ಬೆಂಗಳೂರಿಗೆ ವಾಪಸಾಗಲಿದ್ದಾರೆ. ನಾಳೆ ಬೆಳಗ್ಗೆ 9.05 ಗಂಟೆಗೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಲಿದ್ದಾರೆ. ಮಧ್ಯಾಹ್ನ 12.30ಕ್ಕೆ ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳು ಸುದ್ದಿಗೋಷ್ಠಿ ನಡೆಸಲಿದ್ದಾರೆ. ವಿಶ್ವ ಆರ್ಥಿಕ ಶೃಂಗಸಭೆಯ ಫಲಶ್ರುತಿ ಬಗ್ಗೆ ಅವರು ಮಾಹಿತಿ ನೀಡಲಿದ್ದಾರೆ. ಕಳೆದ ಭಾನುವಾರ ಅವರು ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ಭಾಗವಹಿಸಲು ದಾವೋಸ್‌ಗೆ ಭೇಟಿ ನೀಡಿದ್ದರು. ರಾಜ್ಯಕ್ಕೆ ಬಂಡವಾಳ ಹರಿದುಬಂದಿರುವ ಬಗ್ಗೆ ಸಿಎಂ ಮಾಹಿತಿ ಹಂಚಿಕೊಳ್ಳಲಿದ್ದಾರೆ.

ಜ್ಞಾನವಾಪಿ ಮಸೀದಿ ಕೇಸ್: ಮೇ 30ಕ್ಕೆ ವಿಚಾರಣೆ ಮುಂದುವರಿಕೆ

ವಾರಣಾಸಿ: ಜ್ಞಾನವಾಪಿ–ಶೃಂಗಾರ್ ಗೌರಿ ಸಂಕೀರ್ಣ ನಿರ್ವಹಣೆಗೆ ಸಂಬಂಧಿಸಿದ ಕೇಸ್ ಕುರಿತು ಮುಸ್ಲಿಂ ಪರ ಇಂದು ವಿಚಾರಣೆ ನಡೆಸಿದ ಜಿಲ್ಲಾ ನ್ಯಾಯಾಲಯವು ಮುಂದಿನ ವಿಚಾರಣೆಯನ್ನು ಮೇ 30ಕ್ಕೆ ನಿಗದಿಪಡಿಸಿದೆ. ನಿರ್ವಹಣೆ ಕೇಸ್ ಕುರಿತು ಮುಸ್ಲಿಂ ವಕೀಲರ ಪರ ವಾದ ಇಂದು ಕೂಡಾ ಪೂರ್ಣಗೊಳ್ಳಲಿಲ್ಲ ಮುಂದಿನ ವಿಚಾರಣೆಯನ್ನು ಮೇ 30ಕ್ಕೆ ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಸರ್ಕಾರಿ ವಕೀಲ ರಾಣಾ ಸಂಜೀವ್ ಸಿಂಗ್ ತಿಳಿಸಿದ್ದಾರೆ. ಜ್ಞಾನವಾಪಿ–ಶೃಂಗಾರ್ ಗೌರಿ ಸಂಕೀರ್ಣ ನಿರ್ವಹಣಾ ಕೇಸಿನ ವಿಚಾರಣೆಯನ್ನು ಇಂದು ನಡೆಸಲು ಮೇ 24ರಂದು ಕೋರ್ಟ್ ನಿಗದಿಪಡಿಸಿತ್ತು. ಜ್ಞಾನವಾಪಿ ಮಸೀದಿ ಆವರಣದ ವಿಡಿಯೋ ಗ್ರಫಿ ಸಂಕೀರ್ಣ ವರದಿಗೆ ಹಿಂದೂ ಮತ್ತು ಮುಸ್ಲಿಂ ಕಡೆಯಿಂದ ಆಕ್ಷೇಪ ವ್ಯಕ್ತಪಡಿಸಲು 1ವಾರ ಸಮಯಾವಕಾಶ ಕೋರ್ಟ್ ನೀಡಿದೆ

ಒಂದನೇ ಪುಟದಿಂದ

ತೃತೀಯ ರಂಗದ ನೇತೃತ್ವ ವಹಿಸಿ...

ಹುನ್ನಾರ ನಡೆದಿದೆ. ನಾವು ಒಂದಾಗಿದ್ದರೆ, ಮುಂದೆ ನಮಗೆ ತೊಂದರೆ. ಯಾವುದೇ ರಾಜಕೀಯ ಲಾಭಕ್ಕಾಗಿ ಹೋರಾಟ ಮಾಡದೇ, ನಮ್ಮನ್ನು ನಾವು ಭದ್ರ ಮಾಡಿಕೊಳ್ಳಲು ತೃತೀಯ ರಂಗದ ಅವಶ್ಯಕತೆ ಇದೆ. ಈ ಹಿಂದೆ ಕಾಂಗ್ರೆಸ್, ಬಿಜೆಪಿ ಪಕ್ಷಗಳ ವಿರುದ್ಧ ಇತರ ಪಕ್ಷಗಳನ್ನು ಒಗ್ಗೂಡಿಸಿ, ಆಡಳಿತ ನಡೆಸಿದ ಅನುಭವ ನಿಮಗಿದೆ. ನೀವು ಮತ್ತೆ ತೃತೀಯ ರಂಗಕ್ಕೆ ಚಾಲನೆ ನೀಡಬೇಕಿದೆ. ಈಗಾಗಲೇ ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿರುವ ಡಿಎಂಕೆ, ತೃಣಮೂಲ, ಎಎಪಿ ಅಲ್ಲದೆ, ಸಮಾಜವಾದಿ ಪಕ್ಷ, ಎಡಪಂಥೀಯ ಪಕ್ಷಗಳ ಮುಖಂಡರ ಜೊತೆ ಸಮಾಲೋಚನೆ ನಡೆಸಿದ್ದೇನೆ. ಅವರೂ ಇದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ನೀವು ನಾಯಕತ್ವ ವಹಿಸಿಕೊಂಡು ತೃತೀಯ ರಂಗಕ್ಕೆ ಚಾಲನೆ ನೀಡಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಒಂದೇ ಸೂರಿನಡಿ ನಾವೆಲ್ಲ ಸ್ಪರ್ಧಿಸೋಣ ಎಂದು ಮನವಿ ಮಾಡಿದ್ದಾರೆ. ಇದಕ್ಕೆ ಸ್ಪಂದಿಸಿದ ಗೌಡರು ನೀವು ನಡೆಸುತ್ತಿರುವ ಸಂಘಟನೆಗೆ ನನ್ನ ಬೆಂಬಲವಿದೆ. ಎಲ್ಲರನ್ನೂ ಒಗ್ಗೂಡಿಸಿ, ಮುಂದಿನ ದಿನಗಳಲ್ಲಿ ಒಂದೆಡೆ ಸೇರಿ, ಚರ್ಚೆ ಮಾಡೋಣ ಎಂದಿದ್ದಾರೆ. ಮಾತುಕತೆ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಉಪಸ್ಥಿತರಿದ್ದರು.

ಉಜ್ವಲ್ ಹಿಂದೂಸ್ತಾನ್ ಬೇಕಿದೆ

ಹಲವು ಸಂಪನ್ಮೂಲಗಳಿದ್ದರೂ ಇವತ್ತಿಗೂ ಹಲವು ಸಮಸ್ಯೆ ಬಗ್ಗೆ ಚರ್ಚೆಯಾಗಿಲ್ಲ. ದೇಶದಲ್ಲಿ ರೈತರು, ದಲಿತರು, ಆದಿವಾಸಿಗಳು ಕಷ್ಟದಲ್ಲಿದ್ದಾರೆ. ಭರವಸೆಗಳನ್ನು ಸಾಕಷ್ಟು ಕೊಡಬಹುದು. ಆದರೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ. ಯುವಕರಿಗೆ ಉದ್ಯೋಗ ಕೊಟ್ರಾ?. ದೇಶದಲ್ಲಿ ಎಲ್ಲವೂ ಸಮಸ್ಯೆಗಳೇ ಎಂದು ಪ್ರಧಾನಿ ಮೋದಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ದೇಶದಲ್ಲಿ ಅತೀ ಶೀಘ್ರದಲ್ಲೇ ಬದಲಾವಣೆಯಾಗಲಿದೆ. ಎರಡು, ಮೂರು ತಿಂಗಳು ಕಾಯಿರಿ ಎಂದರು. ಕರ್ನಾಟಕದ ರಾಜಕೀಯ ಕೂಡ ಗೊತ್ತಿದೆ. ಕರ್ನಾಟಕದಲ್ಲಿ ಸಾರ್ವತ್ರಿಕ ವಿಧಾನಸಭೆ ಚುನಾವಣೆ ಬರುತ್ತಿದೆ. ಕುಮಾರಸ್ವಾಮಿ ಸಿಎಂ ಆಗಿದ್ದವರು. ಭಾರತ ಬದಲಿಸುವ ಕೆಲಸ ಆಗಲಿದೆ. ಆ ನಿಟ್ಟಿನಲ್ಲಿ ನಾವು ಪ್ರಯತ್ನ ನಡೆಸುತ್ತಿದ್ದೇವೆ ಎಂದರು. ದೇಶದ ಸರ್ಕಾರ, ಸಮಸ್ಯೆಗಳ ಬಗ್ಗೆ ದೇವೇಗೌಡರ ಜೊತೆ ಸುದೀರ್ಘ ಚರ್ಚೆ ಮಾಡಿದ್ದೇವೆ. ದೇಶದಲ್ಲಿ ಬದಲಾವಣೆ ತರಬೇಕಿದೆ ಎಂದರು.

ಮತ್ತೊಂದು ಹಳೆಯ ಕಟ್ಟಡ

ಈ ನಡುವೆ ತ್ರಿಪುರ ಭೈರವಿ ಮಠ ಹಾಗೂ ಬಟ್ಟೆ ಅಂಗಡಿ ಮಾಲೀಕರ ನಡುವೆ ನ್ಯಾಯಾಲಯದಲ್ಲಿ ಭೂ–ವ್ಯಾಜ್ಯ ನಡೆಯುತ್ತಿರುವುದರಿಂದ ಕಟ್ಟಡದ ದುರಸ್ಥಿ ಮಾಡಲು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಇದರಿಂದಾಗಿ ಕಳೆದ ಕೆಲವು ದಿನಗಳಿಂದ ಸುರಿದ ದಾರಾಕಾರ ಮಳೆಯಿಂದಾಗಿ ಕಟ್ಟಡದ ಗೋಡೆ ಶೀತಕ್ಕೆ ಒಳಗಾಗಿ ಮತ್ತಷ್ಟು ಸಡಿಲಗೊಂಡಿತ್ತು. ಮುಂಜಾನೆ 2.34ರಿಂದ 2.36 ನಡುವೆ ಕಟ್ಟಡದ ಒಂದು ಭಾಗ ನೆಲಕ್ಕುರುಳಿದೆ.

ತಪ್ಪಿದ ಅನಾಹುತ: ಜನ ಮತ್ತು ವಾಹನ ಸಂಚಾರವಿಲ್ಲದ ವೇಳೆಯಲ್ಲಿ ಈ ವಾಣಿಜ್ಯ ಕಟ್ಟಡ ಕುಸಿದು ಬಿದ್ದಿದ್ದು, ಇದರಿಂದ ಭಾರಿ ಅನಾಹುತವೊಂದು ತಪ್ಪಿದೆ. ಹಗಲಿನ ವೇಳೆ ಈ ರಸ್ತೆ ಜನದಟ್ಟಣೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಾಹನ ಸಂಚಾರದಿಂದ ಕೂಡಿರುತ್ತದೆ. ಕಿರಿದಾದ ಅಡ್ಡ ರಸ್ತೆಯಲ್ಲಿ ಸಣ್ಣ ಸಣ್ಣ ವಾಣಿಜ್ಯ ಮಳಿಗೆಗಳಿದ್ದು, ಜನ ಸಂಚಾರ ಕೂಡ ಅಧಿಕವಾಗಿರುತ್ತದೆ. ಮುಂಜಾನೆ ಕಟ್ಟಡದ ಭಾಗ ಕುಸಿದಿರುವುದರಿಂದ ಯಾವುದೇ ಹಾನಿ ಸಂಭವಿಸಿಲ್ಲದಿರುವುದು ಕಟ್ಟಡ ಮಾಲೀಕರೂ ಹಾಗೂ ಅಧಿಕಾರಿಗಳು ನಿಟ್ಟುಸಿರು ಬಿಡುವಂತೆ ಮಾಡಿದೆ. ಕಟ್ಟಡ ಕುಸಿತದ ಹಿನ್ನೆಲೆಯಲ್ಲಿ ಶಾಸಕ ನಾಗೇಂದ್ರ, ಪಾಲಿಕೆ ಆಯುಕ್ತ ಜಿ.ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ಇನ್ನಿತರರ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸಂತೇಪೇಟೆ ರಸ್ತೆ ಶಿಥಿಲಗೊಂಡ ಕಟ್ಟಡದ ಮಾಹಿತಿ ಪಡೆದರು. ಈ ವೇಳೆ ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್ ಇನ್ನಿತರರಿದ್ದರು.

200 ಕಟ್ಟಡ ಗುರುತಿಸಲಾಗಿದೆ

ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, ಮೈಸೂರು ನಗರದಲ್ಲಿ ಶಿಥಿಲಾವಸ್ಥೆಯಲ್ಲಿರುವ ಒಟ್ಟು 200 ಕಟ್ಟಡಗಳನ್ನು ಗುರುತಿಸಲಾಗಿದೆ. ಮಳೆ ಹಿನ್ನೆಲೆಯಲ್ಲಿ ಆ ಕಟ್ಟಡಗಳು ಕುಸಿಯುವ ಆತಂಕವೂ ಇರುವುದರಿಂದ ಆ ಕಟ್ಟಡಗಳ ಮಾಲೀಕರಿಗೆ ನೋಟಿಸ್ ನೀಡಿ, ಕಟ್ಟಡ ತೆರವು ಮಾಡುವಂತೆ ಸೂಚಿಸಲಾಗಿದೆ. ಶಿಥಿಲಾವಸ್ಥೆಯಿಂದ ಕೂಡಿರುವ ಕಟ್ಟಡಗಳಿಂದ ಏನಾದರೂ ಅನಾಹುತ ಸಂಭವಿಸಿದರೆ, ಆಯಾ ಕಟ್ಟಡಗಳ ಮಾಲೀಕರೇ ಹೊಣೆಗಾರರಾಗುವುದಾಗಿಯೂ ಎಚ್ಚರಿಕೆ ನೀಡಲಾಗಿದೆ ಎಂದರು.

ಸನ್ನಡತೆ ಆಧಾರದ ಮೇಲೆ ಮೈಸೂರು ಜೈಲಿಂದ 12 ಮಂದಿ ಬಿಡುಗಡೆ

ಇನ್ನು ಮುಂದೆ ಸಮಾಜದಲ್ಲಿ ಉತ್ತಮರಾಗಿ ಜೀವನ ನಡೆಸಿ: ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಸಲಹೆ

ಮೈಸೂರು,ಮೇ 26(ಎಂಟಿವೈ)– ಸರ್ಕಾರದ ಆದೇಶದ ಮೇರೆಗೆ ಮೈಸೂರಿನ ಕೇಂದ್ರ ಕಾರಾಗೃಹದಿಂದ ಸನ್ನಡತೆ ಆಧಾರದ ಮೇಲೆ 12 ಮಂದಿ ಕೈದಿಗಳನ್ನು ಗುರುವಾರ ಬೆಳಗ್ಗೆ ಬಿಡುಗಡೆ ಮಾಡಲಾಯಿತು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಅವರು ಸನ್ನಡತೆಯ ಆಧಾರದಲ್ಲಿ ಬಿಡುಗಡೆಗೆ ಗುರುತಿಸಲ್ಪಟ್ಟಿದ್ದ 12 ಮಂದಿ ಕೈದಿಗಳಿಗೆ ಬಿಡುಗಡೆ ಪತ್ರ ವಿತರಿಸಿ, ಸಮಾಜದಲ್ಲಿ ಇನ್ನು ಮುಂದೆ ಗೌರವಯುತವಾಗಿ ಬದುಕುವಂತೆ ಸಲಹೆ ನೀಡಿ, ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ದೇವರಾಜ ಭೂತೆ ಅವರು ಮಾತನಾಡಿ, ಯಾವುದೋ ಸಂದರ್ಭಕ್ಕೆ ಒಳಗಾಗಿ, ಕ್ಷಣಿಕ ದುಡುಕಿನಿಂದ ಮಾಡಿದ ತಪ್ಪಿನಿಂದ ಕಾರಾಗೃಹ ಶಿಕ್ಷೆಗೆ ಗುರಿಯಾಗಬೇಕಾದ ಅನಿವಾರ್ಯತೆಗೆ ಹಲವು ಮಂದಿ ಸಿಲುಕಿದ್ದಾರೆ. ಶಿಕ್ಷಾ ಅವಧಿಯಲ್ಲಿ ಕಾರಾಗೃಹದಲ್ಲಿ ತೋರಿದ ಸನ್ನಡತೆಯನ್ನು ಗುರುತಿಸಿ ಇಂದು 12 ಜನರನ್ನು ಬಿಡುಗಡೆ ಮಾಡಲಾಗಿದೆ. ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ವೇಳೆ ಕೈದಿಗಳನ್ನು ಅವರಿಗೆ ನೀಡಿದ್ದ ಸಂಖ್ಯೆಯ ಮೂಲಕ



ಮೈಸೂರು ಕೇಂದ್ರ ಕಾರಾಗೃಹದಿಂದ ಸನ್ನಡತೆ ಆಧಾರದ ಮೇಲೆ ಬಿಡುಗಡೆಯಾದವರಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಹಾಗೂ ಇನ್ನಿತರರು ಬೀಳ್ಕೊಟ್ಟರು.

ಕರೆಯುತ್ತಿದ್ದೆವು. ಇದೀಗ ಬಿಡುಗಡೆಯಾಗಿರುವವರನ್ನು ಅವರ ನೈಜ ಹೆಸರಿನಿಂದ ಕರೆಯುತ್ತಿದ್ದೇವೆ. ಇನ್ನು ಮುಂದೆ ನೀವು ಸಮಾಜಕ್ಕೆ ಮಾದರಿ ನಾಗರಿಕರಾಗಿ ಬದುಕಬೇಕು ಎಂದು ಕಿವಿಮಾತು ಹೇಳಿದರು.

ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ ಮಾತನಾಡಿ, ಸರ್ಕಾರದ ಹಾಗೂ ಕಾರಾಗೃಹದ ನಿಯಮಗಳಂತೆ ಉತ್ತಮ ನಡೆ, ವರ್ತನೆ ತೋರಿದ ಕೈದಿಗಳನ್ನು ಬಿಡುಗಡೆಗೊಳಿಸಲಾಗಿದೆ. ಇಂದು ಬಿಡುಗಡೆಯಾದವರು ಇತರರಿಗೆ ಮಾದರಿಯಾಗಬೇಕು. ಕೈದಿಗಳಲ್ಲಿ ಹಲವರು ದುಡುಕಿನಿಂದ ಮಾಡಿದ ಕೃತ್ಯಗಳಿಂದ ಶಿಕ್ಷೆ ಅನುಭವಿಸುವಂತಾಗಿದೆ. ಕಾರಾಗೃಹದಿಂದ ಬಿಡುಗಡೆಯಾದ ಕೈದಿಗಳು ಇನ್ನು ಮುಂದೆ ಸಮಾಜದಲ್ಲಿ ಯಾವುದೇ ಕಪ್ಪುಚುಕ್ಕೆಗೆ ಗುರಿಯಾಗದಂತೆ ಬದುಕಬೇಕು. ಕಾರಾಗೃಹದಲ್ಲಿದ್ದಷ್ಟು ದಿನ ತಪ್ಪಿನ ಅರಿವಾಗಿದೆ, ಅವರ ಮನಃಪರಿವರ್ತನೆಯಾಗಿದೆ. ಜೀವನದಲ್ಲಿ ಉತ್ತಮರಾಗಿ ಬಾಳಿ ಎಂದು ಸಲಹೆ ನೀಡಿದರು.

ಬಿಡುಗಡೆ ಭಾಗ್ಯಶಾಲಿಗಳು

ಜೀವಾವಧಿ ಶಿಕ್ಷೆಗೊಳಗಾಗಿ ಮಾಫಿ ಸೇರಿದಂತೆ 14 ವರ್ಷ ಶಿಕ್ಷೆ ಪೂರೈಸಿದ ಮಂಡಿ ಮೊಹಲ್ಲಾದ ಮನೋಹರ, ಕೈಲಾಸಪುರಂನ ಅಫ್ರೋ ಪಾಷ, ವಿದ್ಯಾರಣ್ಯಪುರಂನ ರಂಗಸ್ವಾಮಿ, ತಿ.ನರಸೀಪುರ ತಾಲೂಕಿನ ಬೇವಿನಹಳ್ಳಿ ಗ್ರಾಮದ ಶಿವಪ್ರಕಾಶ್, ಹನುಮನಾಳು ಗ್ರಾಮದ ವೆಂಕಟೇಶ್, ತಲಕಾಡು ಅರುಂಧತಿ ನಗರದ ಚಂದ್ರ, ಪಿರಿಯಾಪಟ್ಟಣದ ಬಿ.ಪಿ.ರಜಾಕ್, ತಮ್ಮಡಹಳ್ಳಿ ಗ್ರಾಮದ ಮಹದೇವ, ಆವರ್ತಿ ಗ್ರಾಮದ ಹೇಮಂತ, ಕೆ.ಆರ್.ಪೇಟೆ ತಾಲೂಕು ಐಚನಹಳ್ಳಿ ಗ್ರಾಮದ ಸುರೇಶ್, ಕೊಳ್ಳೇಗಾಲ ತಾಲೂಕು ಕನ್ನೂರು ಗ್ರಾಮದ ಆನಂದ, ಹುಲ್ಲಹಳ್ಳಿಯ ಮಹದೇವನಾಯ್ಕ ಅವರು ಸನ್ನಡತೆ ಆಧಾರದಿಂದ ಬಂಧಮುಕ್ತರಾದರು.

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪ

ಸಚಿವ ಡಾ.ಅಶ್ವಥ್ ನಾರಾಯಣ ವಿರುದ್ಧ ಕ್ರಮಕ್ಕೆ ಪ್ರಾದೇಶಿಕ ಆಯುಕ್ತರಿಗೆ ಕಾಂಗ್ರೆಸ್ ದೂರು



ಮೈಸೂರು, ಮೇ 26(ಎಂಕೆ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯುತ್ತಿರುವ ಚುನಾವಣಾ ಪ್ರಚಾರದ ವೇಳೆ ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನೇತೃತ್ವದಲ್ಲಿ ಪ್ರಾದೇಶಿಕ ಆಯುಕ್ತರೂ ಆದ ಚುನಾವಣಾಧಿಕಾರಿ ಡಾ.ಜಿ.ಸಿ. ಪ್ರಕಾಶ್ ಅವರಿಗೆ ಮನವಿ ಸಲ್ಲಿಸಲಾಯಿತು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮಂಡ್ಯದ ವಿಜ್ಞಾನ ಪದವಿ ಕಾಲೇಜಿಗೆ ಭೇಟಿ ನೀಡಿರುವ ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ ಅವರು, ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ. ಮತ ಯಾಚಿಸ ಬಾರದು ಎಂದಿಲ್ಲ. ಆದರೆ, ಆ ವೇಳೆ ಅವರು ಬಳಸಿದ ಪದ ಮತ್ತು ನೀಡಿದ ಭರವಸೆಯ ಆಧಾರದ ಮೇಲೆ ದೂರು ನೀಡಿದ್ದೇವೆ ಎಂದರು.

ಮಂಡ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಸಿಇಓಗೆ ನಾವು ನೀಡಿದ ದೂರಿನ ಆಧಾರದ ಮೇಲೆ ಮಂಡ್ಯ ಜಿಪಂ ಉಪ ಕಾರ್ಯದರ್ಶಿಗಳು ತನಿಖೆ ನಡೆಸಿ ವರದಿಯನ್ನು ಸಿಇಓಗೆ ನೀಡಿದ್ದಾರೆ. ಅದರ ಆಧಾರದ ಮೇಲೆ ಸಿಇಓ ಡಿಸಿಗೆ ವರದಿ ನೀಡಿದ್ದಾರೆ. ಆ ವರದಿಯ ಕೊನೆಯ ಪ್ಯಾರದಲ್ಲಿ 'ಉನ್ನತ ಶಿಕ್ಷಣ ಸಚಿವರಾದ ಡಾ.ಸಿ.ಎನ್.ಅಶ್ವಥ್ ನಾರಾಯಣ ಅವರ ಕಚೇರಿಯಿಂದ ಮೇ 15ರಂದು ಬಿಡುಗಡೆಯಾದ ತಾತ್ಕಾಲಿಕ ಪ್ರವಾಸ ಕಾರ್ಯಕ್ರಮ ಪಟ್ಟಿಯಲ್ಲಿ ಚುನಾವಣೆ ಸಂಬಂಧ ಕಾರ್ಯಕ್ರಮ ಸೇರ್ಪಡೆ ಆಗಿದೆ. ಅಲ್ಲದೆ ಸರ್ಕಾರಿ ಶಿಕ್ಷಣ ಸಂಸ್ಥೆ ಬಳಸಿ ಪ್ರಚಾರ ಮಾಡಿರುವುದರಿಂದ ಮೇಲ್ನೋಟಕ್ಕೆ ಇದು ನೀತಿ ಸಂಹಿತೆ ಉಲ್ಲಂಘಿಸಿರುವುದು ಕಂಡು ಬಂದಿದೆ ಎಂದಿದೆ. ಆದರೂ ಈವರೆಗೂ ಎಫ್‌ಐಆರ್ ದಾಖಲಾಗಿಲ್ಲ ಎಂದು ಆರೋಪಿಸಿದರು.

ಈ ನಿಟ್ಟಿನಲ್ಲಿ ಪ್ರಾದೇಶಿಕ ಆಯುಕ್ತರನ್ನು ಭೇಟಿ ಮಾಡಿ ದೂರು ನೀಡಿದ್ದೇವೆ. ಪ್ರಾದೇಶಿಕ ಆಯುಕ್ತರು ಈ ವೇಳೆ ಜಿಲ್ಲಾಧಿಕಾರಿಗೆ ಈಗಾಗಲೇ ತನಿಖೆ ನಡೆಸುವಂತೆ ತಿಳಿಸಿದ್ದೇವೆ ಎಂದಿದ್ದಾರೆ. ನಾವು ಕೂಡ ಕೂಡಲೇ ಕ್ರಮ ಕೈಗೊಳ್ಳಲು ಹೇಳಿದ್ದೇವೆ. ಕ್ರಮ ಕೈಗೊಳ್ಳದಿದ್ದರೆ ಮುಖ್ಯ ಚುನಾವಣಾಧಿಕಾರಿಗೆ ದೂರು ನೀಡುತ್ತೇವೆ. ಆಗಲೂ ಕ್ರಮ ಕೈಗೊಳ್ಳದಿದ್ದರೆ ಸರ್ಕಾರದ ವಿರುದ್ಧ ಉಗ್ರ ಪ್ರತಿಭಟನೆ ನಡೆಸುತ್ತೇವೆ ಎಂದರು.

ಅಕ್ರಮ ಚಾಳಿ: ಅಧಿಕಾರ ದುರುಪಯೋಗ ಮಾಡಿಕೊಳ್ಳುವುದು. ಚುನಾವಣಾ ಸಂದರ್ಭದಲ್ಲಿ ಅಕ್ರಮಗಳನ್ನು ನಡೆಸುವುದು ಬಿಜೆಪಿಯವರ ಚಾಳಿ, ಇದು ಅವರ ಹುಟ್ಟುಗುಣ. ಹಾಗಾಗಿ ಕೂಡಲೇ ಸಚಿವ ಅಶ್ವಥ್ ನಾರಾಯಣ ಅವರ ಮೇಲೆ ಎಫ್‌ಐಆರ್ ದಾಖಲಿಸಿ, ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮಾಜಿ ಮೇಯರ್ ಅಯೂಬ್ ಖಾನ್, ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಶಿವಣ್ಣ ಶಿವಪ್ರಸಾದ್ ಇತರರಿದ್ದರು.

ದಡದಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಶೇ.100ರಷ್ಟು ಫಲಿತಾಂಶ

ಮೈಸೂರು,ಮೇ 26(ಎಂಟಿವೈ)– ಸರಗೂರು ತಾಲೂಕಿನ ಕಾಡಂಚಿನ ಗ್ರಾಮ ದಡದಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಲಭಿಸಿದೆ.



ಸಿಂಚನ ಐಶ್ವರ್ಯ ಶೃತಿ

22 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಎಲ್ಲರೂ ತೇರ್ಗಡೆಯಾಗಿರುವುದು ವಿಶೇಷ. ಸಿಂಚನ 600, ಐಶ್ವರ್ಯ 589, ಶೃತಿ 589 ಅಂಕ ಪಡೆದಿದ್ದಾರೆ. ಒಟ್ಟು 6 ಮಂದಿ ಅತ್ಯುನ್ನತ ಶ್ರೇಣಿಯಲ್ಲಿ, 14 ಮಂದಿ ಪ್ರಥಮ ಶ್ರೇಣಿಯಲ್ಲಿ, ಇಬ್ಬರು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಶಾಲೆಯ ಮುಖ್ಯೋಪಾಧ್ಯಾಯಿನಿ ಕೆ.ಸವಿತಾ ತಿಳಿಸಿದ್ದಾರೆ.

ಪಠ್ಯ ಪರಿಷ್ಕರಣೆ ಕ್ರಮ ಖಂಡಿಸಿ ಪ್ರತಿಭಟನೆ



ಮೈಸೂರು, ಮೇ 26(ಆರ್‌ಕೆಬಿ)– ಪಠ್ಯ ಪರಿಷ್ಕರಣೆ ಮೂಲಕ ಸರ್ಕಾರ ಶಾಲಾ ಮಕ್ಕಳಲ್ಲಿ ದ್ವೇಷ ಉಂಟು ಮಾಡಲು ಮುಂದಾಗಿದೆ ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿ ಹಾಗೂ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ಕಾರ್ಯಕರ್ತರು ಗುರುವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ದಸಂಸ ಕಾರ್ಯಕರ್ತರು ಪಠ್ಯ ಪರಿಷ್ಕರಣ ಸಮಿತಿಯನ್ನು ವಿಸರ್ಜಿಸಬೇಕು. ಅನಗತ್ಯ ಗೊಂದಲಕ್ಕೆ ಕಾರಣರಾದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ಸಮಿತಿಯಲ್ಲಿ ಅಧ್ಯಕ್ಷರೂ ಸೇರಿದಂತೆ 8 ಮಂದಿ ಸದಸ್ಯರಲ್ಲಿ ಆರು ಮಂದಿ ಬಲಪಂಥೀಯ ಸಂಘಟನೆ ಹಾಗೂ ಸಂಘ ಪರಿವಾರದ ಹಿನ್ನೆಲೆಯವರು. ವೈಚಾರಿಕ, ವೈಜ್ಞಾನಿಕವಾಗಿದ್ದ ಹಳೇ ಪಠ್ಯ ಕ್ರಮವನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟು, ಶೋಷಣೆ, ಮೌಢ್ಯ, ಅಸ್ಪೃಶ್ಯತೆಯನ್ನು ಜೀವಂತವಾಗಿಡುವ ಪಠ್ಯಗಳನ್ನು ಅಳವಡಿಸಿರುವುದು ಅಕ್ಷಮ್ಯ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಮಿತಿಯು ಪ್ರಜಾಪ್ರಭುತ್ವವನ್ನು ನಾಶ ಮಾಡಿ ಬ್ರಾಹ್ಮಣಶಾಹಿ ಹಿಂದೂ ರಾಷ್ಟ್ರ ಮಾಡಲು ಹೊರಟಿದೆ. ಸಂಶೋಧಕರು, ತಜ್ಞರಿಲ್ಲದ ಸಮಿತಿಯು ನಾಡಧ್ವಜ, ನಾಡಗೀತೆಗೆ ಅವಮಾನ ಮಾಡಿದ್ದ ರೋಹಿತ್ ಚಕ್ರವರ್ತಿ ಅವರನ್ನೇ ಸಮಿತಿ ಅಧ್ಯಕ್ಷರನ್ನಾಗಿ ಮಾಡಿದೆ ಎಂದು ಆರೋಪಿಸಿದರು.

ದಸಂಸ ಮುಖಂಡರಾದ ಹನುಮನಪುರ ಪುಟ್ಟಣ್ಣ, ಡಾ.ಹರೀಶ್‌ಕುಮಾರ್, ಬಿಳಿಕೆರೆ ದೇವರಾಜು, ಶಂಕರ್ ಬೊಮ್ಮೆನಹಳ್ಳಿ, ಪ್ರಭುಸ್ವಾಮಿ, ಸಣ್ಣಮಾದು, ಆಟೋ ಸೋಮಣ್ಣ, ಭಾಗ್ಯಮ್ಮ, ಪ್ರಭುಸ್ವಾಮಿ, ಪ್ರೇಮಾ, ಮಂಜುನಾಥ್, ಭಾಗ್ಯಮ್ಮ ಇನ್ನಿತರರು ಉಪಸ್ಥಿತರಿದ್ದರು.

ಕಾರ್ಮಿಕ ಇಲಾಖೆ ಕಚೇರಿ ಎದುರು ಕಟ್ಟಡ ಕಾರ್ಮಿಕರ ಪ್ರತಿಭಟನೆ

ಮೈಸೂರು, ಮೇ 26(ಆರ್‌ಕೆಬಿ)– ಕಟ್ಟಡ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ಸಿಡಬ್ಲ್ಯುಎಫ್‌ಐ ಕಟ್ಟಡ ಕಾರ್ಮಿಕರ ಸಂಘದ ವತಿಯಿಂದ ಮೈಸೂರಿನ ಕುವೆಂಪುನಗರದಲ್ಲಿರುವ ಕಾರ್ಮಿಕ ಇಲಾಖೆ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಯಿತು.



ಕಟ್ಟಡ ಕಾರ್ಮಿಕರು ಅನೇಕರು ಸಮಸ್ಯೆಗಳಿಂದ ಬಳಲುತ್ತಿದ್ದು, ಅವರ ಬೇಡಿಕೆಗಳಿಗೆ ಮನ್ನಣೆ ನೀಡದ ಇಲಾಖೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು. ಬಳಿಕ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಎಚ್.ಎಂ.ಬಸವಯ್ಯ, ಸಿ.ಜೆ.ನವೀನ್‌ಕುಮಾರ್, ಅಶೋಕ್, ಬಸವರಾಜು, ಕೆ.ಸಿ.ಕೃಷ್ಣ, ರಾಜು, ಸಿಐಟಿಯು ಜಿಲ್ಲಾಧ್ಯಕ್ಷ ಎನ್.ಕೆ.ಬಾಲಾಜಿ ರಾವ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಇಂದಿನಿಂದ ಮಾವು ಮೇಳ

● ಕುಪ್ಪಣ್ಣ ಪಾರ್ಕ್‌ನಲ್ಲಿ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಚಾಲನೆ ● ಈ ಬಾರಿ ಫಸಲು ಕಡಿಮೆ ● 22 ಮಳಿಗೆಗಳಲ್ಲಿ ವೈವಿಧ್ಯಮಯ ಹಣ್ಣು



ಮೈಸೂರು,ಮೇ 26(ಎಂಟಿವೈ)– ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕಾ ಇಲಾಖೆ ವತಿಯಿಂದ ಆಯೋಜಿಸಿರುವ ಮೂರು ದಿನಗಳ ಮಾವು ಮೇಳಕ್ಕೆ ನಾಳೆ(ಮೇ 27) ಬೆಳಗ್ಗೆ 10.30ಕ್ಕೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಚಾಲನೆ ನೀಡಲಿದ್ದಾರೆ.

ಪ್ರಸಕ್ತ ಸಾಲಿನ ಮಾವು ಮೇಳಕ್ಕಾಗಿ ಈಗಾಗಲೇ ಕುಪ್ಪಣ್ಣ ಪಾರ್ಕ್‌ನಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದ್ದು, 22 ಮಳಿಗೆ ನಿರ್ಮಿಸಲಾಗಿದೆ. ಹಣ್ಣುಗಳ ರಾಜ ಎನಿಸಿರುವ ಮಾವಿನಹಣ್ಣಿಗೆ ಭಾರಿ ಬೇಡಿಕೆಯಿದ್ದು, ಹಲವು ಬಗೆಯ ಮಾವಿನಹಣ್ಣು ಒಂದೇ ಸೂರಿನಡಿ ಗ್ರಾಹಕರಿಗೆ ಒದಗಿಸುವ ನಿಟ್ಟಿನಲ್ಲಿ ಮಾವು ಮೇಳ ಸಹಕಾರಿಯಾಗಲಿದೆ. ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ, ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ತೋಟಗಾರಿಕೆ ಇಲಾಖೆಯು ಕಳೆದ 10 ವರ್ಷಗಳಿಂದ ನಗರದಲ್ಲಿ ಮಾವು ಮೇಳ ಆಯೋಜಿಸುತ್ತ ಬಂದಿದೆ.

ಈ ಮೂಲಕ ಸಾವಯವ ಮಾವು ಉತ್ತೇಜಿಸುವ ಹಾಗೂ ಮಾವು ಬೆಳೆಗಾರರಿಗೆ ನೇರ ಮಾರುಕಟ್ಟೆ ಕಲ್ಪಿಸಲು ಕೆಲಸ ಮಾಡುತ್ತಿದೆ. ಆದರೆ, ಕಳೆದೆರಡು ವರ್ಷಗಳಿಂದ ಕೋವಿಡ್‌ನಿಂದಾಗಿ ಮಾವು ಮೇಳ ನಡೆಸಲು ಸಾಧ್ಯವಾಗಲಿಲ್ಲ. ಆದರೆ ಈ ಬಾರಿ ಆಯೋಜಿಸಿರುವ ಮೇಳದಲ್ಲಿ ವಿವಿಧೆಡೆಯಿಂದ ಮಾವು ಬೆಳೆಗಾರರು ಪಾಲ್ಗೊಳ್ಳುತ್ತಿರುವುದು ವಿಶೇಷ.

ಮೇಳದಲ್ಲಿ ಮೈಸೂರು ಜಿಲ್ಲೆಯಿಂದ 5, ಮಂಡ್ಯದಿಂದ 4 ಹಾಗೂ ರಾಮನಗರದಿಂದ 6, ಕೋಲಾರ, ಚಿಕ್ಕಮಗಳೂರು ಜಿಲ್ಲೆಯಿಂದ ಮಾವು ಬೆಳೆಗಾರರು ಪಾಲ್ಗೊಳ್ಳುತ್ತಿದ್ದಾರೆ. ಬಾದಾಮಿ, ರಸಪುರಿ, ನಂದಿತ, ತೋತಪುರಿ, ಬಂಗನಪಲ್ಲಿ, ದಶೇರಿ, ಮಲ್ಲಿಕ, ಮಲಗೋವ, ನೀಲಂ, ಸಿಂಧೂರ ತಳಿಯ ಮಾವು ಮೇಳದಲ್ಲಿ ದೊರೆಯಲಿದೆ.

ಅಕಾಲಿಕ ಮಳೆಯಿಂದ ಕೈ ಕೊಟ್ಟ ಫಸಲು: ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ರುದ್ರೇಶ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ ಮಾವಿನ ಫಸಲು ಕೈಕೊಟ್ಟಿದೆ. ಮಾವು ಬೆಳೆಗಾರರಿಗೆ ಸತತ ಎರಡು ವರ್ಷಗಳಿಂದ ವಿವಿಧ ಕಾರಣದಿಂದ ನಷ್ಟವಾಗಿತ್ತು. ಈ ಸಲವೂ ಅಕ್ಟೋಬರ್, ನವೆಂಬರ್‌ನಲ್ಲಿ ಸುರಿದ ಅಕಾಲಿಕ ಮಳೆಯಿಂದ ತೆನೆಯಲ್ಲೇ ಹೂಗಳು ಉದುರಿ ಹೋಗಿದ್ದವು. ಬಳಿಕ ಮತ್ತೊಮ್ಮೆ ಹೂ ಬಿಟ್ಟು ಕಾಯಿ ಕಚ್ಚುವಾಗಲೇ ಮಾರ್ಚ್ ಮಧ್ಯ ಮತ್ತೆ ಅಕಾಲಿಕ ಮಳೆ ಸುರಿದು ಬೆಳೆಗಾರರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳಿದೆ ಎಂದರು.

ಮೈಸೂರು ತಾಲೂಕಿನಲ್ಲಿ 535 ಹೆಕ್ಟೇರ್ ಪ್ರದೇಶದಲ್ಲಿ, ಹುಣಸೂರು–1468 ಹೆಕ್ಟೇರ್, ಕೆ.ಆರ್.ನಗರ–66 ಹೆಕ್ಟೇರ್, ಹೆಚ್.ಡಿ.ಕೋಟೆ– 750 ಹೆಕ್ಟೇರ್, ನಂಜನಗೂಡು– 466 ಹೆಕ್ಟೇರ್, ಪಿರಿಯಾಪಟ್ಟಣ–215 ಹೆಕ್ಟೇರ್, ತಿ.ನರಸೀಪುರ – 358 ಹೆಕ್ಟೇರ್ ಪ್ರದೇಶ ಸೇರಿದಂತೆ ಮೈಸೂರು ಜಿಲ್ಲೆಯಲ್ಲಿ ಒಟ್ಟು 3,858 ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗಿದೆ. ಆದರೆ, ಕೋಲಾರ, ರಾಮನಗರ,



ಚಿಕ್ಕಬಳ್ಳಾಪುರ ಸೇರಿದಂತೆ ಇನ್ನಿತರೆಡೆ 20ರಿಂದ 35 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆದಿದ್ದಾರೆ ಎಂದರು.

ಹೂವು ಚೆನ್ನಾಗಿ ಕಚ್ಚಿದರೆ ಪ್ರತಿ ಹೆಕ್ಟೇರ್‌ಗೆ ಕನಿಷ್ಠ 7ರಿಂದ 10 ಟನ್ ಮಾವಿನಕಾಯಿ ಫಸಲು ಸಿಗುತ್ತಿತ್ತು. ವಾರ್ಷಿಕ 7 ರಿಂದ 8 ಸಾವಿರ ಟನ್‌ನಷ್ಟು ಮಾವು ಉತ್ಪಾದನೆಯಾಗುತ್ತಿತ್ತು. ಆದರೆ ಪ್ರಸಕ್ತ ಹಂಗಾಮಿನಲ್ಲಿ 2 ಬಾರಿ ಬಿದ್ದ ಅಕಾಲಿಕ ಮಳೆಯಿಂದ ಇಳುವರಿ ಕಡಿಮೆಯಾಗಿದೆ. ಈ ಬಾರಿ 4 ರಿಂದ 5 ಸಾವಿರ ಟನ್ ಉತ್ಪಾದನೆಯಾಗುವುದೇ ಕಷ್ಟಕರವಾಗಿದೆ. ಜಿಲ್ಲೆಯಲ್ಲಿ ಈ ಬಾರಿ ಮಾವಿನ ಇಳುವರಿ ಶೇ.40ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಕೋಲಾರ, ರಾಮನಗರ ಚಿಕ್ಕಬಳ್ಳಾಪುರ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಬಾದಾಮಿ, ರಸಪುರಿ, ತೋತಪುರಿ, ಬಂಗನಪಲ್ಲಿ, ದಶೇರಿ, ಮಲ್ಲಿಕ, ಮಲಗೋವ, ನೀಲಂ, ಸಿಂಧೂರ ತಳಿಯ ಮಾವು ಮೈಸೂರಿನ ಮಾರುಕಟ್ಟೆ ಪ್ರವೇಶ ಮಾಡಿದೆ. ಆದರೆ, ಮಾವಿನ ದರ ದುಬಾರಿಯಾಗಿದೆ. ತೋತಪುರಿ, ಬಂಗನಪಲ್ಲಿ, ದಶೇರಿ, ಮಲ್ಲಿಕ, ಮಲಗೋವ, ನೀಲಂ ಹೀಗೆ ವಿವಿಧ ತಳಿ ಮಾವಿನಹಣ್ಣು ಬೆಲೆಯೂ ಹೆಚ್ಚಿದೆ. ಆದರೆ, ಈ ಮೇಳದಲ್ಲಿ ಯೋಗ್ಯ ದರಕ್ಕೆ ಗುಣಮಟ್ಟ ಮಾವು ಜನರಿಗೆ ದೊರೆಯಲಿದೆ ಎಂದರು.

ದಿನವೊಂದಕ್ಕೆ 25ರಿಂದ 30 ಟನ್ ಮಾವು ಮಾರಾಟವಾಗುವ ಸಾಧ್ಯತೆ ಇದೆ. ಹೆಸರು ನೋಂದಾಯಿಸಿರುವ ರೈತರಿಗೆ ಮೊದಲೇ ಸೂಚನೆ ನೀಡಿದ್ದು, ಅಗತ್ಯಕ್ಕನುಗುಣವಾಗಿ ಹಣ್ಣನ್ನು ತರುವಂತೆ ಸೂಚಿಸಲಾಗಿದೆ. ಮೂರು ದಿನದ ನಂತರವೂ ಜನರು ಮೇಳ ಬಯಸಿದರೆ, ಕುಪ್ಪಣ್ಣ ಪಾರ್ಕ್‌ನಲ್ಲಿರುವ ಮಳಿಗೆಯಲ್ಲಿ ರೈತರಿಂದಲೇ ಹಣ್ಣಿನ ಮಾರಾಟ ಮಾಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕರ್ನಾಟಕ ಬ್ಯಾಂಕ್ ವಿರುದ್ಧ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ



ತಿ.ನರಸೀಪುರ, ಮೇ 26(ಎಸ್‌ಕೆ)– ಕರ್ನಾಟಕ ಬ್ಯಾಂಕ್‌ನವರು ರೈತರಿಗೆ ಸಾಲದ ಮರು ಪಾವತಿ ಮಾಡುವಂತೆ ನೋಟಿಸ್ ನೀಡುವುದರ ಜೊತೆಗೆ, ಸರ್ಕಾರದ ಸಹಾಯಧನವನ್ನು ಸಾಲದ ಖಾತೆಗೆ ಜಮಾವಣೆ ಮಾಡಿಕೊಳ್ಳಲಾಗುತ್ತಿದೆ ಎಂದು ದೂರಿ ಪಟ್ಟಣದಲ್ಲಿ ಗುರುವಾರ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಬ್ಯಾಂಕ್ ಮುಂಭಾಗ ಸಮಾವೇಶಗೊಂಡ ಸಂಘದ ಕಾರ್ಯಕರ್ತರು ಹಾಗೂ ರೈತರು ಕರ್ನಾಟಕ ಬ್ಯಾಂಕ್‌ನ ನಡವಳಿಕೆಯ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ದೇಶದಲ್ಲಿ 50 ಜನ ಬಂಡವಾಳಶಾಹಿ ಶ್ರೀಮಂತರ 68 ಸಾವಿರ ಕೋಟಿ ಸಾಲ ಮನ್ನಾ ಮಾಡುವ ಬ್ಯಾಂಕ್‌ಗಳು ರೈತರ ಸಾಲ ವಸೂಲಾತಿಗಾಗಿ ನೋಟಿಸ್ ನೀಡಿ ಕಿರುಕುಳ ನೀಡುತ್ತಿರುವುದು ಖಂಡನೀಯ. ಕೊರೊನಾ ಸಂಕಷ್ಟ ಕಾಲದಲ್ಲಿ ಎರಡು ವರ್ಷಗಳ ರೈತರು ಬೆಳೆಗಳನ್ನು ಬೀದಿಗೆ ಸುರಿದು ಸಂಕಷ್ಟ ಅನುಭವಿಸಿದ್ದಾರೆ. ರೈತರಿಗೆ ಹೊಸ ಸಾಲ ನೀಡಬೇಕಾದ ಬ್ಯಾಂಕ್‌ಗಳು ಹಳೆಯ ಸಾಲ ವಸೂಲಾತಿಗೆ ಮುಂದಾಗಿರುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಗ್ರಾಮೀಣ ಹೆಣ್ಣು ಮಕ್ಕಳ ಗುಡಿ ಕೈಗಾರಿಕೆಗೆ ಮುದ್ರಾ ಯೋಜನೆಯಡಿ 10 ಲಕ್ಷ ರೂ. ಹಾಗೂ ಬಡ ವ್ಯಾಪಾರಸ್ಥರಿಗೆ ಯಾವುದೇ ಭದ್ರತೆ ಇಲ್ಲದೆ ಆಧಾರ್‌ಕಾರ್ಡ್ ಅನುಸಾರ ನಿತ್ಯ ವ್ಯವಹಾರ ಮಾಡಲು 50 ಸಾವಿರ ರೂ. ಸಾಲ ನೀಡಬೇಕೆಂಬ ನಿಯಮವಿದ್ದರೂ, ಇದನ್ನು ಗಾಳಿಗೆ ತೂರುತ್ತಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಸಾಲ ನೀಡಬೇಕೆಂಬ ಸೂಚನೆ ಇದ್ದರೂ ನಿರ್ಲಕ್ಷಿಸುತ್ತಿದ್ದಾರೆ. ಇಂತಹ ವೈಪರೀತ್ಯಗಳ ವಿರುದ್ಧ ರೈತರಿಗೆ ಕಿರುಕುಳ ನೀಡುವ ಯಾವುದೇ ಬ್ಯಾಂಕಿನ ಅಧಿಕಾರಿಯನ್ನು ಸುಮ್ಮನೆ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಪ್ರತಿಭಟನಾಕಾರರ ಬಳಿ ಬಂದ ಬ್ಯಾಂಕ್ ವ್ಯವಸ್ಥಾಪಕ ಉಮೇಶ್ ಸರ್ಕಾರದ ಸಹಾಯಧನ ಹಣ ಸಾಲದ ಖಾತೆಗೆ ಜಮಾವಣೆಗಿದ್ದರೆ ವಾಪಸ್ ನೀಡುತ್ತೇವೆ. ಅಲ್ಲದೆ ನಮ್ಮಲ್ಲಿ ಕೆಲವು ಲೋಪದೋಷಗಳಾಗಿದೆ ಎಂದು ಕ್ಷಮೆಯಾಚಿಸಿದರು. ಮೇಲಧಿಕಾರಿಗಳ ಒತ್ತಡದಿಂದ ಸಾಲ ವಸೂಲಾತಿಗಾಗಿ ನೋಟಿಸ್ ನೀಡಲಾಗಿದೆ ಎಂದು ತಿಳಿಸಿದರು. ಈ ವೇಳೆ ಕೋಪಗೊಂಡ ಪ್ರತಿಭಟನಾಕಾರರು, ಒತ್ತಡವೇರುತ್ತಿರುವ ಅಧಿಕಾರಿಗಳು ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದರು. ಆಗ ದೂರವಾಣಿ ಮೂಲಕ ಜಿಲ್ಲಾ ಮಟ್ಟದ ಸಹಾಯಕ ವ್ಯವಸ್ಥಾಪಕರ ಜೊತೆ ಮಾತನಾಡಿ, 10 ದಿನದೊಳಗೆ ರೈತ ಮುಖಂಡರ ಜೊತೆ ಸಭೆ ನಡೆಸಿ, ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ರೈತರ ಸಾಲ ವಸೂಲಾತಿಗಾಗಿ ನ್ಯಾಯಾಲಯಕ್ಕೆ ದಾಖಲಿಸಿರುವ ಪ್ರಕರಣಗಳ ಬಗ್ಗೆ ಅಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ಮುಖಂಡರಾದ ಹತ್ತಳ್ಳಿ ದೇವರಾಜ್, ಕಿರಗಸೂರು ಶಂಕರ, ರವಿ ಪ್ರಸಾದ್ ನಾಯ್ಕ್, ರಾಜೇಂದ್ರ ಅಪ್ಪಣ್ಣ ಗುರುಸ್ವಾಮಿ, ಮಂಜು, ಬಸವರಾಜ್, ಮಹದೇವ್, ಮರಿಚೆನ್ನಯ್ಯ ಮುಂತಾದವರು ಪಾಲ್ಗೊಂಡಿದ್ದರು.

ಕೆ.ಆರ್.ನಗರ: ಬಿಜೆಪಿಯಲ್ಲಿ ನಿಷ್ಠಾವಂತರ ಕಡೆಗಣನೆ

ನಗರ ಬಿಜೆಪಿ ಅಧ್ಯಕ್ಷ ಕೃಷ್ಣಭಟ್ ಆರೋಪ



ಕೆ.ಆರ್.ನಗರ, ಮೇ 26(ಕೆಟಿಆರ್)– ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ತರಲು ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಪರಿಶ್ರಮವೇ ಕಾರಣವಾಗಿದ್ದು, ಅಂತಹ ಕಾರ್ಯಕರ್ತರನ್ನು ಕೆ.ಆರ್.ನಗರ ತಾಲೂಕಿನ ಬಿಜೆಪಿ ಕೋರ್ ಕಮಿಟಿ ಕಡೆಗಣಿಸುತ್ತಿದೆ ಎಂದು ಆರೋಪಿಸಿದ ನಗರ ಬಿಜೆಪಿ ಅಧ್ಯಕ್ಷ ಕೃಷ್ಣ ಭಟ್ ಅವರು, ಈ ಸಂಬಂಧ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಮತ್ತು ನಳಿನ್‌ಕುಮಾರ್ ಕಟೀಲ್‌ಗೆ ದೂರು ನೀಡಲಾಗುವುದು ಎಂದು ತಿಳಿಸಿದರು.

ಪಟ್ಟಣದ ಅಕ್ಷತಾ ಹಾಲ್‌ನಲ್ಲಿ ನಡೆದ ಬಿಜೆಪಿ ಮುಖಂಡರ ಸಭೆಯಲ್ಲಿ ತಾಲೂಕು ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ರಾಘವನ್‌ಗೌಡ ಅವರನ್ನು ಅಮಾನತು ಮಾಡಿರುವ ಜಿಲ್ಲೆ ಮತ್ತು ತಾಲೂಕು ಘಟಕಗಳ ಬಗ್ಗೆ ಬೇಸರ ವ್ಯಕ್ತಪಡಿಸಿದ ಅವರು, ಈ ಬಗ್ಗೆ ಬಿಜೆಪಿ ವರಿಷ್ಠರೊಂದಿಗೆ ಮಾತನಾಡಿ ನಿಷ್ಠಾವಂತ ಕಾರ್ಯಕರ್ತರಿಗೆ ನ್ಯಾಯ ಒದಗಿಸುವ ಭರವಸೆ ನೀಡಿದರು.

ಕೆಆರ್.ನಗರ ತಾಲೂಕಿನ ಬಿಜೆಪಿ ಘಟಕವು ಹಣ ನೀಡಿದವರಿಗೆ ಮತ್ತು ಪಕ್ಷದಲ್ಲಿ ಕೆಲಸ ಮಾಡದವರಿಗೆ ಸರ್ಕಾರಿ ನಾಮನಿರ್ದೇಶನವನ್ನು ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ವರಿಷ್ಠರಿಗೆ ದೂರು ನೀಡಿದರು. ಪ್ರಭಾವಿ ರಾಜಕಾರಣಿಯೊಬ್ಬರ ಬೆಂಬಲದೊಂದಿಗೆ ಸಂಸದರು, ಸಚಿವರಿಂದ ಒತ್ತಡ ತಂದು ವರಿಷ್ಠರು ಯಾವುದೇ ಕ್ರಮಕೈಗೊಳ್ಳದ ಹಾಗೆ ನೋಡಿಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಾಲೂಕು ಬಿಜೆಪಿ ಮಾಜಿ ಪ್ರಧಾನ ಕಾರ್ಯದರ್ಶಿ ಜಗದೀಶ್ ಮಾತನಾಡಿ, ಬಿಜೆಪಿ ಪಕ್ಷದ ಅಭ್ಯರ್ಥಿ ವಿರುದ್ಧ ಬಂಡಾಯವಾಗಿ ಸ್ಪರ್ಧಿಸಿದವರನ್ನು ಜಿಲ್ಲಾ ಉಪಾಧ್ಯಕ್ಷರನ್ನಾಗಿ ಮಾಡುತ್ತೀರಿ ಮತ್ತು ಹಗಲು ಬಿಜೆಪಿ ರಾತ್ರಿ ಜೆಡಿಎಸ್ ಪಕ್ಷವನ್ನು ಬೆಂಬಲಿಸುವವರನ್ನು ಪದಾಧಿಕಾರಿ ಮತ್ತು ಕೋರ್ ಕಮಿಟಿಯಲ್ಲಿ ಇಡುತ್ತೀರಿ. ಆದರೆ, ಪಕ್ಷದ ಪರವಾಗಿ ಕೆಲಸ ನಿರ್ವಹಿಸುವವರ ವಿರುದ್ಧ ಕ್ರಮ ಕೈಗೊಳ್ಳುತ್ತೀರಿ. ಕೆ.ಆರ್.ನಗರದಲ್ಲಿ ನಿಷ್ಠಾವಂತ ಬಿಜೆಪಿ ಕಾರ್ಯಕರ್ತರಿಗೆ ಬೆಲೆಯೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ತಾಲೂಕು ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ರಾಘವನ್ ಗೌಡ ಮಾತನಾಡಿದರು. ಸಭೆಯಲ್ಲಿ ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ಕೆಂಪರಾಜು, ತಾಲೂಕು ಎಸ್‌ಸಿ ಮೋರ್ಚಾ ಅಧ್ಯಕ್ಷ ರಾಚಯ್ಯ, ಎಸ್‌ಟಿ ಮೋರ್ಚಾ ಅಧ್ಯಕ್ಷ ರಾಮನಾಯಕ, ಸಾಲಿಗ್ರಾಮ ಶಕ್ತಿ ಕೇಂದ್ರದ ಅಧ್ಯಕ್ಷ ಮಹದೇವ, ಭೇರ್ಯ ಶಕ್ತಿ ಕೇಂದ್ರದ ಅಧ್ಯಕ್ಷ ರಾಜಶೇಖರ್, ಸುರೇಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸ್ವಾತಂತ್ರ್ಯ ಹೋರಾಟಗಾರರ ಗಮನಕ್ಕೆ

ಮೈಸೂರು, ಮೇ 26– ಮೈಸೂರು ಜಿಲ್ಲೆಯಲ್ಲಿ ಸರ್ಕಾರದಿಂದ ಗೌರವಧನ ಪಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಗಾರರು ಅಥವಾ ಅವರ ಪತ್ನಿಯರು ಮೊ: 9945855543, 7795475072 ಮೂಲಕ ಸಂಪರ್ಕಿಸುವಂತೆ ಮೈಸೂರು ಜಿಲ್ಲಾ ಮತ್ತು ನಗರ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಪ್ರಕಟಣೆ ತಿಳಿಸಿದೆ.

ದೀಪ್ತಿ ಅತ್ಯುನ್ನತ ಶ್ರೇಣಿ



ಪಿರಿಯಾಪಟ್ಟಣ, ಮೇ 26– ಹುಣಸೂರಿನ ಶಾಸ್ತ್ರಿಕಾಂಪೋಜಿಟ್ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿ ಎಂ.ಡಿ. ದೀಪ್ತಿ ಎಸ್‌ಎಸ್‌ಎಲ್‌ಸಿಯಲ್ಲಿ 618 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಕನ್ನಡದಲ್ಲಿ 123, ಇಂಗ್ಲಿಷ್ 98, ಹಿಂದಿ 97, ಗಣಿತ 100, ವಿಜ್ಞಾನ 100, ಸಮಾಜ ವಿಜ್ಞಾನ 100 ಅಂಕ ಪಡೆದಿದ್ದಾರೆ. ಪಿರಿಯಾಪಟ್ಟಣ ನಿವಾಸಿ ನಿವೃತ್ತ ಸೈನಿಕ ಧ್ರುವರಾಜ್, ಸವಿತಾ ದಂಪತಿ ಪುತ್ರಿ.

ಎಸ್‌ಎಸ್‌ಎಲ್‌ಸಿ ಸಾಧಕರಿಗೆ ಸನ್ಮಾನ



ಹೆಚ್.ಡಿ.ಕೋಟೆ, ಮೇ 26(ಮಂಜು)– ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ತಾಲೂಕಿನ ಸೆಂಟ್ ಮೇರಿಸ್ ಶಾಲೆಯ ಚರಣ್‌ಕುಮಾರ್ 622, ಆದಿಚುಂಚನಗಿರಿ ಶಾಲೆಯ ಮಾನ್ಯಶ್ರೀ 621, ಟಿ.ಎಸ್.ಸುಬ್ಬಣ್ಣ ಪ್ರೌಢಶಾಲೆ ಕ್ಯಾತನಹಳ್ಳಿ ಪ್ರಿಯಾಂಕಾ 620 ಅಂಕ ಪಡೆದಿದ್ದು, ಇವರನ್ನು ಸಮಾಜ ಸೇವಕ ಸಿರಾಜ್ ಸನ್ಮಾನಿಸಿ, ತಲಾ 5 ಸಾವಿರ ಧನ ಸಹಾಯ ನೀಡಿದರು. ಈ ವೇಳೆ ಬಿಇಓ ಚಂದ್ರಕಾಂತ್, ಹೈರಿಗೆ ಗ್ರಾಪಂ ಸದಸ್ಯರಾದ ಶ್ರೀಧರ್, ಭಾಸ್ಕರ್, ಸಮರ್ಥ ಸಂಸ್ಥೆಯ ಸಂಸ್ಥಾಪಕ ಪ್ರಕಾಶ್ ಇದ್ದರು.

ಮೊರಾರ್ಜಿ ದೇಸಾಯಿ ಶಾಲೆಗೆ ಶೇ.100 ಫಲಿತಾಂಶ


ಐಶ್ವರ್ಯ


ಅಪೂರ್ವ


ಪ್ರಿಯದರ್ಶಿನಿ


ವಿಸ್ಮಯ

ಭೇರ್ಯ, ಮೇ 26– ಸಮೀಪದ ಅರಕೆರೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 100ರಷ್ಟು ಫಲಿತಾಂಶ ಪಡೆದಿದ್ದು, ವಿದ್ಯಾರ್ಥಿನಿ ಕೆ.ಐಶ್ವರ್ಯ, ಅಪೂರ್ವ, ಪ್ರಿಯದರ್ಶಿನಿ, ವಿಸ್ಮಯ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಉಳಿದ 18 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ ಎಂದು ವಸತಿ ಶಾಲೆಯ ಪ್ರಾಂಶುಪಾಲ ಕೆ.ಎಸ್.ಸ್ವಾಮಿ ತಿಳಿಸಿದ್ದಾರೆ.

ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆ



ಮಲ್ಕುಂಡಿ, ಮೇ 26 (ಚನ್ನಪ್ಪ)–ನಂಜನಗೂಡು ವಿಧಾನಸಭಾ ಕ್ಷೇತ್ರದ ನೇರಳೆ ಗ್ರಾಮದ ಉಪ್ಪಾರ ಜನಾಂಗದ ಹಲವು ಮುಖಂಡರು ಕಾಂಗ್ರೆಸ್ ತೊರೆದು ಶಾಸಕ ಬಿ.ಹರ್ಷವರ್ಧನ್ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಯಾದರು. ಗ್ರಾಪಂ ಸದಸ್ಯ ಶಿವಕುಮಾರ್, ಮಹದೇವಶೆಟ್ಟಿ, ಶಿವಯ್ಯಶೆಟ್ಟಿ, ಕೃಷ್ಣಶೆಟ್ಟಿ, ಶಿವಣ್ಣ, ಶಿವಕುಮಾರ್, ಮಹೇಶ್ ಸೇರಿದಂತೆ ಹಲವು ಮುಖಂಡರು ಸೇರ್ಪಡೆಯಾದರು. ಇವರನ್ನು ಶಾಸಕ ಹರ್ಷವರ್ಧನ್ ಪಕ್ಷದ ಬಾವುಟ ನೀಡಿ ಬರಮಾಡಿಕೊಂಡರು. ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಶಿವಣ್ಣಗಜೇಂದ್ರ ಹಾಜರಿದ್ದರು.

ಮಿರ್ಲೆ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಪ್ರವೇಶ ಪ್ರಕ್ರಿಯೆ ಆರಂಭ

ಕೆ.ಆರ್.ನಗರ, ಮೇ 26– ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಮೇ 20 ರಿಂದ 2022 –23ನೇ ಸಾಲಿನ ಪ್ರಥಮ ವರ್ಷದ ಪ್ರವೇಶ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಾಸಾದ ಅರ್ಹ ವಿದ್ಯಾರ್ಥಿಗಳು ಅಗತ್ಯ ಸೂಕ್ತ ದಾಖಲೆಗಳೊಂದಿಗೆ ಕಾಲೇಜಿಗೆ ಬಂದು ನೇರ ಪ್ರವೇಶ ಪಡೆಯಬಹುದು. ಮೊದಲು ಬಂದವರಿಗೆ ಮೊದಲ ಆದ್ಯತೆ ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ. ಮಾಹಿತಿಗೆ 08223–282389, 9900300355, 8722563259, 9538772561 ಸಂಪರ್ಕಿಸಬಹುದು.

ಛಾಯಾದೇವಿ ದೇವಾಲಯದ ಉದ್ಘಾಟನೆ



ಪಿರಿಯಾಪಟ್ಟಣ, ಮೇ 26 (ವೀರೇಶ್)– ಪಟ್ಟಣದ ಶನೇಶ್ವರ ದೇವಾಲಯದ ಆವರಣದಲ್ಲಿ 20ಲಕ್ಷ ವೆಚ್ಚದಡಿ ನಿರ್ಮಿಸಿರುವ ಛಾಯಾ ದೇವಿ ದೇವಾಲಯದ ಉದ್ಘಾಟನಾ ಸಮಾರಂಭ ನಡೆಯಿತು.

ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು ನಡೆಸಲಾಯಿತು. ಇದೇ ವೇಳೆ ಮಹಿಳೆಯರಿಗೆ ಸೀರೆ ಮತ್ತಿತರ ವಸ್ತ್ರಗಳನ್ನು ದಾನ ಮಾಡಲಾಯಿತು. ಬಳಿಕ, ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಶಾಸಕ ಕೆ.ವೆಂಕಟೇಶ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಜನರು ಧಾರ್ಮಿಕ ಚಟುವಟಿಕೆಗಳಲ್ಲಿ ಹೆಚ್ಚು ಪಾಲ್ಗೊಳ್ಳುತ್ತಿರುವುದು ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿದೆ ಎಂದು ಹೇಳಿದರು. ದೇವಾಲಯ ನಿರ್ಮಾಣಕ್ಕೆ ಬಡವರು, ಶ್ರೀಮಂತರು ಎನ್ನದೆ ಎಲ್ಲ ವರ್ಗದ ಜನರು ಧನಸಹಾಯ ಮಾಡುತ್ತಿರುವುದು ನಿಜಕ್ಕೂ ದೇವರ ಮೇಲಿರುವ ನಂಬಿಕೆ ವಿಶ್ವಾಸದ ದ್ಯೋತಕವಾಗಿದೆ ಎಂದರು. ಈ ವೇಳೆ ಅರ್ಚಕ ವಿಷ್ಣು, ನಂದಿನಿ ಕೃಷ್ಣೇಗೌಡ, ಚಂದ್ರೇಗೌಡ, ಕಿಶೋರ್, ಡಿ.ದೇವಣ್ಣ, ಸತೀಶ್ ಸೇರಿದಂತೆ ಇತರರಿದ್ದರು.

ಮಳೆ ಹಾನಿ ನಷ್ಟ: ತುರ್ತು ಪರಿಹಾರಕ್ಕೆ ದಸಂಸ ಆಗ್ರಹ

ಹುಣಸೂರು, ಮೇ 26(ಕೆಕೆ)– ಇತ್ತೀಚೆಗೆ ಬಿದ್ದ ಭಾರೀ ಮಳೆಯಿಂದಾಗಿ ತಾಲೂಕಿನ ನಗರ ಮತ್ತು ಹಲವು ಗ್ರಾಮಗಳಲ್ಲಿ ಸುಮಾರು 400ಕ್ಕೂ ಹೆಚ್ಚು ವಾಸದ ಮನೆಗಳು ನೆಲಸಮವಾಗಿದ್ದು, ಇದರಿಂದ ಬಡವರು, ದಲಿತ ಕುಟುಂಬಗಳು ಬೀದಿಗೆ ಬಿದ್ದಿವೆ. ಹಾಗಾಗಿ, ಸರ್ಕಾರ ಶೀಘ್ರವೇ ಪರಿಹಾರ ನೀಡಬೇಕು ಎಂದು ತಾಲ್ಲೂಕು ದಸಂಸ ಮತ್ತು ಆದಿ ಜಾಂಬವ ಸಂಘದಿಂದ ಒತ್ತಾಯಿಸಲಾಯಿತು.

ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿ, ತಾಲೂಕಿನಲ್ಲಿ ವಾರದಿಂದ ಎಡೆಬಿಡದೆ ಸುರಿದ ಮಳೆಯಿಂದ 400ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಬಾಳೆ, ತೆಂಗು, ಅಡಿಕೆ, ಹೊಗೆಸೊಪ್ಪು ಬೆಳೆಗಳು ನಷ್ಟವಾಗಿದ್ದು, ರೈತರ ಬದುಕು ಚಿಂತಾಜನಕವಾಗಿದೆ. ಇದರಿಂದ ಬಡವರು, ದಲಿತರು, ರೈತ ಕುಟುಂಬಗಳು ಕಂಗಾಲಾಗಿ ಬೀದಿಗೆ ಬಿದ್ದಿದ್ದು, ತಾಲೂಕು ಆಡಳಿತ ಅಧಿಕಾರಿಗಳು ತುರ್ತಾಗಿ ಸರ್ಕಾರಕ್ಕೆ ವರದಿ ನೀಡಿ, ಪರಿಹಾರದ ನಷ್ಟವನ್ನು ಅರ್ಹರಿಗೆ ನೀಡಬೇಕು ಎಂದು ಮನವಿ ಮಾಡಿದ್ದರು. ಈ ವೇಳೆ ದಸಂಸ ದೇವೇಂದ್ರ ಕುಳುವಾಡಿ, ಕಿರಿಜಾಜಿ ಗಜೇಂದ್ರ, ಬಲ್ಲೇನಹಳ್ಳಿ ಕೆಂಪರಾಜು, ಪೌರಕಾರ್ಮಿಕ ಸಂಘದ ಮುರುಗೇಶ, ಮಾದ, ಆದಿ ಜಾಂಬವ ಸಂಘದ ಡಿ.ಕುಮಾರ್, ಬಿ.ಶಿವಣ್ಣ, ಮುಖಂಡ ಬಸವಲಿಂಗಯ್ಯ ಇದ್ದರು.

ಮಳೆಯಿಂದ ಮನೆ ಕಳೆದುಕೊಂಡ ಕುಟುಂಬಕ್ಕೆ ದಿನಸಿ ಕಿಟ್ ವಿತರಣೆ



ತಿ.ನರಸೀಪುರ, ಮೇ 26(ಎಸ್‌ಕೆ)– ತಾಲೂಕಿನಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದ ಮನೆ ಕಳೆದುಕೊಂಡ ಎಡದೊರೆ ಗ್ರಾಮದ ಕುಟುಂಬಕ್ಕೆ ವಿಧಾನಪರಿಷತ್ ಮಾಜಿ ಸದಸ್ಯ ಆರ್.ಧರ್ಮಸೇನಾ ದಿನಸಿ ಕಿಟ್ ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ಮಳೆಯಿಂದ ಮನೆ ಹಾನಿಗೊಳಗಾದ ಪುಷ್ಪ ಅವರ ಕುಟುಂಬಕ್ಕೆ ಕಿಟ್ ವಿತರಿಸಿದ್ದೇವೆ. ಅವರಿಗೆ ವಸತಿ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ತಹಸೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ. ಗ್ರಾಪಂ ಮೂಲಕ ವಸತಿ ಯೋಜನೆ ಆಯ್ಕೆ ಪ್ರಕ್ರಿಯೆ ನಡೆಯುವುದರಿಂದ ಇಂತಹ ಕುಟುಂಬಗಳನ್ನು ಗುರುತಿಸಿ ವಿಶೇಷವಾಗಿ ವಸತಿ ಸೌಲಭ್ಯ ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ ಎಂದರು.

ಕಾಂಗ್ರೆಸ್ ವೈದ್ಯಕೀಯ ವಿಭಾಗದ ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ.ಪ್ರದೀಪ್ ಮಾತನಾಡಿ, ಎಡದೊರೆ ಒಂದನೇ ವಾರ್ಡ್‌ನಲ್ಲಿರುವ ಈ ಕುಟುಂಬ ಮಳೆ ಹಾನಿಗೆ ತುತ್ತಾಗಿದೆ. ಅವರಿಗೆ ಸರ್ಕಾರಿ ಸೌಲಭ್ಯ ದೊರಕಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಒತ್ತಾಯ ಮಾಡಿದ್ದೇವೆ. ಅರ್ಜಿ ಸಲ್ಲಿಸಲು ತಿಳಿಸಿದ್ದೇವೆ ಎಂದು ತಿಳಿಸಿದರು. ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್ ಚಾವ್ಲಾ, ವಿಜಾಪುರ ರಮೇಶ್ ಇದ್ದಾರೆ.

ಅಪರಾಧ ಕೃತ್ಯ ಪತ್ತೆಗೆ ಸಿಸಿ ಕ್ಯಾಮರಾ ಸಹಕಾರಿ

ಅಪರಾಧ ತಡೆ ಮುನ್ನೆಚ್ಚರಿಕೆ ಸಭೆಯಲ್ಲಿ ವೃತ್ತ ನಿರೀಕ್ಷಕ ಎನ್.ಆನಂದ್



ಸರಗೂರು, ಮೇ 26 (ನಾಗೇಶ್)– ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಅಪರಾಧ ತಡೆ ಮುನ್ನೆಚ್ಚರಿಕೆ ಕ್ರಮವಾಗಿ ಸರಗೂರು ಪೊಲೀಸರು, ವರ್ತಕರು, ಆಭರಣ ಅಂಗಡಿ ಮಾಲೀಕರ ಸಭೆ ನಡೆಯಿತು.

ಕಾನೂನು ಸುವ್ಯವಸ್ಥೆ ಕಾಪಾಡಲು, ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಪೊಲೀಸ್ ಠಾಣಾ ವ್ಯಾಪ್ತಿಯ ಜನನಿಬಿಡ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ವೇಳೆ ವೃತ್ತ ನಿರೀಕ್ಷಕ ಎನ್.ಆನಂದ್ ಮಾತನಾಡಿ, ಅಪರಾಧ ಕೃತ್ಯಗಳನ್ನು ಮಾಡಬಾರದು. ಕಾನೂನುಬಾಹಿರ ಕೃತ್ಯಗಳನ್ನು ಯಾರೇ ಮಾಡಿದರೂ ಶಿಕ್ಷೆ ಕಟ್ಟಿಟ್ಟಬುತ್ತಿ. ಅಂತಹ ಕೃತ್ಯಗಳನ್ನು ಎಸಗಿದ ಅಪರಾಧಿಗಳನ್ನು ಶೀಘ್ರದಲ್ಲೇ ಪತ್ತೆ ಹಚ್ಚಲು ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿದರೆ ಪೊಲೀಸರಿಗೆ ಅನುಕೂಲವಾಗಲಿದೆ. ಈ ನಿಟ್ಟಿನಲ್ಲಿ ವರ್ತಕರು, ಆಭರಣ ಅಂಗಡಿ ಮಾಲೀಕರು ಸಹಕಾರ ನೀಡಬೇಕು ಎಂದರು.

ಸಾರ್ವಜನಿಕ ರಕ್ಷಣೆ ಕಾಯ್ದೆ ಪ್ರಕಾರ 100ಕ್ಕಿಂತ ಹೆಚ್ಚು ಜನ ಸೇರುವ ಸ್ಥಳಗಳಾದ ಮಸೀದಿ, ಚರ್ಚ್, ದೇವಸ್ಥಾನ ಹಾಗೂ ಅಂಗಡಿ, ಹೋಟೆಲ್‌ಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕು. ಇದರಿಂದ ಕಳ್ಳತನ, ದರೋಡೆ ಪ್ರಕರಣಗಳನ್ನು ಪತ್ತೆ ಹಚ್ಚಲು ನೆರವಾಗಲಿದೆ ಎಂದರು. ಸಬ್ ಇನ್‌ಸ್ಪೆಕ್ಟರ್ ಶ್ರವಣ ದಾಸ್ ರೆಡ್ಡಿ ಮಾತನಾಡಿದರು. ಸಭೆಯಲ್ಲಿ ವರ್ತಕರ ಸಂಘದ ಮಾಜಿ ಅಧ್ಯಕ್ಷ ಎಸ್.ನಾರಾಯಣ್, ಎನ್.ಎಸ್.ಪ್ರತಾಪ್, ಸೋಮಪ್ರಭ ನಟರಾಜ್, ರಾಮ್, ಸಿಬ್ಬಂದಿ ಇಮ್ರಾನ್‌ಅಹಮ್ಮದ್, ಆನಂದ್, ನಾಗನಾಯಕ, ಸೋಮನಾಯಕ, ಶ್ರೀಕಂಠಸ್ವಾಮಿ, ಶಿವಕುಮಾರ್, ಗೋವಿಂದ, ಶಿವಪ್ಪ ಸೇರಿದಂತೆ ವರ್ತಕರು, ಆಭರಣ ಅಂಗಡಿ ಮಾಲೀಕರು ಹಾಜರಿದ್ದರು.

ಮಧು ಜಿ.ಮಾದೇಗೌಡ ಪರ ಧ್ರುವನಾರಾಯಣ್ ಮತಪ್ರಚಾರ



ನಂಜನಗೂಡು, ಮೇ 26(ಸುದರ್ಶನ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಧು ಜಿ.ಮಾದೇಗೌಡ ಅವರ ಪರವಾಗಿ ಗುರುವಾರ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರು, ಪಟ್ಟಣದ ವಿವಿಧ ಶಾಲೆಗಳಿಗೆ ತೆರಳಿ, ಬಿರುಸಿನ ಮತ ಪ್ರಚಾರ ಮಾಡಿದರು.

ಬಳಿಕ ಮಾತನಾಡಿದ ಅವರು, ದಕ್ಷಿಣ ಪದವೀಧರ ಕ್ಷೇತ್ರದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆ ಪಕ್ಷದ ಅಭ್ಯರ್ಥಿ ಮಧು ಮಾದೇಗೌಡ ಅವರಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು.

ಮಧು ಜಿ.ಮಾದೇಗೌಡ ಅವರು ಶೈಕ್ಷಣಿಕ ಪ್ರಗತಿಗೆ ಅಪಾರ ಕೊಡುಗೆ ನೀಡಿದ್ದಾರೆ. ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿ ಹಲವು ವಿದ್ಯಾಸಂಸ್ಥೆಗಳನ್ನು ನಿರ್ಮಿಸಿ ಯುವಕ–ಯುವತಿಯರಿಗೆ ಶಿಕ್ಷಣ ನೀಡುತ್ತಿದ್ದಾರೆ. ಇವರಿಗೆ ಶಿಕ್ಷಣದ ಬಗ್ಗೆ ಹೆಚ್ಚು ಅರಿವಿರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಇರುವ ಹಲವು ತೊಂದರೆಗಳನ್ನು ನಿವಾರಿಸಲು ಪ್ರಬುದ್ಧರಾಗಿದ್ದಾರೆ. ಹಾಗಾಗಿ, ಪದವೀಧರರು ಪಕ್ಷದ ಅಭ್ಯರ್ಥಿಗೆ ಮತ ನೀಡಬೇಕು ಎಂದರು.

ಈಗಿರುವ ಬಿಜೆಪಿ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿಮೀರಿದೆ. ಯಾವುದೇ ಕೆಲಸಕ್ಕೆ ಕಮಿಷನ್ ನೀಡಬೇಕು. ಇನ್ನು ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದು 8 ವರ್ಷ ಕಳೆಯುತ್ತಿದೆ. ಇವರು ಅಧಿಕಾರಕ್ಕೆ ಬರುವ ಮುಂಚೆ ಪ್ರಣಾಳಿಕೆಯಲ್ಲಿ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ, ಯಾವುದೇ ಉದ್ಯೋಗ ಸೃಷ್ಟಿ ಮಾಡದೆ ನಿರುದ್ಯೋಗಿಗಳು ಹೆಚ್ಚುವಂತೆ ಮಾಡಿದ್ದಾರೆ ಎಂದು ದೂರಿದರು.

ಅಭ್ಯರ್ಥಿ ಮಧು ಜಿ.ಮಾದೇಗೌಡ ಮಾತನಾಡಿ, 1.33 ಲಕ್ಷ ಪದವೀಧರರಿದ್ದಾರೆ. ನಾನು ಸುಮಾರು 65 ಸಾವಿರ ಮತದಾರರನ್ನು ಭೇಟಿಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಎಲ್ಲರನ್ನೂ ಭೇಟಿ ಮಾಡುತ್ತೇನೆ. ನಾನು ಹೋದ ಕಡೆ ಉತ್ತಮ ಬೆಂಬಲ ದೊರೆಯುತ್ತಿದೆ. ಜೊತೆಗೆ ನಮ್ಮ ಪಕ್ಷದ ಮುಖಂಡರು, ಕಾರ್ಯಕರ್ತರು ಪದವೀಧರರನ್ನು ಭೇಟಿಯಾಗಿ ಮತಯಾಚನೆ ಮಾಡುತ್ತಿರುವುದು ನನಗೆ ಆನೆಬಲ ಬಂದಂತಾಗಿದೆ. ಈ ಬಾರಿ ಗೆಲ್ಲುವ ನಿರೀಕ್ಷೆ ಇಟ್ಟುಕೊಂಡಿದ್ದೇನೆ ಎಂದು ಭರವಸೆ ವ್ಯಕ್ತಪಡಿಸಿದರು. ಈ ವೇಳೆ ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಮಾಜಿ ಕೃಷ್ಣಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಮುಖಂಡರಾದ ಎಡತಲೆ ದೊರೆಸ್ವಾಮಿ, ಶಂಕರ್, ಮುದ್ದುಮಾದಶೆಟ್ಟಿ, ಬಿ.ಎಂ.ರಾಮು, ಲತಾ, ಸಿದ್ದಶೆಟ್ಟಿ, ಅಶೋಕ್, ನಾಗರಾಜಯ್ಯ, ಶಿವಪ್ಪ ದೇವರು ಸೇರಿದಂತೆ ಇತರರು ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.11.15ಕ್ಕೆ, ದಿ ಬ್ಯಾಡ್ ಗಾಯ್ಸ್ (3ಡಿ)(ಇಂ): ಮ.1.45ಕ್ಕೆ, ರಾ.9.55ಕ್ಕೆ, ಕೆಜಿಎಫ್ 2 (ಕ): ಸಂ.4ಕ್ಕೆ, ಧಾಕಡ್(ಹಿಂ): ರಾ.7.20ಕ್ಕೆ.

ಸ್ಕ್ರೀನ್ 2 ಗರುಡ(ಕ): ಬೆ.10.20ಕ್ಕೆ, ಪ್ರಾರಂಭ (ಕ): ಮ.1.10ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.4.15ಕ್ಕೆ, ಸಹುಟುಂಬ ಸಮೇತ (ಕ): ರಾ.7.30ಕ್ಕೆ, ಜೊ & ಜೊ(ಮ): ರಾ.9.50ಕ್ಕೆ.

ಸ್ಕ್ರೀನ್ 3 ಅಂಗರ್ (ಕ): ಬೆ.10.45ಕ್ಕೆ, ನೆಂಜುಕು ನೀದಿ (ತ): ಮ.1.30ಕ್ಕೆ, ಅವತಾರ ಪುರುಷ (ಕ): ಸಂ.4.15ಕ್ಕೆ, ಕೆಜಿಎಫ್ 2(ಕ): ಸಂ.6.40ಕ್ಕೆ, ಧಾಕಡ್ (ಹಿಂ): ರಾ.10ಕ್ಕೆ.

ಸ್ಕ್ರೀನ್ 4 ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಸಂ.4.35ಕ್ಕೆ, ಕೆಜಿಎಫ್ 2(ಕ): ಮ.1.10ಕ್ಕೆ, ಬೂಲ್ ಬುಲಯ್ಯಾ (ಹಿಂ): ರಾ.7ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1 ದಿ ಬ್ಯಾಡ್ ಗಾಯ್ಸ್ (3ಡಿ)(ಹಿಂ): ಬೆ.11ಕ್ಕೆ, ರಾ.7.30ಕ್ಕೆ, ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಮ.1.15ಕ್ಕೆ, ಕೆಜಿಎಫ್ 2(ಕ): ಸಂ.4ಕ್ಕೆ, ಸರ್ಕಾರು ವಾರಿ ಪಾಟ (ತೆ): ರಾ.9.50ಕ್ಕೆ.

ಸ್ಕ್ರೀನ್ 2 ಬೂಲ್ ಬುಲಯ್ಯಾ 2(ಹಿಂ): ಬೆ.9.45ಕ್ಕೆ, ಮ.12.45, ಸಂ.6.35ಕ್ಕೆ, ರಾ.9.40ಕ್ಕೆ, ಧಾಕಡ್ (ಹಿಂ): ಮ.3.45ಕ್ಕೆ.

ಸ್ಕ್ರೀನ್ 3 ಸಾರ ಮನ್ನ (ಕ): ಬೆ.10.40ಕ್ಕೆ, ಗರುಡ (ಕ): ಮ.1.25ಕ್ಕೆ, ಪ್ರಾರಂಭ (ಕ): ಸಂ.4.25ಕ್ಕೆ, ಅವತಾರ ಪುರುಷ (ಕ): ರಾ.7.15ಕ್ಕೆ, ಧಾಕಡ್ (ಹಿಂ): ರಾ.10ಕ್ಕೆ.

ಸ್ಕ್ರೀನ್ 4 ಕೆಜಿಎಫ್ 2(ಕ): ಬೆ.10ಕ್ಕೆ, ಸಹುಟುಂಬ ಸಮೇತ (ಕ): ಮ.1.10ಕ್ಕೆ, ನೆಂಜುಕು ನೀದಿ (ತ): ಮ.3.55ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.55ಕ್ಕೆ, ಜೊ & ಜೊ (ಮ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಕಟಿಂಗ್ ಶಾಪ್ (ಕ): ಬೆ.10.55ಕ್ಕೆ, ಪ್ರಾರಂಭ (ಕ): ಮ.1.25ಕ್ಕೆ, ಸಹುಟುಂಬ ಸಮೇತ (ಕ): ಸಂ.4.30ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.40ಕ್ಕೆ, ಧಾಕಡ್ (ಹಿಂ): ರಾ.9ಕ್ಕೆ.

ಸ್ಕ್ರೀನ್ 2 ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಕಂಡ್ಹಿಡಿ ನೋಡನ (ಕ): ಮ.1.15ಕ್ಕೆ, ಕೆಜಿಎಫ್ 2 (ಕ): ಸಂ.4.30ಕ್ಕೆ, ರಾ.7.45ಕ್ಕೆ.

ಸ್ಕ್ರೀನ್ 3 ಸರ್ಕಾರು ವಾರಿ ಪಾಟ (ತೆ): ಸಂ.6.45ಕ್ಕೆ.

ಸ್ಕ್ರೀನ್ 4 ಅಂಗರ್ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.10ಕ್ಕೆ, ಧಾಕಡ್ (ಹಿಂ): ಮ.3.50ಕ್ಕೆ, ನೆಂಜುಕು ನೀದಿ (ತ): ಸಂ.6.20ಕ್ಕೆ, ಡಾನ್ (ತ): ರಾ.9ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139
ಫೋರಂ ಸೆಂಟರ್‌ಸಿಟಿ ಮಾಲ್, 3ನೇ ಮಹಡಿ,

ಕೆಜಿಎಫ್ 2(ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಜೆರ್ಸಿ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್(ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರಿಕ ಮಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯಿ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	**(ದೂ: 2521923)**
ಪ್ರೀತ್ಸು (ಕ)	2 ಪ್ರದರ್ಶನಗಳು
ಎಫ್ 3 (ತೆ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	**(ದೂ: 2520009)**
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಅನೇಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕಾಣೆಯಾದವರ ಬಗ್ಗೆ ಪ್ರಕಟಣೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವ್ಹೀಲ್ ಚೇರ್ ರೋಮಿಯೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ತಾಪ್ ಗನ್ ಮಾವರಿಕ್ (ಇ)	4 ಪ್ರದರ್ಶನಗಳು
ಸಂಗಂ	
ಕಾಣೆಯಾದವರ ಬಗ್ಗೆ ಪ್ರಕಟಣೆ (ಕ)	4 ಪ್ರದರ್ಶನಗಳು
ಲಿಡೋ	
ಕಿರಿಕ್ ಶಂಕರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಿರಿಕ್ ಶಂಕರ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಸೀತಾಯನ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು

ಗೋಡೆ ಕುಸಿದು ವೃದ್ಧ ಸಾವು



ಹೆಚ್.ಡಿ.ಕೋಟೆ, ಮೇ 26(ಮಂಜು)– ವೃದ್ಧನೊಬ್ಬನ ಮೇಲೆ ಗೋಡೆ ಕುಸಿದು ಬಿದ್ದ ಪರಿಣಾಮ ಆತ ಸಾವನ್ನಪ್ಪಿರುವ ಘಟನೆ ಪಟ್ಟಣದ ಶಿವಾಜಿ ರಸ್ತೆಯಲ್ಲಿ ಬುಧವಾರ ನಡೆದಿದೆ.

ಇಲ್ಲಿನ ನಿವಾಸಿ ಪರಶಿವಮೂರ್ತಿ(62) ಮೃತಪಟ್ಟ ವೃದ್ಧ. ಇವರು ಪಟ್ಟಣದ ಮುಸ್ಲಿಂ ಬ್ಲಾಕ್‌ನ ಸಮೀಉಲ್ಲಾ ಅವರ ಮನೆಯಲ್ಲಿ ಬಾಡಿಗೆಗೆ ಇದ್ದರು. ಬುಧವಾರ ಸುರಿದ ಮಳೆಯಿಂದ ಶೀತಲಗೊಂಡಿದ್ದ ಮನೆ ಗೋಡೆ ಪರಶಿವಮೂರ್ತಿ ಅವರ ಮೇಲೆ ಕುಸಿದು ಬಿದ್ದಿದೆ. ಪರಿಣಾಮ ತೀವ್ರ ಗಾಯಗೊಂಡ ಅವರನ್ನು ಅಕ್ಕಪಕ್ಕದ ಮನೆಯವರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಆತ ಸಾವನ್ನಪ್ಪಿದ್ದಾನೆ. ಸ್ಥಳಕ್ಕೆ ತಹಸೀಲ್ದಾರ್ ರತ್ನಾಂಬಿಕೆ, ಕಂದಾಯ ಅಧಿಕಾರಿ ಮಹೇಶ್ ಹಾಗೂ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.


ರಾಜಕೀಯ ಎದುರಾಳಿಗಳ ಮುಗಿಸುವುದೇ ಬಿಜೆಪಿ ಅಜೆಂಡಾ

● ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆರೋಪ ● ಇ.ಡಿ. ತಮ್ಮ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿರುವುದಕ್ಕೆ ಆಕ್ರೋಶ ● ಪ್ರಬಲರ ವಿರುದ್ಧ ಇದು ಮಾಮೂಲು; ಎದುರಿಸಬೇಕು ಇಲ್ಲ ಇವರೊಂದಿಗೆ ಹೋಗಬೇಕು

ಬೆಂಗಳೂರು,ಮೇ 26 (ಕೆಎಂಶಿ)– ರಾಜಕೀಯವಾಗಿ ತಮ್ಮ ಎದುರಾಳಿಗಳನ್ನು ನಿರ್ಮೂಲನೆ ಮಾಡುವುದೇ ಬಿಜೆಪಿಯ ಅಜೆಂಡಾ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆರೋಪಿಸಿದ್ದಾರೆ.

ಅಕ್ರಮ ಆಸ್ತಿ ಹಾಗೂ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಆರ್ಥಿಕ ಜಾರಿ ನಿರ್ದೇಶನಾಲಯ(ಇಡಿ) ಇಂದು ವಿಶೇಷ ಕೋರ್ಟ್‌ನಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದ ಬೆನ್ನಲ್ಲೇ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮನ್ನು ರಾಜಕೀಯವಾಗಿ ನಿರ್ಮೂಲನೆ ಮಾಡುವ ತಂತ್ರ ಇದಾಗಿದೆ ಎಂದರು.

ಪ್ರಬಲರಾದವರು ಅವರ ಜೊತೆ ಹೋಗಬೇಕು, ಇಲ್ಲದಿದ್ದರೆ ಜೈಲು ಶಿಕ್ಷೆ ಅನುಭವಿಸಬೇಕು. ಇದು ಅನ್ಯ ಪಕ್ಷದ ಮುಖಂಡರಿಗೆ ಅಷ್ಟೇ ಅಲ್ಲ, ಸ್ವಪಕ್ಷೀಯರಿಗೂ ಅನ್ವಯಿಸುತ್ತದೆ ಎಂದರು. ಅವರ ಜೊತೆ ಹೋಗದಿದ್ದರೆ, ಕಷ್ಟ ಎದುರಿಸಲು ಸಿದ್ಧರಾಗಬೇಕು. ನನ್ನಂತೆ ಅನೇಕ ಪ್ರಕರಣಗಳು ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಡೆದಿದೆ ಎಂದು ಹರಿಹಾಯ್ದರು. ಈ ಹಿಂದೆ ತಮ್ಮನ್ನು ಬಂಧಿಸಿ ಜೈಲಿಗೆ ಕಳಿಸಲಾಗಿತ್ತಲ್ಲದೆ ತದನಂತರ ಈ ಸಂಬಂಧ ಜಾರಿ ನಿರ್ದೇಶನಾಲಯ ತನಿಖೆ ಮುಂದುವರಿಸಿತ್ತು. ಇದೀಗ ಸತತ ಮೂರು ವರ್ಷಗಳ ತನಿಖೆಯ ನಂತರ ಜಾರಿ ನಿರ್ದೇಶನಾಲಯ ತಮ್ಮ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ ಎಂದರು.



ಇದು ಸಂಪೂರ್ಣ ರಾಜಕೀಯ ಪ್ರೇರಿತ ಆಟ. ಯಾರು ರಾಜಕೀಯವಾಗಿ ತಮಗೆ ಎದುರಾಳಿಗಳೋ ಅವರನ್ನು ನಿರ್ಮೂಲನೆ ಮಾಡುವುದು ಅವರ ಉದ್ದೇಶ. ಅದೇ ನನ್ನ ವಿಷಯದಲ್ಲಿ ನಡೆಯುತ್ತಿದೆ. ಅವರು ಹೀಗೆ ನಿರ್ಮೂಲನೆ ಮಾಡಲು ಹೊರಡುವುದು ಎಂದರೆ ಅವರ ಜತೆ ಹೋಗಬೇಕು. ಇಲ್ಲವೇ ಕಷ್ಟ ಎದುರಿಸಬೇಕು ಎಂದು ಮಾರ್ಮಿಕವಾಗಿ ನುಡಿದರು. ಹಿಂದೆ ನಡೆದ ರಾಜ್ಯಸಭಾ ಚುನಾವಣೆಯ ಫಲಶ್ರುತಿ ಎಂದರು.

ಸೋನಿಯಾಗಾಂಧಿ ಅವರ ರಾಜಕೀಯ ಕಾರ್ಯದರ್ಶಿ ಅಹ್ಮದ್‌ಪಟೇಲ್ ಅವರು ಈ ಹಿಂದೆ ರಾಜ್ಯಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ನಮ್ಮ ಆಪ್ತರ ಮನೆಯ ಮೇಲೆ ಧಾಳಿ ನಡೆಸಲಾಯಿತು. ಅವರು ವ್ಯವಹಾರಕ್ಕೆಂದು ಇಟ್ಟುಕೊಂಡ ಹಣವನ್ನು ಅಕ್ರಮ ಎಂದು ಹೇಳಲಾಯಿತು. ನನ್ನನ್ನೂ ಇದರಲ್ಲಿ ಸಿಲುಕಿಸಲು ಹೊರಟಿದ್ದಾರೆ.ಆದರೆ ನನ್ನನ್ನು ಬಂಧಿಸಿದ ಅರವತ್ತು ದಿನಗಳಲ್ಲಿ ಜಾರಿ ನಿರ್ದೇಶನಾಲಯ ದೋಷಾರೋಪ ಪಟ್ಟಿ ಸಲ್ಲಿಸಬೇಕಿತ್ತು. ಆದರೆ ಅವರು ಸಲ್ಲಿಸಲಿಲ್ಲ.ಯಾವ ಕಾರಣಕ್ಕಾಗಿ ಎಂಬುದು ನನಗೆ ಗೊತ್ತಿಲ್ಲ ಎಂದು ಅವರು ಹೇಳಿದರು.

ಸತತ ಮೂರು ವರ್ಷಗಳ ತನಿಖೆಯ ನಂತರ ಅವರು ಈಗ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ. ಅದರಲ್ಲಿ ಏನಿದೆಯೋ ನನಗೆ ಗೊತ್ತಿಲ್ಲ. ಆದಾಯ ತೆರಿಗೆ ಇಲಾಖೆಯವರು ಇಂತಹ ಸಂದರ್ಭಗಳಲ್ಲಿ ಇರುವುದನ್ನು ಬಿಟ್ಟು ಬೇರೆ ಸೇರಿಸುವುದಿಲ್ಲ. ಆದರೆ ಜಾರಿ ನಿರ್ದೇಶನಾಲಯದವರು ಸೇರಿಸುತ್ತಾರೆ. ಹೀಗಾಗಿ ನನ್ನ ವಿಷಯದಲ್ಲಿ ದೋಷಾರೋಪ ಪಟ್ಟಿಯಲ್ಲಿ ಏನೇನು ಸಲ್ಲಿಸಿದ್ದಾರೋ ನೋಡಬೇಕು. ಇಷ್ಟಾದರೂ ನಾನು ಈ ನೆಲದ ನಾಗರಿಕ. ನೆಲದ ಕಾನೂನನ್ನು ಗೌರವಿಸುತ್ತೇನೆ ಎಂದರು. ಈ ಪ್ರಕರಣದಲ್ಲಿ ನನ್ನನ್ನು ಸಿಲುಕಿಸುವ ಯತ್ನ ನಡೆದಿದೆ ಮತ್ತು ಆಗಸ್ಟ್ ತಿಂಗಳ ವೇಳೆಗೆ ನನ್ನನ್ನು ಜೈಲಿಗೆ ಕಳಿಸಲಾಗುತ್ತದೆ ಎಂದು ನೀವೇ ಹಿಂದೆ ಆರೋಪಿಸಿದ್ದೀರಿ. ಆ ಆರೋಪ ಎರಡು ತಿಂಗಳ ಮುಂಚೆಯೇ ನಿಜವಾಗುವಂತೆ ಕಾಣುತ್ತಿದೆಯೇ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿ, ಆ ಬಗ್ಗೆ ಈಗಲೇ ನಾನು ಏನು ಹೇಳಲಿ ಅಂತ ಪ್ರಶ್ನಿಸಿದರು.

ಆರ್ಥಿಕ ಜಾರಿ ನಿರ್ದೇಶನಾಲಯದ ದೋಷಾರೋಪ ಪಟ್ಟಿಗೆ ನಾವು ಹೆದರುವುದಿಲ್ಲ. ಏನನ್ನೇ ಆದರೂ ಎದುರಿಸುತ್ತೇವೆ ಎಂದು ನಿಮ್ಮ ಸಹೋದರ ಡಿ.ಕೆ.ಸುರೇಶ್ ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಅವರು ಹೇಳಿದ್ದು ಸಹಜ.ಈಗ ಪರಿಸ್ಥಿತಿಯನ್ನು ಎದುರಿಸಲೇಬೇಕಲ್ಲ. ನೆಲದ ಕಾನೂನಿನ ಮೇಲೆ ಗೌರವವಿಟ್ಟ ನಾವು ಅದನ್ನು ಎದುರಿಸುತ್ತೇವೆ ಎಂದು ವಿವರಣೆ ನೀಡಿದರು.

ನನ್ನ ವಿರುದ್ಧ ಸ್ಥಳೀಯ ಬಿಜೆಪಿ ನಾಯಕರು ಏನೇನೆಲ್ಲ ಹೇಳಿದ್ದರು ಎಂಬುದು ನಿಮಗೂ ಗೊತ್ತಿದೆ. ಅವರು ಏನು ಹೇಳುತ್ತಾರೋ ಅದನ್ನೇ ಮೇಲಿನವರು ಮಾಡುತ್ತಿದ್ದಾರೆ ಎಂದು ಮಾರ್ಮಿಕವಾಗಿ ನುಡಿದರು. ಅಂದ ಹಾಗೆ ರಾಜಕಾರಣದಲ್ಲಿ ಎದುರಾಳಿಯನ್ನು ಮಣಿಸಲು ಇಂತಹ ಪ್ರಯೋಗಗಳು ಸಹಜ. ಅದನ್ನೇ ಬಿಜೆಪಿ ಮಾಡುತ್ತಿದೆ ಎಂದು ಪುನರುಚ್ಚರಿಸಿದರು.

ಮೇ 29, 'ಆಮ್ ಆದ್ಮಿ ಗ್ರಾಮ ಸಂಪರ್ಕ' ಅಭಿಯಾನ

ಮೈಸೂರು, ಮೇ 26(ಎಂಟಿವೈ)– ಗ್ರಾಮೀಣ ಪ್ರದೇಶದಲ್ಲೂ ಆಮ್ ಆದ್ಮಿ ಪಕ್ಷವನ್ನು ಸದೃಢಗೊಳಿಸಲು ಉದ್ದೇಶಿಸಲಾಗಿದ್ದು, ಅದಕ್ಕಾಗಿ ಮೇ 29ರಂದು ಬೆಳಗ್ಗೆ 11ಕ್ಕೆ ಚಾಮರಾಜ ಜೋಡಿ ರಸ್ತೆಯ ಪಂಡಿತ್ ನಾರಾಯಣಾಚಾರ್ಯ ಕಲ್ಯಾಣಮಂದಿರದಲ್ಲಿ ಗ್ರಾಮ ಸಂಪರ್ಕ ಅಭಿಯಾನ ಆಯೋಜಿಸಲಾಗಿದೆ ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷೆ ಮಾಲವಿಕ ಗುಬ್ಬಿವಾಣಿ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಮ್ ಆದ್ಮಿ ಪಕ್ಷಕ್ಕೆ ಎಲ್ಲೆಡೆ ವ್ಯಾಪಕ ಬೆಂಬಲ ದೊರೆಯುತ್ತಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲೂ ಆಮ್ ಆದ್ಮಿ ಪಕ್ಷವನ್ನು ಸಂಘಟಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಗ್ರಾಮ ಸಂಪರ್ಕ ಅಭಿಯಾನದೊಂದಿಗೆ ವಲಯ ಪದಾಧಿಕಾರಿಗಳ ಸಭೆ ನಡೆಯಲಿದೆ. ರಾಜ್ಯಾದ್ಯಂತ ಅಭಿಯಾನ ಹಮ್ಮಿಕೊಳ್ಳುತ್ತಿದ್ದು, ಮೈಸೂರು ಜಿಲ್ಲೆಯಲ್ಲಿಯೂ ಗ್ರಾಮ ಗ್ರಾಮಗಳನ್ನು ತಲುಪಲು ನಿರ್ಧರಿಸಲಾಗಿದೆ. ಇದಲ್ಲದೆ, ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದ ರೈತಸಂಘದ ಬಣ ತಮ್ಮ ಪಕ್ಷಕ್ಕೆ ಸಂಪೂರ್ಣ ಬೆಂಬಲ ನೀಡಿದೆ. ಆಮ್ ಆದ್ಮಿ ಸೇರಲು ಇಚ್ಛಿಸುವವರಿಗಾಗಿ ಸಹಾಯವಾಣಿ ತೆರೆಯಲಾಗಿದ್ದು, ಆಸಕ್ತರು 88844 31221 ಸಂಪರ್ಕಿಸಬಹುದಾಗಿದೆ ಎಂದರು.

ಗ್ರಾಮಾಂತರ ಪ್ರದೇಶದಲ್ಲೂ ಪಕ್ಷ ಸಂಘಟನೆಗೆ ಚಾಲನೆ

ನಮ್ಮ ಪಕ್ಷದ ಸರ್ಕಾರ ಒಂದು ಪರ್ಸೆಂಟ್ ಕಮಿಷನ್ ಪಡೆಯುತ್ತಿದ್ದರೆಂಬ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಓರ್ವ ಆರೋಗ್ಯ ಸಚಿವರನ್ನೇ ವಜಾಗೊಳಿಸಿದೆ. ಆದರೆ ರಾಜ್ಯದ ಬಿಜೆಪಿ ಸರ್ಕಾರದಲ್ಲಿನ ಬಹುತೇಕ ಸಚಿವರ ಮೇಲೆ ಸಾಲು ಸಾಲು ಆರೋಪ ಕೇಳಿ ಬರುತ್ತಿದ್ದರೂ, ಜನರು ಇವರ ರಾಜೀನಾಮೆಗೆ ಒತ್ತಾಯಿಸುತ್ತಿದ್ದರೂ ಮುಖ್ಯಮಂತ್ರಿ ಕ್ರಮ ಕೈಗೊಂಡಿಲ್ಲ. ಹೀಗಾಗಿ ಇಂತಹ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಜಿಲ್ಲಾ ಮಾಧ್ಯಮ ಸಂಯೋಜಕರಾದ ಜಿ.ಆರ್. ವಿದ್ಯಾರಣ್ಯ, ಮುಖಂಡರಾದ ಧರ್ಮಶ್ರೀ, ರೇಣುಕ ಪ್ರಸಾದ್ ಇದ್ದರು.

ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ರದ್ದುಗೊಳಿಸಲು ದಸಂಸ ಆಗ್ರಹ

ಮೈಸೂರು, ಮೇ 26(ಎಂಟಿವೈ)– ಸರ್ಕಾರ ಪಠ್ಯಪುಸ್ತಕ ಪರಿಷ್ಕರಣೆಗಾಗಿ ನೇಮಕ ಮಾಡಿರುವ ರೋಹಿತ್ ಚಕ್ರವರ್ತಿ ನೇತೃತ್ವದ ಸಮಿತಿಯನ್ನು ಕೂಡಲೇ ರದ್ದುಗೊಳಿಸಿ, ಹಿಂದಿನ ಪಠ್ಯಕ್ರಮವನ್ನೇ ಮುಂದುವರೆಸದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯಕೋಟೆ ಎಚ್ಚರಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ನಾಡೋಜ ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಪಠ್ಯ ಪರಿಷ್ಕರಣೆ ಮಾಡಿತ್ತು. ಬಳಿಕ ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ನ್ಯಾಯ, ಲಿಂಗ ಸಮಾನತೆ, ಪ್ರಾದೇಶಿಕತೆ ಒಳಗೊಳ್ಳುವ ಮೂಲಕ ರಚನೆಯಾದ ಪಠ್ಯಗಳನ್ನು ನಮ್ಮ ಮಕ್ಕಳು ಕಲಿಯುತ್ತಿದ್ದರು. ಆದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ರೋಹಿತ್ ಚಕ್ರವರ್ತಿ ಎಂಬುವವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಅದರಲ್ಲಿನ ಏಳು ಮಂದಿ ಒಂದೇ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅದರ ಫಲವಾಗಿ ಪರಿಷ್ಕರಣೆಗೊಂಡಿರುವ ಪಠ್ಯಗಳು ಸುಳ್ಳುಗಳಿಂದ ಕೂಡಿದ್ದು, ದಾರಿತಪ್ಪಿಸುವಂತಿವೆ. ಒಟ್ಟಾರೆಯಾಗಿ ಈ ಪಠ್ಯಗಳು ದಲಿತ, ದಮನಿತ, ಮಹಿಳಾ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವಿರೋಧಿಯಾಗಿವೆ ಎಂದು ಆರೋಪಿಸಿದರು. ಮಾನವೀಯತೆ, ಶಾಂತಿ, ಪ್ರೀತಿ ಮತ್ತು ಮೈತ್ರಿ ಸಾರಿದ ಬುದ್ಧರ ಹೊಸ ಧರ್ಮಗಳ ಉದಯ ಪಠ್ಯವನ್ನು, ಹಿರಿಯ ದಲಿತ ಸಾಹಿತಿ ಅರವಿಂದ ಮಾಲಗತ್ತಿ ಅವರ ಬುದ್ಧನ ಕುರಿತ ಪದ್ಯವನ್ನು ಕೈಬಿಡಲಾಗಿದೆ. ಈ ರೀತಿ ಅನೇಕ ವಿಚಾರಪರ ಪಠ್ಯಗಳನ್ನು ಕೈಬಿಡಲಾಗಿದೆ. ಹೀಗಾಗಿ ಕೂಡಲೇ ಸಮಿತಿಯನ್ನು ವಜಾಗೊಳಿಸುವುದರೊಂದಿಗೆ, ಇಷ್ಟೆಲ್ಲ ಅವಾಂತರಗಳಿಗೆ ಕಾರಣರಾದ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ರಾಜೀನಾಮೆ ನೀಡಬೇಕು. ಇಲ್ಲದಿದ್ದಲ್ಲಿ ಒಕ್ಕೂಟದ ವತಿಯಿಂದ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ, ರತ್ನಪುರಿ ಪುಟ್ಟಸ್ವಾಮಿ, ಕುಕ್ಕೂರು ರಾಜು ಇದ್ದರು.

ತೈಲ ಖರೀದಿಸದೆ ಪ್ರತಿಭಟನೆ

ಪೆಟ್ರೋಲ್ ಮಾರಾಟಗಾರರ ಒಕ್ಕೂಟದಿಂದ ನಿರ್ಧಾರ

ಮೈಸೂರು,ಮೇ 26(ಜಿಎ)– ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ಪೆಟ್ರೋಲಿಯಂ ಮಾರಾಟಗಾರರ ಒಕ್ಕೂಟವು ಇದೇ ತಿಂಗಳ 31ರ ನಂತರ ತೈಲ ಖರೀದಿಸದೆ, ಪ್ರತಿಭಟನೆ ನಡೆಸಲು ಮುಂದಾಗಿದೆ.



2017ರಿಂದ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದ ಮೇಲೆ 1 ರೂ ಕಮಿಷನ್ ನೀಡಬೇಕೆಂಬುದು ಫೆಡರೇಷನ್‌ನ ಪ್ರಮುಖ ಬೇಡಿಕೆಯಾಗಿತ್ತು. ಅಂದಿನಿಂದ ಇಂದಿನವರೆಗೂ ನಮ್ಮ ಬೇಡಿಕೆಗಳನ್ನು ಈಡೇರಿಸಿಲ್ಲ. ಹಾಗಾಗಿ ಇದೇ ತಿಂಗಳ 31ರಂದು ನಾವು ತೈಲ ಡಿಪೋಗಳಿಂದ ಇಂಧನ ಖರೀದಿ ಮಾಡದೆ ಪ್ರತಿಭಟನೆ ಮಾಡುತ್ತೇವೆ ಎಂದು ಫೆಡರೇಷನ್‌ನ ಪ್ರಮುಖರೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಮ್ಮ ಈ ನಿರ್ಧಾರದಿಂದ ಸಾರ್ವಜನಿಕರಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ. ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಸ್ಟಾಕ್ ಇರಲಿದ್ದು, ಇದರ ಪರಿಣಾಮ ತೈಲ ಕಂಪನಿಗಳು ಎದುರಿಸಲಿವೆ. ಸಿಎಂ ಬಸವರಾಜ ಬೊಮ್ಮಾಯಿ ದಾವೋಸ್‌ನಿಂದ ಹಿಂತಿರುಗಿದ ನಂತರ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಮನವಿ ಮಾಡುತ್ತೇವೆ ಹಾಗೂ ಕೇಂದ್ರ ಪೆಟ್ರೋಲಿಯಂ ಸಚಿವರನ್ನು ಸಹ ಭೇಟಿ ಮಾಡಲಿದ್ದೇವೆ ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ

ಐವರು ಶಿಕ್ಷಕರು ಸೇರಿ 7 ಮಂದಿ ವಶಕ್ಕೆ

ರಾಮನಗರ, ಮೇ 26– ಇತ್ತೀಚೆಗಷ್ಟೇ ಮುಕ್ತಾಯಗೊಂಡ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆ ಆರಂಭಕ್ಕೂ ಮುನ್ನವೇ ವಾಟ್ಸಾಪ್‌ನಲ್ಲಿ ಸೋರಿಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲೆಯೊಂದರ ಪ್ರಿನ್ಸಿಪಾಲ್, ಪತ್ರಕರ್ತ ಹಾಗೂ ನಾಲ್ವರು ಶಿಕ್ಷಕರು ಸೇರಿದಂತೆ ಏಳು ಮಂದಿಯನ್ನು ಮಾಗಡಿ ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ.

ಪರೀಕ್ಷೆ ಆರಂಭಕ್ಕೂ ಮುನ್ನವೇ ವಾಟ್ಸಾಪ್ ಮೂಲಕ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಕಳುಹಿಸಿ ಪರೀಕ್ಷೆ ಬರೆಯಲು ಅನುಕೂಲ ಮಾಡಿಕೊಟ್ಟ ಖಾಸಗಿ ಶಾಲೆಯ ಶಿಕ್ಷಕರು ಸೇರಿದಂತೆ ಕೆಲವರು ಇದೀಗ ಪೊಲೀಸರ ಅತಿಥಿಯಾಗಿದ್ದಾರೆ. ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಕೂಡ ಬಂದಿದೆ. ಆದರೆ ಪರೀಕ್ಷೆಯಲ್ಲಿ ಭಾರೀ ಅಕ್ರಮ ನಡೆದಿರುವುದು ಇದೀಗ ಬೆಳಕಿಗೆ ಬಂದಿದೆ. ಪ್ರಕರಣ ಸಂಬಂಧ ಪೊಲೀಸರು ಇದುವರೆಗೂ ಏಳು ಜನರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ರಾಮನಗರ ಜಿಲ್ಲೆ ಮಾಗಡಿ ಪಟ್ಟಣದ ಕೆಂಪೇಗೌಡ ಪ್ರೌಢಶಾಲೆಯ ಗುಮಾಸ್ತ ರಂಗೇಗೌಡ ಎಂಬಾತ, ಏಪ್ರಿಲ್ 11ರಂದು ವಿಜ್ಞಾನ ಪ್ರಶ್ನೆಪತ್ರಿಕೆಯನ್ನು ಕೆಂಪೇಗೌಡ ಪ್ರೌಢಶಾಲೆಯ ಮುಖ್ಯಶಿಕ್ಷಕರು ಹಾಗೂ ಶಿಕ್ಷಕರು ಇರುವ ಎಚ್‌ಎಂ ಮಾಗಡಿ ಟೌನ್ ಎಂಬ ವಾಟ್ಸಾಪ್ ಗ್ರೂಪ್‌ಗೆ ಹರಿಬಿಟ್ಟಿದ್ದ. ಈ ವಿಚಾರ ಗೊತ್ತಿದ್ದರೂ ಕೆಲವರು ಸುಮ್ಮನೇ ಇದ್ದರು.

ಜಿಂಕೆ ಬೇಟೆ: ಓರ್ವನ ಬಂಧನ; ಉಳಿದವರಿಗೆ ಶೋಧ



ಮೈಸೂರು,ಮೇ 26(ಎಸ್‌ಬಿಡಿ)– ಜಿಂಕೆಯನ್ನು ಬೇಟೆಯಾಡಿ ಮಾಂಸ ಹಂಚಿಕೊಳ್ಳುತ್ತಿದ್ದ ಗುಂಪಿನ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ದಾಳಿ ನಡೆಸಿ ಓರ್ವನನ್ನು ಬಂಧಿಸಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹೆಡಿಯಾಲ ಉಪ–ವಿಭಾಗ ಮೊಳೆಯೂರು ವಲಯ ಹಾಗೂ ಶಾಖೆಯ ನಡಾಡಿಗಸ್ತಿನ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಸರಗೂರು ತಾಲೂಕು, ಕಂದಲಿಕೆ ಹೋಬಳಿ ಕೆಬ್ಬೇಪುರ ಎ ಹಾಡಿ ನಿವಾಸಿ ಶೇಖರ್(42)ನನ್ನು ಬಂಧಿಸಲಾಗಿದೆ.

ದಾಳಿ ವೇಳೆ ಪರಾರಿಯಾಗಿರುವ ಕೆಬ್ಬೇಪುರ ಹಾಡಿಯವರೇ ಆದ ಮಾಸ್ತಿ(35 ವರ್ಷ), ಕರಿಯ(40), ಮಂದಣ್ಣ(60), ಕುಳ್ಳ(25), ಶೇಖರ(35), ಕುಳ್ಳ(45), ಕರಿಯಪ್ಪ(38), ಕರಿಯಪ್ಪ(31), ದಾಸ(27), ಬಿಳಿಯ(35), ಗಣೇಶ(38), ರಾಜು(52–ಹೀರೇಹಳ್ಳಿ), ಬಿ.ರಾಜು(40), ಬಸಪ್ಪ(25) ಹಾಗೂ ಕರಿಯ(28)ನ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ. ಮೊಳೆಯೂರು ಹಾಗೂ ಕುರ್ಣೆಗಾಲ ಶಾಖೆಯ ಉಪ ವಲಯ ಅರಣ್ಯಾಧಿಕಾರಿ ಮೋಜಣಿದಾರ ನೇತೃತ್ವದಲ್ಲಿ ವಲಯದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬಂಧಿಸಿರುವ ಆರೋಪಿ ಶೇಖರ್‌ನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಸಂಬಂಧ ತನಿಖೆ ಮುಂದುವರೆಸಲಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ದಾಳಿ ವೇಳೆ ಸುಮಾರು 7 ಕೆಜಿ. ಮಾಂಸ, ಪಾತ್ರೆಗಳು, ಕಸದ ಬುಟ್ಟಿ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಸ್ಥಳದಲ್ಲಿ ಅರ್ಧ ಕೆಜಿಯಷ್ಟು ಬೇಯಿಸಿದ ಮಾಂಸವೂ ಸಿಕ್ಕಿದ್ದು, ದುಷ್ಕರ್ಮಿಗಳು ಅಲ್ಲಿಯೇ ಮಾಂಸ ಬೇಯಿಸಿ, ತಿನ್ನಲು ಅಣಿಯಾಗಿದ್ದರು ಎಂದು ಹೇಳಲಾಗುತ್ತಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಸಂಖ್ಯೆ:ಮೈನಪ್ರಾ/ವಿತ–2/ಪಿ.ಆರ್.424/2021–22
ದಿನಾಂಕ:28–03–2022

ಪತ್ರಿಕಾ ಪ್ರಕಟಣೆ

ಶ್ರೀ ಕೆ.ವಿಜಯಕುಮಾರ್ ಬಿನ್ ಪಾಪಣ್ಣ ಶೆಟ್ಟಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮಂಡಿಪೇಟೆ ಬ್ರಾಂಚ್, ದಾವಣಗೆರೆ ಇವರಿಗೆ ಜೋಗಾದಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ) 'ಸಿ' ಬ್ಲಾಕ್ ಬಡಾವಣೆಯಲ್ಲಿನ ಅಳತೆ 9X12 ಮೀಟರ್, ನಿ.ಸಂ.271, ದಿ: 29–05–1997 ರಂದು ಮಂಜೂರಾಗಿದ್ದು, ದಿನಾಂಕ: 01–02–2022 ರಂದು ಸ್ವಾಧೀನ ಪಡೆದು, ನಂತರ ಪ್ರಾಧಿಕಾರದಿಂದ ಕ್ರಯಪತ್ರವನ್ನು ಪಡೆದು ದಿನಾಂಕ : 09–06–2006 ರಂದು ನೋಂದಾಯಿಸಿರುತ್ತಾರೆ. ನಂತರ ವಿಲ್ ಯಾನೇ ಮರಣ ಶಾಸನ ಪತ್ರವನ್ನು ತಮ್ಮ ಸಹೋದರಿಯಾದ ಶ್ರೀಮತಿ. ನಾಗಲಕ್ಷ್ಮಮ್ಮ ಬಿನ್ ಕೆ.ಪಾಪಣ್ಣ ಶೆಟ್ಟಿ ರವರಿಗೆ ಉಪ–ನೋಂದಣಾಧಿಕಾರಿ, ದಾವಣಗೆರೆ ರವರ ಕಛೇರಿಯಲ್ಲಿ 3ನೇ ಪುಸ್ತಕದ ದಸ್ತಾವೇಜು ನಂ. DVG–3–00234–2005–06 ದಿನಾಂಕ: 10–03–2006 ರಂದು ನೋಂದಾಯಿಸಿರುತ್ತಾರೆ. ಸದರಿಯವರು ದಿನಾಂಕ: 04–02–2011 ರಂದು ಮರಣ ಹೊಂದಿರುವ ಬಗ್ಗೆ ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಪುರಸಭಾ ಕಾರ್ಯಾಲಯ, ಪಾವಗಡ ರವರಿಂದ ದಿನಾಂಕ: 20–01–2014 ರಂದು ಪಡೆದಿರುವ ಮರಣ ಪ್ರಮಾಣ ಪತ್ರ ಹಾಗೂ ತಹಸೀಲ್ದಾರ್, ದಾವಣಗೆರೆ ತಾಲ್ಲೂಕು ರವರು ದಿನಾಂಕ: 23–04–2008 ರಂದು ನೀಡಿರುವ ದೃಢೀಕರಣ ಪತ್ರ ಸಂಖ್ಯೆ ಕುಜೇಸವಿವ/ಕಸಬ/ 158/ 2008–2009 ರಂತೆ 1. ಶ್ರೀಮತಿ ರೇಣುಕಾ.ಕೆ.ವಿ (ಪತ್ನಿ) ಮತ್ತು 2. ಶ್ರೀಮತಿ ಶೃತಿ.ಕೆ.ವಿ (ಮಗಳು) ಇವರುಗಳ ಹೆಸರುಗಳುಳ್ಳ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ಸಲ್ಲಿಸಿ ಲೇಟ್ ಕೆ.ವಿಜಯಕುಮಾರ್ ರವರ ಪತ್ನಿ ಮತ್ತು ಮಗಳು ಇವರುಗಳು ನಮ್ಮ ಹೆಸರಿಗೆ ಪೌತಿ ರೀತ್ಯಾ ಜಂಟಿ ಖಾತಾ ವರ್ಗಾವಣೆ ನೀಡುವಂತೆ ಕೋರಿ ದಿನಾಂಕ: 28–12–2021 ರಂದು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಮೂಲ ಮಂಜೂರಾತಿದಾರರಾದ ಶ್ರೀ. ಕೆ.ವಿಜಯಕುಮಾರ್ ರವರು ಮರಣ ಹೊಂದಿರುವುದರಿಂದ ಇವರ ಪತ್ನಿಯಾದ ಶ್ರೀಮತಿ ರೇಣುಕಾ.ಕೆ.ವಿ. ಮತ್ತು ಮಗಳಾದ ಶ್ರೀಮತಿ ಶೃತಿ.ಕೆ.ವಿ ಮನೆ ನಂ.944, 4ನೇ ಮೇನ್, ಶಿವಕುಮಾರ್ ಸ್ವಾಮಿ ಬಡಾವಣೆ ದಾವಣಗೆರೆ ರವರು ಪೌತಿ ರೀತ್ಯಾ ಜಂಟಿ ಖಾತಾ ವರ್ಗಾವಣೆ ಕೋರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ನಿವೇಶನವನ್ನು ಜಂಟಿ ಖಾತಾ ವರ್ಗಾವಣೆ ಕೋರಿರುವ ಬಗ್ಗೆ, ಈ ಪ್ರಕಟಣೆ ಹೊರಡಿಸಿದ ಹದಿನೈದು ದಿನಗಳೊಳಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ಸಲ್ಲಿಸುವುದು. ನಿಗಧಿತ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ, ಆಕ್ಷೇಪಣೆ ಏನೂ ಇಲ್ಲವೆಂದು ಭಾವಿಸಿ ಕಾನೂನಿನ ರೀತ್ಯಾ ಮುಂದಿನ ಕ್ರಮವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್, ವಲಯ ಕಛೇರಿ–2,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

(ಕರ್ನಾಟಕ ಸರ್ಕಾರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಹಾಸನ ವಿಭಾಗ, ಹಾಸನ,
Ph:08172-261640 Email ID:eerdwsd.hsn@gmail.com

ಏಕ ಹಾಗೂ ದ್ವಿ–ಲಕೋಟೆ ಪದ್ಧತಿಯಲ್ಲಿಅಲ್ಪಾವದಿ ಟೆಂಡರ್
ಪ್ರಕಟಣೆ: 05/2021–22 ದಿನಾಂಕ: 25–05–2022

ಕರ್ನಾಟಕ ಸರ್ಕಾರದರಾಜ್ಯಪಾಲರ ಪರವಾಗಿಕಾರ್ಯಪಾಲಕಇಂಜಿನಿಯರ್, ಗ್ರಾಮೀಣಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನರವರಿಂದ 2022–23ನೇ ಸಾಲಿನಲ್ಲಿ JJM ಯೋಜನೆಯಡಿ ಅನುಮೋದನೆಯಾಗಿರುವ ಹೊಳೇನರಸೀಪುರ ಮತ್ತು ಚನ್ನರಾಯಪಟ್ಟಣ ತಾಲ್ಲೂಕಿನ ಕಾಮಗಾರಿಗಳಿಗೆ ಈ ಕೆಳಕಂಡಂತೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಏಕ–ಲಕೋಟೆ ಪದ್ಧತಿ ಕಾಮಗಾರಿಗಳು ಹೊಳೇನರಸೀಪುರ ತಾಲ್ಲೂಕಿನ 2 ಕಾಮಗಾರಿ(ಪ.ಜಾ ಮತ್ತು ಪ.ಪಂ) ದ್ವಿ–ಲಕೋಟೆ ಪದ್ಧತಿ ಕಾಮಗಾರಿಗಳು ಚನ್ನರಾಯಪಟ್ಟಣ ತಾಲ್ಲೂಕಿನ 3 ಕಾಮಗಾರಿಗಳು,(ಸಾಮಾನ್ಯ ವರ್ಗ) ಸದರಿ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕಟೆಂಡರ್‌ನ್ನು e-procurement portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು ದಿನಾಂಕ: 25–05–2022ರ ಸಂಜೆ 5.30 ರಿಂದ www.e-procurement.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 31–05–2022 ರವರೆ ಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 02–06–2022 ರಂದು ಪೂರ್ವಾಹ್ನ 11.00 ಗಂಟೆಗೆ ಈ ಕಛೇರಿಯಲ್ಲಿ ಸದರಿಯೋಜನೆಯ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸ್ಥಳ : ಕಾರ್ಯಪಾಲಕಅಭಿಯಂತರರು, ಗ್ರಾಮೀಣಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾಸನ ಜಿಲ್ಲಾ ಪಂಚಾಯತ್‌ಕಟ್ಟಡ, ಎನ್.ಆರ್ ವೃತ್ತ ಹಾಸನ. ದಿನಾಂಕ: 03–06–2022 ರಂದು ಬೆಳಿಗ್ಗೆ 11–00 ಘಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ: 06–06–2022 ರ ಬೆಳಿಗ್ಗೆ 11.00 ಗಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿಉಂಟಾದಲ್ಲಿ ಸದರಿತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾಯಾವುದಾದರೂಒಂದುಟೆಂಡರ್‌ನ್ನುಯಾವುದೇಕಾರಣ ನೀಡದೇತಿರಸ್ಕರಿಸುವ ಹಕ್ಕನ್ನುಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/152/2022–23